

01-15, ಜುಲೈ 2011
KARKAN/2007/20389
12-00
ಪ್ರಸ್ತುತ
ಪಾಕ್ಷಿಕ
ಮೂರೇ ವರ್ಷಗಳಲ್ಲಿ ಬೆಳೆದಿದೆ ಆನೆ ಪ್ರಮಾಣದಷ್ಟು
ಭ್ರಷ್ಟಾಚಾರ
ನಂ. 1

ಸತ್ಯಸುದ್ದಿಯ

# ಪ್ರಸ್ತುತ

ಪಾಕ್ಷಿಕ

PRASTHUTHA KANNADA FORTNIGHTLY

ಜುಲೈ 1-15, 2011   ಸಂಪುಟ : 5   ಸಂಚಿಕೆ : 12   ಬೆಲೆ : 12.00   ಪುಟ : 60   ಮಂಗಳೂರು




## ಅಂತರಾಳದಲ್ಲಿ...

>>


### ಅಂಕಣಗಳು

| | |
|---|---|
| ಮೀಟುಗೋಲು | 05 |
| ಪ್ರತಿಕ್ರಿಯೆ | 04 |
| ಸಹಾಬಿಗಳೊಂದಿಗೆ | 24 |
| ರಾಷ್ಟ್ರೀಯ | 56 |
| ಮಿನಿಕಥೆ: | 20 |
| ಸುದ್ದಿಸಮುಚ್ಚಯ | 48 |
| ಇಂಚರ | 34 |
| ಇನಿದನಿ | 37 |

### ಲೇಖನಗಳು

| | |
|---|---|
| ಹಸುಳೆಯನ್ನೇ ಕೊಂದರು!... | 13 |
| ಕೆಎಫ್‌ಡಿಯ ಬೆನ್ನುಬಿದ್ದ ಸರಕಾರ | 16 |
| ತರ್ಕಕ್ಕೆ ನಿಲುಕದ ಮಾದರಿ ಟರ್ಕಿ | 19 |
| ದಿಕ್ಕೆಟ್ಟ ಜನಾಂದೋಲನ | 22 |
| ಆಣೆ ಪ್ರಮಾಣದ ರಾಜಕೀಯ | 30 |

### ವಿಶೇಷ ಲೇಖನ

| | |
|---|---|
| ಭ್ರಷ್ಟಾಚಾರ: ಈಗ ರಾಜ್ಯ ನಂ.1 | 08 |




ಭ್ರಷ್ಟಾಚಾರದಲ್ಲಿ ಈಗ ಕರ್ನಾಟಕ ರಾಜ್ಯಕ್ಕೆ ನಂ.1 ಸ್ಥಾನ- 08



ಬಿಹಾರದ ಫೋರ್ಬಸ್‌ಗಂಜ್‌ನಲ್ಲಿ ಪೊಲೀಸರು ಶಾಂತಿ ಕಾಪಾಡಲು ಹಸುಳೆಯನ್ನೇ ಕೊಂದರು! -13



ಕೆಎಫ್‌ಡಿಯ ಬೆನ್ನು ಬಿದ್ದ ರಾಜ್ಯ ಸರಕಾರ-22



ತಮ್ಮ ತಪ್ಪುಗಳನ್ನು ಮರೆ ಮಾಚಲು ರಾಜ್ಯದಲ್ಲಿ 'ಆಣೆ ಪ್ರಮಾಣದ ರಾಜಕೀಯ' -30


ಪ್ರಧಾನ ಸಂಪಾದಕರು

ಕೆ.ಎಂ. ಶರೀಫ್

ಸಂಪಾದಕರು

ಫಯಾರುಖ್ ಎನ್.

ಸಹ ಸಂಪಾದಕರು

ಶಬೀರ್ ಕೆ.

ಸಂಪಾದಕ ಮಂಡಳಿ:

ಇಲ್ಯಾಸ್ ಮುಹಮ್ಮದ್.   ಅಬ್ದುಲ್ ರಝಾಕ್ ಕೆಮ್ಮಾರ.

ಅಸ್ಲಮ್ ಹಸನ್.   ಅಬ್ದುಲ್ ಹಮೀದ್ ಕೆ.ವೈ.

ಶಾಹಿದಾ ಎ.,   ಇಮ್ತಿಯಾಝ್.   ಶಾಹಿದಾ ತಸ್ನೀಮ್.

ಗ್ರಾಫಿಕ್ ಡಿಸೈನರ್

ಎಂ. ಶಬೀರ್

ವ್ಯವಸ್ಥಾಪಕರು

ಅಬ್ದುಲ್ ಖಾದರ್ ಪಿ.



PRASTHUTHA

KANNADA FORTNIGHTLY

Media House

10-23-1009(1), Dr.Ansari Road,

Near Yatheem Khana Hall

Bunder, Mangalore-575001

Ph: 0824-2410454 Fax:0824-2410454

e-mail : prasthutha2007@gmail.com

Edited, Printed and published by K.M. Shareef, 10-23-1009(1) Dr.Ansari Road, Bunder, Mangalore-575001, Owned by Sthuthi Publications & Information Trust, 10-23-1009(1) Dr.Ansari Road, Bunder, Mangalore-575001, Tel: 0824-2410454, Email- prasthutha2007@gmail.com Printed at Maadhyama communication Ltd, 127, Industrial Area, Bykampady, Mangalore-11.

## ಸಂಪಾದಕೀಯ ಉತ್ತಮವಾಗಿತ್ತು

ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'ಕಲ್ಯಾಣಕ್ಕೆ ಹೊರಟವರು' ಸಂಪಾದಕೀಯ ಬರಹವು ಬಿಜೆಪಿ ಸರಕಾರವು ನಡೆಸುತ್ತಿರುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತವನ್ನು ಬಹಿರಂಗಪಡಿಸಿದೆ.

ತಾವು ಈ ರಾಜ್ಯದ ಕಲ್ಯಾಣ ಮಾಡುತ್ತೇವೆ ಎಂದು ಹೇಳುತ್ತಾ, ಸರಕಾರದ ಖಜಾನೆಯನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿದ್ದಾರೆ. ಚುನಾವಣೆಯ ಸಂದರ್ಭದಲ್ಲಿ ತಾವು ಸಮಾಜ ಸೇವಕರು, ಜನತೆಯ ಸೇವೆ ಮಾಡಲು ಅವಕಾಶ ಮಾಡಿ ಕೊಡಿ ಎಂದು ಮೊಸಳೆ ಕಣ್ಣೀರು ಸುರಿಸುತ್ತಾರೆ. ಚುನಾವಣೆಯಲ್ಲಿ ಗೆದ್ದ ಬಳಿಕ ಮತ ನೀಡಿ ಗೆಲ್ಲಿಸಿದ ಜನತೆಯನ್ನು ಮರೆತು ತಮಗೆ ಬೇಕಾದ ಹಾಗೆ ಕಾಯ್ದೆ ರೂಪಿಸುತ್ತಾ ತಮ್ಮ ಜೇಬನ್ನು ತುಂಬಿಸಿಕೊಳ್ಳುತ್ತಾರೆ.

ಕರ್ನಾಟಕದ ಹೆಚ್ಚಿನ ಶಾಸಕರು ನಿಗದಿತ ವೇತನವನ್ನು ಪಡೆಯುತ್ತಿದ್ದರೂ ಕೋಟ್ಯಾಧಿಪತಿಗಳಾಗಿ ಮೆರೆಯುತ್ತಿದ್ದಾರೆ. ಇವರು ಜನತೆಯ ಕಲ್ಯಾಣ ಮಾಡುವುದಕ್ಕಿಂತಲೂ ಹೆಚ್ಚು ಸ್ವತಃ ತಮ್ಮ ಕಲ್ಯಾಣ ಮಾಡುವುದರಲ್ಲಿಯೇ ತೊಡಗಿದ್ದಾರೆ ಎಂಬುದು ಸ್ಪಷ್ಟ ಮಾತುಗಳಲ್ಲಿ ಹೇಳಬಹುದು.

ರಾಯನ್ ಫೆರ್ನಾಂಡಿಸ್, ಪಕ್ಷಿಕೆರೆ

## ಬದಲಾಗುತ್ತಿರುವ ಮಾಧ್ಯಮದ ಧ್ಯೇಯ

'ಮಾಧ್ಯಮ' ಎನ್ನುವುದು ಒಂದು ದೇಶದ ಬಲಿಷ್ಠ ಅಸ್ತ್ರ. ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕವಾಗಿ ಒಂದು ದೇಶವನ್ನು ಪ್ರಗತಿಗೊಳಿಸುವಲ್ಲಿ, ಸಮಾಜದ ಆಗುಹೋಗುಗಳನ್ನು ನಿಖರವಾಗಿ ಜನತೆಗೆ ತಿಳಿಸುವ ಜವಾಬ್ದಾರಿ ಮಾಧ್ಯಮಕ್ಕಿದೆ.

ಆದರೆ ಇಂದಿನ ದಿನಗಳಲ್ಲಿ ಮಾಧ್ಯಮಗಳು ತಮ್ಮ ಮುಖ್ಯ ಜವಾಬ್ದಾರಿ ಮರೆತಂತೆ ವರ್ತಿಸುತ್ತಿವೆ. ಅದು ತನ್ನನ್ನು ಒಂದು ನಿರ್ದಿಷ್ಟ ಧರ್ಮಕ್ಕೆ ಸೀಮಿತಗೊಳಿಸಿದೆ. ಜ್ಯೋತಿಷ್ಯ, ವಾಸ್ತು ಮುಂತಾದ ಕಾರ್ಯಕ್ರಮಗಳನ್ನು ಪ್ರಸಾರ ಮಾಡುವುದರ ಮೂಲಕ ಮೂಢನಂಬಿಕೆಯನ್ನೂ ಅವು ಪ್ರಚಾರಪಡಿಸುತ್ತಿವೆ. ಪತ್ರಿಕೆಗಳ ನೀತಿ-ನಿಯಮ, ಧ್ಯೇಯಗಳಿಗೂ ಬದಲಾವಣೆಯ ಗಾಳಿ ಬೀಸಿದೆ.




ಮಾಧ್ಯಮ ಎಂದರೆ ಒಂದು ಕ್ರಾಂತಿ. ಅದು ಕೇವಲ ಒಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾದುದಲ್ಲ. ಪತ್ರಿಕೆಗಳು ಇದನ್ನು ಮನಗಂಡು ಕಾರ್ಯಾಚರಿಸಬೇಕಾಗಿದೆ.

ಸಫ್ವಾರ್ಝ್, ಬಿ.ಸಿ.ರೋಡ್

## ಫ್ರೀಡಂ ವಿಶೇಷಾಂಕಕ್ಕೆ ಲೇಖನ ಆಹ್ವಾನ

ಆಗಸ್ಟ್ 15ರ ಸ್ವಾತಂತ್ರ್ಯೋತ್ಸವದ ಅಂಗವಾಗಿ ಪ್ರಸ್ತುತ ಪಾಕ್ಷಿಕವು 'ಫ್ರೀಡಂ ವಿಶೇಷಾಂಕ'ವನ್ನು ಹೊರತರುತ್ತಿದೆ. ಸ್ವಾತಂತ್ರ್ಯ ವಿಚಾರಕ್ಕೆ ಸಂಬಂಧಿಸಿದ ಲೇಖನ, ಕವನ, ಕಥೆ, ಅನಿಸಿಕೆ, ವಿಶ್ಲೇಷಣೆಗಳನ್ನು ಪ್ರಸ್ತುತ ವಿಳಾಸಕ್ಕೆ ಕಳುಹಿಸಬಹುದು. ದೇಶದ ಪ್ರಸಕ್ತ ಸ್ಥಿತಿಗತಿ, ರಾಜಕೀಯ ವಿದ್ಯಮಾನಗಳು, ಜನಾಂದೋಲನದ ದುರ್ಬಳಕೆ, ದೇಶ ನಿರ್ಮಾಣದಲ್ಲಿ ವಿದ್ಯಾರ್ಥಿಗಳು, ಸಾಂವಿಧಾನಿಕ ಬಿಕ್ಕಟ್ಟುಗಳು, ಜಾತಿ ತಾರತಮ್ಯ, ದೇಶದ ಭವಿಷ್ಯ ಇತ್ಯಾದಿ ವಿಚಾರಗಳ ಕುರಿತು ಲೇಖನಗಳನ್ನು ಕಳುಹಿಸಬಹುದು. ಲೇಖನಗಳನ್ನು ಜುಲೈ 10ರೊಳಗೆ ಕಚೇರಿಗೆ ತಲುಪುವಂತೆ ಕಳುಹಿಸಬೇಕು.

**ಪ್ರಸ್ತುತ ಪಾಕ್ಷಿಕ**
**ಡಿ.ನಂ.10-23-1009(1)**
**ಮೀಡಿಯಾ ಹೌಸ್, ಡಾ.ಅನ್ಸಾರಿ ರಸ್ತೆ**
**ಯತೀಮ್ ಖಾನಾ ಹಾಲ್ ಬಳಿ, ಬಂದರ್**
**ಮಂಗಳೂರು-1**
**ಈ ಮೇಲ್ ವಿಳಾಸ:**
prasthutha2007@gmail.com

## ಬೀದಿಬದಿ ವ್ಯಾಪಾರಿಗಳ ತೆರವು ಖಂಡನಾರ್ಹ

ಮಂಗಳೂರು ನಗರದ ಬೀದಿಬದಿಯಲ್ಲಿ ವ್ಯಾಪಾರ ನಡೆಸಿ ಜೀವನ ಸಾಗಿಸುತ್ತಿದ್ದವರನ್ನು ಮಹಾನಗರ ಪಾಲಿಕೆಯು ಎತ್ತಂಗಡಿ ಮಾಡಿ ಅವರ ಮೇಲೆ ಪ್ರಹಾರ ನಡೆಸುತ್ತಿದೆ. ಬೀದಿಬದಿ ವ್ಯಾಪಾರಗಳನ್ನು ಆಡಳಿತ ವರ್ಗವು ಬಹಳ ಅಮಾನವೀಯವಾಗಿ ತೆರವುಗೊಳಿಸುತ್ತಿರುವುದು ಖಂಡನಾರ್ಹ.

ಕಾರ್ಮಿಕ ವರ್ಗವನ್ನು ತುಳಿಯುತ್ತಾ, ಶ್ರೀಮಂತ ವರ್ಗದವರಿಗೆ ತಮ್ಮ ಅಭಯಹಸ್ತವನ್ನು ಚಾಚುತ್ತಿರುವ ಈ ಆಡಳಿತ ವರ್ಗದ ವಿರುದ್ಧ ಪ್ರಬಲವಾದ ಹೋರಾಟದ ಅಗತ್ಯವಿದೆ.

ಮುಹಮ್ಮದ್ ಇರ್ಷಾದ್, ವಿಜಯಾ ಕಾಲೇಜು ಮುಲ್ಕಿ

## —— ಸಂಪಾದಕೀಯ ——

# ರೈತನಿಂದ ಮಂಜುನಾಥನವರೆಗೆ

2008ರ ಮೇ 30ರಂದು ಯಡಿಯೂರಪ್ಪ ಅವರು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದಾಗ ಅಚ್ಚರಿಯ ಸಂಗತಿಯೊಂದು ನಡೆದಿತ್ತು. ಅದು 'ರೈತ'ರ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಿದ ಸಂದರ್ಭ. ಮಾಧ್ಯಮಗಳಲ್ಲಿ ಪ್ರಮಾಣವಚನ ಸ್ವೀಕರಿಸುತ್ತಿರುವ ಮುಖ್ಯಮಂತ್ರಿಯ ಹೆಗಲಿನಲ್ಲಿದ್ದ ಹಸಿರು ಶಾಲು ಮತ್ತು ನಾಲಗೆಯಲ್ಲಿ ಉಳಿಯುತ್ತಿದ್ದ ರೈತನ ಹೆಸರುಗಳೇ ಹೈಲೈಟ್ ಆದವು. ರೈತಪರ ಹೋರಾಟದಲ್ಲಿ ತೊಡಗಿಸಿಕೊಂಡೇ ರಾಜಕೀಯಕ್ಕೆ ಧುಮುಕಿದ್ದ ಯಡಿಯೂರಪ್ಪನವರು ಅದೇ ಹಾದಿಯಲ್ಲಿ ಆಡಳಿತ ನಡೆಸಬಹುದು ಎಂದು ಜನರು ಭಾವಿಸಿದ್ದರು. ಮುಖ್ಯಮಂತ್ರಿಯ ಆರಂಭದ ನಡೆಯು ಜನರನ್ನು ಎಷ್ಟು ಮರುಳಾಗಿಸಿತ್ತು ಎಂದರೆ ಸ್ವತಹ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರೇ ಯಡಿಯೂರಪ್ಪನವರನ್ನು ಆ ಕಾರಣಕ್ಕಾಗಿ ಹಾರೈಸಿದ್ದರು.

2008 ಜೂನ್ 10ರಂದು ಈ ಎಲ್ಲ ಕುತೂಹಲ, ನಿರೀಕ್ಷೆಗಳಿಗೆ ತೆರೆಬಿತ್ತು. ಅದು ಹಾವೇರಿಯಲ್ಲಿ ಪ್ರತಿಭಟನಾ ನಿರಂತ ರೈತರ ಮೇಲೆ ಪೊಲೀಸರು ಗೋಲಿಬಾರ್ ನಡೆಸಿದ ಸಂದರ್ಭ. ಸಿದ್ಧಲಿಂಗಪ್ಪ ಚೂರಿ ಎಂಬ ರೈತ ಪೊಲೀಸರ ಗುಂಡೇಟಿಗೆ ನಡುಬೀದಿಯಲ್ಲೇ ಪ್ರಾಣತೆತ್ತ. ಇದು ನಡೆದಿರುವುದು ಪ್ರಮಾಣವಚನ ಸ್ವೀಕರಿಸಿದ 10 ದಿನಗಳೊಳಗಾಗಿ.

ಅಂದು ಮೊದಲು ಪ್ರಮಾಣವಚನ ಸ್ವೀಕರಿಸಿ ಅನಂತರ ವಚನಭಂಗ ಮಾಡಿದರು. ಈಗ ಮೂರು ವರ್ಷಗಳಲ್ಲಿ 'ಭಂಗ'ಗಳನ್ನೇ ಮಾಡಿ ಪ್ರಮಾಣಕ್ಕೆ ಸಿದ್ಧರಾದರು. ಅರ್ಥಾತ್ ಮಂಜುನಾಥನ ಸನ್ನಿಧಿಯಲ್ಲಿ ತಾನೇನೂ ಮಾಡಿಲ್ಲ ಎಂದು ಯಡಿಯೂರಪ್ಪ ಧರ್ಮಸ್ಥಳದಲ್ಲಿ ಆಣೆ ಪ್ರಮಾಣ ಮಾಡಲು ಮುಂದಾದರು. ರೈತನಿಂದ ಮಂಜುನಾಥನವರೆಗೆ ಆಡಿದ್ದು, ಮಾಡಿದ್ದು ಎಲ್ಲವೂ ಅಕ್ರಮ, ಸುಳ್ಳು. ಈ ಕಾರಣದಿಂದಲೇ ಇಂದು ಕರ್ನಾಟಕ ರಾಜ್ಯ ದೇಶದಲ್ಲಿ ಭ್ರಷ್ಟಾಚಾರದಲ್ಲಿ ನಂ.1 ಸ್ಥಾನದಲ್ಲಿರುವುದು.

ರೈತರಿಂದ ಕಬಳಿಸಿಕೊಂಡ 500 ಎಕರೆ ಪ್ರದೇಶವು ನೈಸ್ ಕಂಪೆನಿಯ ಪಾಲಾಗಬೇಕೆಂದರೆ ಅದಕ್ಕೆ ಕಾರಣ ಕರ್ನಾಟಕ ಸರಕಾರ. ಸುಪ್ರೀಮ್ ಕೋರ್ಟ್‌ನಲ್ಲಿ ನಮ್ಮ ರೈತರ ಪರವಾಗಿ ಸರಕಾರವು ಸಮರ್ಪಕವಾಗಿ ವಾದಮಂಡಿಸಲಿಲ್ಲ. ಮಾತ್ರವಲ್ಲ, ನೈಸ್ ಕಂಪೆನಿಯ ಮಾಲಕ ಖೇಣಿಯು ತನಗೆ ಬೇಕಾದ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳಲು ಸಾಧ್ಯವಾಗಿರುವುದು ರಾಜ್ಯ ಸರಕಾರದ ಪಾಲುದಾರಿಕೆಯಿಂದಲೇ. ಇದರಿಂದಾಗಿ ಸುಪ್ರೀಮ್ ಕೋರ್ಟ್‌ನಲ್ಲೂ ರೈತರಿಗೆ ನ್ಯಾಯ ದೊರೆಯಲಿಲ್ಲ.

ಇದೀಗ ಕರ್ನಾಟಕದ ರೈತರು ಮತ್ತಷ್ಟು ಭೂಮಿ ಕಳೆದುಕೊಂಡು ಬೀದಿಪಾಲಾಗುವ ಅಂಚಿನಲ್ಲಿದ್ದಾರೆ. ಇದಕ್ಕೆ ಕಾರಣ ರಾಜ್ಯದ ಗದಗ ಜಿಲ್ಲೆಗೆ ಹೊಸದಾಗಿ ವಕ್ಕರಿಸುತ್ತಿರುವ ಪೊಸ್ಕೊ ಎಂಬ ದೈತ್ಯ ಸ್ಟೀಲ್ ಕಂಪೆನಿ. ಈಗಾಗಲೇ ಈ ಕಂಪೆನಿಯ ವಿರುದ್ಧ ಒರಿಸ್ಸಾದಲ್ಲಿ ಭಾರೀ ಜನಹೋರಾಟವೇ ನಡೆಯುತ್ತಿದೆ. ಅಲ್ಲಿನ ಆದಿವಾಸಿ ಜನತೆಯನ್ನು ನಿರಾಶ್ರಿತರನ್ನಾಗಿಸಲಿರುವ ಪೊಸ್ಕೊ ಕಂಪೆನಿಯನ್ನು ವಿರೋಧಿಸಿ ಜನರು ಕಳೆದ ಎರಡು ತಿಂಗಳಿನಿಂದ ಹೋರಾಟ ನಡೆಸುತ್ತಿದ್ದಾರೆ. ಈ ಮಧ್ಯೆ ಇದೇ ಕಂಪೆನಿ ರಾಜ್ಯಕ್ಕೂ ವಕ್ಕರಿಸುತ್ತಿದ್ದರೂ ರೈತರನ್ನು ಕಾಪಾಡಬೇಕಾದ ಮುಖ್ಯಮಂತ್ರಿ ಯಡಿಯೂರಪ್ಪ, ಜಾಗತಿಕ ಹೂಡಿಕೆದಾರರ ಸಮಾವೇಶ ಏರ್ಪಡಿಸುವುದರಲ್ಲೇ ತಲ್ಲೀನರಾಗಿದ್ದಾರೆ.

ದಕ್ಷಿಣ ಕೊರಿಯ ಮೂಲದ ಪೊಹಂಗ್ ಸ್ಟೀಲ್ ಕಂಪೆನಿ (ಪೊಸ್ಕೊ) ಜಗತ್ತಿನಲ್ಲೇ ಮೂರನೆ ಅತಿದೊಡ್ಡ ಸ್ಟೀಲ್ ಕಂಪನಿ. 2005ರಲ್ಲಿ ಇದು ತನ್ನ ಯೋಜನೆಯನ್ನು ಬ್ರೆಜಿಲ್‌ನಲ್ಲಿ ಕಾರ್ಯಗತಗೊಳಿಸಲು ಯತ್ನಿಸಿತಾದರೂ ಅಲ್ಲಿನ ಸರಕಾರವು ಇದರ ಜನವಿರೋಧಿ ಬೇಡಿಕೆಯನ್ನು ಒಪ್ಪಿಕೊಳ್ಳಲು ಸಿದ್ಧವಿಲ್ಲದ ಕಾರಣದಿಂದಾಗಿ ಇದೀಗ ಕಂಪನಿಯು ಭಾರತವನ್ನು ವಕ್ಕರಿಸಿದೆ. ಕರ್ನಾಟಕದಲ್ಲಿ ಇದು ತನ್ನ ಸ್ಟೀಲ್ ಕಂಪನಿ ಆರಂಭಿಸಲು ಮುಂದಾಗಿದ್ದು, ಸರಕಾರಕ್ಕೆ ರೈತರ ಆಶೋತ್ತರಗಳು ಅಷ್ಟೇನೂ ಮುಖ್ಯವಲ್ಲದ ಹಿನ್ನೆಲೆಯಲ್ಲಿ ಕಂಪನಿಯು ಯೋಜನೆ ಆರಂಭಿಸುವುದಕ್ಕೆ ಆಡಳಿತವ್ಯವಸ್ಥೆಯಿಂದ ಯಾವುದೇ ಅಡ್ಡಿ ಎದುರಾಗದು.

ಇದು ಕಂಪನಿಗಳ ವಿಚಾರವಾದರೆ ಇನ್ನು ಸೈಟು, ಭೂಕಬಳಿಕೆ ಎಂಬುದು ಯಡಿಯೂರಪ್ಪ ಮತ್ತು ಅವರ ಮಕ್ಕಳ ಉದ್ಯೋಗವಾದಂತಿದೆ. ನಿತ್ಯವೂ ಒಂದಲ್ಲ ಒಂದು ಭೂಹಗರಣಗಳು ಬೆಳಕಿಗೆ ಬರುತ್ತಲೇ ಇವೆ. ಇಂತಹ ಹೊತ್ತಿನಲ್ಲಿ ಯಾವುದೇ ಆಣೆ ಪ್ರಮಾಣವು ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ 'ಪ್ರಾಮಾಣಿಕ, ದಕ್ಷ' ಎಂಬ ಪ್ರಮಾಣಪತ್ರವನ್ನು ನೀಡದು. ಅಂತಹ ಪ್ರಮಾಣ ಪತ್ರವನ್ನು ಜನಪರ ಆಡಳಿತದ ಮೂಲಕ ಮಾತ್ರ ಪಡೆಯಲು ಸಾಧ್ಯ. ಹೇಗಾದರೂ ಮಾಡಿ 'ದಕ್ಷ ಆಡಳಿತ' ಸರ್ಟಿಫಿಕೇಟ್ ಪಡೆಯುವುದೆಂದರೆ ಅದು ಡಿನೋಟಿಫಿಕೇಶನ್ ನೀಡಿದಷ್ಟು ಸುಲಭವಲ್ಲ.

## ರಾಮ್‌ದೇವ್ ಸತ್ಯಾಗ್ರಹ: ಅಧಿಕಾರಕ್ಕೇರಲು ಬಿಜೆಪಿಯ ತಂತ್ರ

ಭ್ರಷ್ಟಾಚಾರ ವಿರೋಧಿ ಸತ್ಯಾಗ್ರಹ ನೆಪದಲ್ಲಿ ರಾಷ್ಟ್ರದಲ್ಲಿ ಬಿಜೆಪಿ ಪರ ಲಾಬಿಗೆ ಮುಂದಾದ ಬಾಬಾ ರಾಮ್‌ದೇವ್‌ನ್ನು ಭ್ರಷ್ಟಾಚಾರ ವಿರೋಧಿ ವ್ಯಕ್ತಿ ಎನ್ನಲು ಅಸಾಧ್ಯ. ಅವರ ಮೊದಲ ದಿನದ ಸತ್ಯಾಗ್ರಹದಲ್ಲೇ ಆರೆಸ್ಸೆಸ್ ಮತ್ತು ಬಾಬರಿ ಮಸೀದಿ ಧ್ವಂಸ ಪ್ರಕರಣದ ಆರೋಪಿ ಸಾಧ್ವಿಯೊಬ್ಬಳು ಭಾಗವಹಿಸಿರುವುದನ್ನು ಗಮನಿಸಿದರೆ 'ಬಾಬಾ'ನ ಮೂಲಕ ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿಯಲು ಹೊಸ ತಂತ್ರ ರೂಪಿಸಿದಂತಿತ್ತು.

ಅದೇನೇ ಇರಲಿ ಕರ್ನಾಟಕದ ಅದೆಷ್ಟೋ ಯುವ ಜನತೆಗೆ ಭ್ರಷ್ಟಾಚಾರ ವಿರೋಧಿ ಹೋರಾಟಕ್ಕೆ ಸ್ಫೂರ್ತಿಯಾಗಿದ್ದ ಲೋಕಾಯುಕ್ತ ನ್ಯಾ.ಸಂತೋಷ್ ಹೆಗ್ಡೆ ಮಾತ್ರ ಬಾಬಾನ ಹೋರಾಟವನ್ನು ಬೆಂಬಲಿಸಿ 'ಭ್ರಷ್ಟಾಚಾರ ತೊಲಗಬೇಕಾದರೆ ನಾವು ಬೆಂಬಲ ನೀಡಲೇಬೇಕು' ಎಂದಿದ್ದಾರೆ. ಆದರೆ ಇದೊಂದು ರೀತಿಯ ಅಭಾಸವೇ ಸರಿ. ಏಕೆಂದರೆ ಬಾಬಾ ರಾಮ್‌ದೇವ್ ಬಡವನಲ್ಲ. ಬದಲಾಗಿ ಆತನೊಬ್ಬ ಕೋಟ್ಯಾಧಿಪತಿ. ಆತನಲ್ಲಿ ಎಷ್ಟೊಂದು ಕಪ್ಪು ಹಣದ ರಾಶಿ ಇರಬಹುದು. ಜೊತೆಗೆ ಬಾಬಾ ಹೊಸ ರಾಜಕೀಯ ಪಕ್ಷವನ್ನು ಕಟ್ಟಲು ನಿರ್ಧಾರ ಮಾಡಿದ್ದರು. ಇದನ್ನೆಲ್ಲಾ ಸಂತೋಷ್ ಹೆಗ್ಡೆ ತಿಳಿದಿರಲಿಲ್ಲವೇ?

ಈ ಬಾಬಾನ ಹೋರಾಟವೇನಿದ್ದರೂ ಅದು ಸ್ವಹಿತಾಸಕ್ತಿಗಾಗಿ ಮತ್ತು ಸಂಘಪರಿವಾರದ ಷಡ್ಯಂತ್ರದ ಒಂದು ಭಾಗ ಎಂಬುದನ್ನು ತಿಳಿಯಬೇಕಾಗಿದ್ದ ಹೆಗ್ಡೆಯವರು, ಅದನ್ನು ಬೆಂಬಲಿಸಿರುವುದು ಸರಿಯಲ್ಲ.

ಮುಂದಿನ ದಿನಗಳಲ್ಲಿ ರಾಜ್ಯ ಭ್ರಷ್ಟ ಮುಖ್ಯಮಂತ್ರಿ ಯಡಿಯೂರಪ್ಪ ಅಥವಾ ಗಣಿರೆಡ್ಡಿಗಳು 'ಭ್ರಷ್ಟಾಚಾರ ವಿರೋಧಿ' ಸತ್ಯಾಗ್ರಹ ನಡೆಸಿದರೆ ಸಂತೋಷ್ ಹೆಗ್ಡೆಯವರು ಅವರಿಗೂ ಬೆಂಬಲಿಸುವರೇ? ಇಂತಹ ಹೇಳಿಕೆಗಳನ್ನು ನೀಡುವ ಮೊದಲು ಸಂತೋಷ್ ಹೆಗ್ಡೆಯವರು ಸತ್ಯಾಗ್ರಹ ನಡೆಸುವವರ ಹಿನ್ನೆಲೆಯನ್ನು ಅರಿತುಕೊಳ್ಳುವುದು ಅತೀ ಮುಖ್ಯವಾಗಿದೆ.

ಮುಹಮ್ಮದ್ ಇರ್ಷಾದ್, ವಿಜಯಾ ಕಾಲೇಜು, ಮುಲ್ಕಿ

## ತಪ್ಪು ಮಾಹಿತಿ ನೀಡಿದ ಸರಕಾರದ ವಿರುದ್ಧ ಕ್ರಮ ಅಗತ್ಯ

ಒಂದು ಕಾಲದಲ್ಲಿ ಕೋಲಾರ ಚಿನ್ನದ ಗಣಿಯಲ್ಲಿ ಕೆಲಸ ಮಾಡಿಕೊಂಡು ವಾಸ ಮಾಡುತ್ತಿದ್ದ ಜನಸಾಮಾನ್ಯರು ಇದೀಗ ಮನುಷ್ಯರ ಮಲಹೊರುವ ಕಾಯಕ್ಕಿಳಿಯಬೇಕಾದ ಪರಿಸ್ಥಿತಿ ಬಂದೊದಗಿದೆ.




ಚಿನ್ನದ ಗಣಿಯನ್ನು ಮುಚ್ಚಿದ ಮೇಲೆ ನಿರುದ್ಯೋಗಿಗಳಾದ ಈ ಜನರು, ತಮ್ಮ ಜೀವನಾಶ್ಯಕ್ಕಾಗಿ ಕೊನೆಗೇ ಮಲಹೊರುವ ಕಾಯಕ ಮಾಡಬೇಕಾದ ಅನಿವಾರ್ಯತೆಗೆ ಒಳಗಾದರು. ಈ ಕೆಲಸದಿಂದ ಕಾರ್ಮಿಕರು ಇದೀಗ ವಿವಿಧ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಇವರು ಮಾಡುವ ಕೆಲಸದಿಂದ ಸಿಗುವ ಸಂಬಳ ಇವರ ಜೀವನ ನಿರ್ವಹಣೆಗೆ ಸಾಕಾಗುವುದಿಲ್ಲ. ಇನ್ನು ಔಷಧೋಪಚಾರವನ್ನು ಕಾಯಿಲೆ ಬಿದ್ದರೆ ಮಾಡಿಕೊಳ್ಳುವುದಾದರೂ ಹೇಗೆ?

ಈ ಮಧ್ಯೆ ರಾಜ್ಯದಲ್ಲಿ ಎಲ್ಲಿಯೂ ತಲೆ ಮೇಲೆ ಮಲ ಹೊರುವ ಪದ್ಧತಿ ಚಾಲ್ತಿಯಲ್ಲಿ ಇಲ್ಲ ಎಂಬ ಸುಳ್ಳು ವರದಿಯನ್ನು ಸರಕಾರವು ಹೈಕೋರ್ಟ್‌ಗೆ ವರದಿ ಸಲ್ಲಿಸಿದೆ. ಮಲ ಹೊರುವ ಕಾರ್ಮಿಕರ ಸ್ಪಷ್ಟ ಚಿತ್ರಣವೇ ಜನರ ಕಣ್ಣ ಮುಂದಿರುವಾಗ ಸರಕಾರವು ಈ ವರದಿಯನ್ನು ನೀಡಿದ್ದಾದರೂ ಹೇಗೆ?

ಜನಸಾಮಾನ್ಯರನ್ನು ಈ ರೀತಿ ಶೋಷಣೆಗೆ ಮಾಡುವ ಆಡಳಿತ ವರ್ಗದ ವಿರುದ್ಧ ನ್ಯಾಯಾಂಗವು ತ್ವರಿತವಾಗಿ ಕ್ರಮಕೈಗೊಳ್ಳಲಿ.

ಶಬ್ದರ್ ಅಲಿ, ಬೆಂಗಳೂರು

## ಕಪಟ ಸತ್ಯಾಗ್ರಹ ಬಯಲು ಮಾಡಿದ ಲೇಖನ

ಕಳೆದ ಸಂಚಿಕೆಯಲ್ಲಿ 'ಬಯಲಾದ ಬಣ್ಣ' ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ಲೇಖನ ಬಾಬಾ ರಾಮ್‌ದೇವ್‌ನ ಕಪಟ ಸತ್ಯಾಗ್ರಹವನ್ನು ಬಯಲು ಮಾಡಿದೆ.

ಈ ಹಿಂದೆ ಗೋಧ್ರಾ ಘಟನೆಯನ್ನು ಸೃಷ್ಟಿ ಮಾಡಿ ಗುಜರಾತ್‌ನಲ್ಲಿ ಅಮಾಯಕ ಮುಸ್ಲಿಮರ ನರಮೇಧ ನಡೆಸಿದಂತೆ, ರಾಮ್‌ದೇವ್ ಸತ್ಯಾಗ್ರಹಕ್ಕೆ ಕೂತಿದ್ದ ರಾಮಲೀಲಾವನ್ನೂ ಇನ್ನೊಂದು ಗುಜರಾತ್

## ಬಾಬಾಗಳ ಆಸ್ತಿ ವಿವರ ಬಹಿರಂಗವಾಗಲಿ

ಬಾಬಾ, ಸನ್ಯಾಸಿಗಳೆಂದರೆ ಸರ್ವಸಂಗ ತ್ಯಾಗ ಮಾಡಿದವರು. ಅವರಲ್ಲಿ ಇರುವುದೆಲ್ಲವನ್ನೂ ದಾನ ಮಾಡಿ ಬಡವರ ಸೇವೆ ಮಾಡುವವರು ಎಂಬ ನಂಬಿಕೆ ಅವರನ್ನು ನಂಬಿದ ಭಕ್ತರಲ್ಲಿತ್ತು.

ಆದರೆ ಇತ್ತೀಚಿನ ಕೆಲವು ವಿದ್ಯಮಾನಗಳು ಸ್ವಾಮೀಜಿಗಳ ಮೇಲೆ ಭಕ್ತರು ಇಟ್ಟಿರುವ ನಂಬಿಕೆಯನ್ನು ಸುಳ್ಳಾಗಿಸಿದೆ. ಕೆಲವು ತಿಂಗಳ ಹಿಂದೆ ಮೃತರಾದ ಪುಟ್ಟಪರ್ತಿ ಸತ್ಯಸಾಯಿ ಬಾಬಾರನ್ನು ನಡೆದಾಡುವ ದೇವರೆಂದು ಬಿಂಬಿಸಲಾಗಿತ್ತು. ಆದರೆ ಅವರು ಜನರನ್ನು ಮರಳು ಮಾಡಿದ ಒಂದೊಂದೇ ತಂತ್ರಗಳು ಇದೀಗ ಬಯಲಾಗುತ್ತಿವೆ. ಇದನ್ನು ಹಲವು ಮಾಧ್ಯಮಗಳು ಕೂಡ ಪ್ರಸಾರ ಮಾಡುತ್ತಿವೆ. ಅಂದರೆ ಸ್ವಹಿತಾಸಕ್ತಿಯಿಂದ ಸತ್ಯಸಾಯಿ ಬಾಬಾ ಮಾಡಿಟ್ಟ ಕೋಟ್ಯಂತರ ರೂಪಾಯಿ ಆಸ್ತಿ ಇದೀಗ ಕಂಡವರ ಪಾಲಾಗುತ್ತಿವೆ.

ಕೆಲವು ದಿನಗಳ ಹಿಂದೆ ಯೋಗ ಗುರು ಬಾಬಾ ರಾಮ್‌ದೇವ್ ಕೂಡ ಭ್ರಷ್ಟಾಚಾರ ವಿರುದ್ಧ ಸತ್ಯಾಗ್ರಹ ಹಮ್ಮಿಕೊಂಡರು. ಆ ಬಳಿಕವೇ ಇವರ ಬಳಿ ಕೋಟ್ಯಂತರ ರೂಪಾಯಿ ಬೆಲೆಬಾಳುವ ಆಸ್ತಿ ಇದೆ ಎಂದು ಜನಸಾಮಾನ್ಯರಿಗೆ ತಿಳಿದದ್ದು. ಅಂದರೆ ಈ ಸ್ವಾಮೀಜಿಗಳು ಬಡ ಜನತೆಯನ್ನು ಮರುಳು ಮಾಡಿ, ಶ್ರೀಮಂತರನ್ನು ಕೈವಶ ಮಾಡಿಕೊಳ್ಳುತ್ತಾ ತಮ್ಮ ಖಜಾನೆಯನ್ನು ತುಂಬಿಸಿಕೊಳ್ಳುತ್ತಿದ್ದಾರೆ.

ಜನರನ್ನು ಮರುಳು ಮಾಡಿ ಅಕ್ರಮವಾಗಿ ಸಂಪತ್ತನ್ನು ಗಳಿಸುವ ಇಂತಹ ಸ್ವಾಮೀಜಿಗಳ ವಿರುದ್ಧ ಜಾಗರೂಕರಾಗಿರಬೇಕಾಗಿದೆ.

ದೀಪಕ್, ಮಡಿಕೇರಿ

## ರಾಜಕೀಯದ ಬಗೆಗಿನ ಲೇಖನ ಉತ್ತಮವಾಗಿತ್ತು

ಪ್ರಸ್ತುತ ಪಾಕ್ಷಿಕದಲ್ಲಿ ಪ್ರಕಟವಾದ 'ರಾಜಕೀಯ ಚದುರಂಗ' ಎಂಬ ವಿಶೇಷ ಲೇಖನವು ಪ್ರಚಲಿತ ರಾಜಕೀಯ ವಿದ್ಯಾಮಾನಗಳ ಮೇಲೆ ಬೆಳಕು ಚೆಲ್ಲಿದೆ.

ಅದೇ ರೀತಿ ಶೌಕತ್ ಅಲಿ ಎಸ್. ಬರೆದಿರುವ 'ಕೋಟ್ಯಾಧಿಪತಿಗಳಾಗಲು ಜನಸೇವೆಯ ಮುಖವಾಡ' ಎಂಬ ಲೇಖನ ನಿಜಕ್ಕೂ ರಾಜಕಾರಣಿಗಳ ಸತ್ಯಾಸತ್ಯತೆಯನ್ನು ತೋರಿಸಿದೆ. ರಾಜಕಾರಣಿಗಳ ವಂಚನೆಯನ್ನು ಜನರ ಮುಂದೆ ತರಲು ಪ್ರಸ್ತುತ ಪಾಕ್ಷಿಕವು ಶ್ರಮಿಸುತ್ತಿದೆ. ಈ ಮೂಲಕ ಜನರು ರಾಜಕಾರಣಿಗಳ ವಂಚನೆಯ ಬಗ್ಗೆ ಜಾಗೃತರಾಗುತ್ತಿದ್ದಾರೆ.

ಪ್ರಸ್ತುತ ಪಾಕ್ಷಿಕ ಇನ್ನಷ್ಟು ಜನಪ್ರಿಯವಾಗಲಿ ಎಂದು ಹಾರೈಸುತ್ತೇನೆ.

ಆಯಿಷ, ತುಂಬೆ

ಮಾಡಲು ಹೊರಟಿದ್ದ ಆರೆಸ್ಸೆಸ್, ಸಂಘಪರಿವಾರದ ರಾಜಕೀಯ ಷಡ್ಯಂತ್ರವು ಈ ಲೇಖನದಲ್ಲಿ ಬಯಲಾಗಿದೆ.

ಈ ಬಾಬಾ ಬಹುಕೋಟಿ ಆಸ್ತಿಪಾಸ್ತಿಯನ್ನು ಹೊಂದಿದ್ದಾನೆ. ಕಪ್ಪುಹಣವನ್ನು ವಿದೇಶದಿಂದ ತರಬೇಕು. ಭ್ರಷ್ಟಾಚಾರ ನಿರ್ಮೂಲನೆ ಮಾಡಬೇಕು ಎಂದು ಸತ್ಯಾಗ್ರಹ ನಡೆಸುತ್ತಿರುವ ಬಾಬಾ, ತನ್ನಲ್ಲಿರುವ ಆಸ್ತಿಪಾಸ್ತಿಯಲ್ಲಿ ಎಷ್ಟು ಪ್ರಮಾಣದ ಕಪ್ಪುಹಣ ಅಡಗಿದೆ ಎಂಬುದನ್ನು ಬಹಿರಂಗಪಡಿಸಲಿ.

ಆರೆಸ್ಸೆಸ್, ಸಂಘಪರಿವಾರದ ತಾಳಕ್ಕೆ ಹೆಜ್ಜೆ ಹಾಕಿದ ಬಾಬಾ ಇದೀಗ ಪೇಚಿಗೆ ಸಿಲುಕಿರುವುದಂತೂ ಸತ್ಯ.

ಸಿನಾನ್, ಬಂದರ್

## ಸಂವಿಧಾನ ವಿರೋಧಿ ರಾಜಕಾರಣಿಗಳು

ಈಗ ರಾಜ್ಯದಲ್ಲಿ 'ಆಣೆ' ರಾಜಕೀಯ ಪ್ರಾರಂಭವಾಗಿದೆ. ತಾವು ಮಾಡಿರುವ ತಪ್ಪುಗಳನ್ನು ದೇವರ ಮೇಲೆ ಹೇರಲು ಈ ರಾಜಕಾರಣಿಗಳು ಹೊರಟಿದ್ದಾರೆ.

ಸಂವಿಧಾನದ ಮೂಲ ಆಶಯಗಳನ್ನು ಮೂಲೆಗುಂಪು ಮಾಡಿ, ಇವರು ಜನರನ್ನು ವಂಚಿಸಲು ಹೊರಟಿದ್ದಾರೆ. ಇದೀಗ ಸಿಎಂ ಯಡಿಯೂರಪ್ಪ ಮತ್ತು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಧರ್ಮಸ್ಥಳಕ್ಕೆ ಬಂದು ತಾವು ಭ್ರಷ್ಟಾಚಾರ ಮಾಡಿಲ್ಲ ಎಂದು ದೇವರ ಮೇಲೆ ಆಣೆ ಮಾಡಿ ತಮ್ಮ ತಪ್ಪನ್ನು ಮರೆ ಮಾಚಲು ಪ್ರಯತ್ನಿಸುತ್ತಿದ್ದಾರೆ.

ಈ ರಾಜಕಾರಣಿಗಳು ಆಣೆ ರಾಜಕೀಯವನ್ನು ಬಿಟ್ಟು ಸಂವಿಧಾನದ ಚೌಕಟ್ಟಿನಲ್ಲಿ ಪಾರದರ್ಶಕ ತನಿಖಾ ಆಯೋಗವನ್ನು ರಚಿಸಿಕೊಂಡು ಆ ಮೂಲಕ ತನಿಖೆಯನ್ನು ಎದುರಿಸಲಿ.

ಶೌಕತ್ ಅಲಿ, ಸುರತ್ಕಲ್

## ಬಾಬಾ ವಿರುದ್ಧ ಕ್ರಮ ಅಗತ್ಯ

ಭ್ರಷ್ಟಾಚಾರದ ವಿರುದ್ಧ ಸತ್ಯಾಗ್ರಹದ ನಾಟಕವಾಡಿದ ಬಾಬಾ ರಾಮ್‌ದೇವ್ 1000 ಕೋಟಿಗಿಂತಲೂ ಹೆಚ್ಚು ಬೆಳೆಬಾಳುವ ಆಸ್ತಿಯನ್ನು ಹೊಂದಿದ್ದಾನೆ ಎಂಬುದು ಜಗಜ್ಜಾಹೀರಾಗಿದೆ.

ಸತ್ಯಾಗ್ರಹದ ಮೂಲಕ ಜನರ ಕಣ್ಣಿಗೆ ಮಣ್ಣೆರಚುವ ಹಾಗೂ ಸಂವಿಧಾನ ವಿರೋಧಿ ಮತ್ತು ಕಾನೂನು ಸುವ್ಯವಸ್ಥೆಗೆ ಬೆದರಿಕೆಯೊಡ್ಡುವ ಈ ಬಾಬಾನ ವಿರುದ್ಧ ಕ್ರಮಕೈಗೊಳ್ಳುವುದು ಅತ್ಯಗತ್ಯ.

ಹಾಗೆಯೇ ಆದಾಯ ತೆರಿಗೆ ಇಲಾಖೆ ಈತನ ಆಸ್ತಿಯನ್ನು ಜಪ್ತಿ ಮಾಡಿ ದೇಶದ ಸಂಪತ್ತು ಈತನ ಬಳಿ ಕ್ರೋಢೀಕರಣವಾಗುವುದನ್ನು ತಪ್ಪಿಸಬೇಕಾಗಿದೆ.

ರಾಜೇಶ್, ಉಡುಪಿ

*ಮೂರೇ ವರ್ಷಗಳಲ್ಲಿ ಬೆಳೆದಿದೆ ಆನೆ ಪ್ರಮಾಣದಷ್ಟು*

# ಭ್ರಷ್ಟಾಚಾರ

# ಈಗ ರಾಜ್ಯ ನಂ.1

●ಫಯಾಝ್ ಎನ್.



ಕರ್ನಾಟಕದಲ್ಲಿ ಯಡಿಯೂರಪ್ಪನ ನೇತೃತ್ವದ ಬಿಜೆಪಿ ಸರಕಾರ ಮೂರು ವರ್ಷಗಳ ಆಡಳಿತ ನಡೆಸಿದೆ. ಇನ್ನು ಎರಡು ವರ್ಷ ಆಡಳಿತ ನಡೆಸಲಿಕ್ಕಿರಬಹುದು. ಆ ವೇಳೆಗಾಗಲೇ ಕರ್ನಾಟಕದ ಅರ್ಧದಷ್ಟು ಭಾಗ ಯಡಿಯೂರಪ್ಪ ಮತ್ತು ಅವರ ಕುಟುಂಬದವರ ಪಾಲಾದರೂ ಅಚ್ಚರಿಪಡಬೇಕಾಗಿಲ್ಲ. ಅಷ್ಟರಮಟ್ಟಿಗೆ ರಾಜ್ಯದಲ್ಲಿ ಭೂಕಬಳಿಕೆ, ಅವ್ಯವಹಾರ, ಅಕ್ರಮ ಸೊತ್ತು ಸಂಪಾದನೆ ಅವ್ಯಾಹತವಾಗಿ ನಡೆಯುತ್ತಿದ್ದು, ಕರ್ನಾಟಕ ರಾಜ್ಯವು ಭ್ರಷ್ಟಾಚಾರದಲ್ಲಿ ದೇಶದಲ್ಲೇ ನಂ.1 ಎಂದು ಕುಖ್ಯಾತಿಗೆ ಒಳಗಾಗಿದೆ. ವಿಪರ್ಯಾಸವೆಂದರೆ, 'ಅಭಿವೃದ್ಧಿಯೇ ಆಡಳಿತ ಮಂತ್ರ' ಎಂಬ ಬೃಹತ್ ಕಟೌಟ್‌ಗಳು ಈಗಲೂ ಹಲವು ಕಡೆ ರಾರಾಜಿಸುತ್ತಿವೆ. ಮತ್ತೊಂದೆಡೆ ಈ ರಾಜ್ಯವನ್ನು ಕಲ್ಯಾಣ ರಾಜ್ಯವನ್ನಾಗಿಸುವುದಾಗಿ ಘೋಷಣೆಯನ್ನೂ ಮುಖ್ಯಮಂತ್ರಿ ಹೊರಡಿಸಿದ್ದಾರೆ. ಈ ಹೊತ್ತಿನಲ್ಲೇ ರಾಜ್ಯ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿ ಜಿ.ಎಸ್.ಖೆಹರ್, ''ಕರ್ನಾಟಕದಲ್ಲಿ ನಡೆಯುತ್ತಿರುವಷ್ಟು ಭ್ರಷ್ಟಾಚಾರ ದೇಶದ ಬೇರೆ ಯಾವ ರಾಜ್ಯದಲ್ಲೂ ನಡೆಯುತ್ತಿಲ್ಲ'' ಎಂದು ಕಲ್ಲುಗಣಿಗಾರಿಕೆಗೆ ಸಂಬಂಧಿಸಿದ ಪ್ರಕರಣವೊಂದರ ವಿಚಾರಣೆಯ ಸಂದರ್ಭದಲ್ಲಿ ಪ್ರತಿಕ್ರಿಯಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಮತ್ತೆ ಖೆಹರ್, ರಾಜ್ಯ ಸರಕಾರದ ಕಾರ್ಯಯೋಜನೆಯ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಹುದ್ದೆಗೆ ರಜೆ ಹಾಕಿ ತೆರಳಬೇಕೆಂದೆನಿಸುತ್ತಿದೆ ಎಂದು ಪ್ರತಿಕ್ರಿಯಿಸಿದ್ದರು. ನ್ಯಾಯವನ್ನು ಅರಸಿಕೊಂಡು ಬಂದವರಿಗೆ ನ್ಯಾಯ ನೀಡಲು ಸಾಧ್ಯಾಗುತ್ತಿಲ್ಲ ಎಂದು ಹೈಕೋರ್ಟ್‌ನ ನ್ಯಾಯಮೂರ್ತಿ ಬಹಿರಂಗವಾಗಿ ಹೇಳುತ್ತಿರುವಾಗ ಈ ರಾಜ್ಯದಲ್ಲಿ ಅದ್ಯಾವ ಬಗೆಯ ಆಡಳಿತ ಜಾರಿಯಲ್ಲಿದೆ ಎಂಬುದನ್ನು ಸುಲಭವಾಗಿ ಅರ್ಥೈಸಿಕೊಳ್ಳಬಹುದು.

ರಾಜ್ಯದಲ್ಲಿ ಕಾನೂನು ವ್ಯವಸ್ಥೆ, ಒಟ್ಟು ಆಡಳಿತ ವ್ಯವಸ್ಥೆ ಸುವ್ಯವಸ್ಥವಾಗಿಲ್ಲ ಎಂದು ರಾಜ್ಯಪಾಲರಾದ ಹಂಸರಾಜ್ ಭಾರಧ್ವಾಜ್ ಆರಂಭದಲ್ಲೇ ತಿಳಿಸಿದ್ದರು. ಇದರ ವಿರುದ್ಧ ಬಿಜೆಪಿ ಶಾಸಕರು, ಸಚಿವರು ಟೀಕೆ ವ್ಯಕ್ತಪಡಿಸುವ ಭರದಲ್ಲಿ ರಾಜ್ಯಪಾಲ ಹುದ್ದೆಯ ಘನತೆಯನ್ನು ಲೆಕ್ಕಿಸದೆ ಹೇಳಿಕೆ ನೀಡತೊಡಗಿದ್ದರು. ಇದರ ಹೊರತಾಗಿ ಆಡಳಿತ ವ್ಯವಸ್ಥೆಯನ್ನು ಸರಿಪಡಿಸುವ ಗೋಜಿಗೆ ಹೋಗಲೇ ಇಲ್ಲ. ಇದರ ಪರಿಣಾಮವಾಗಿ ಸರಕಾರ ಮತ್ತು ರಾಜ್ಯಪಾಲರ ನಡುವೆ ಸಂಘರ್ಷ ನಡೆಯುತ್ತಲೇ ಇತ್ತು. ಇಲ್ಲಿ ಕಾನೂನು ವ್ಯವಸ್ಥೆ ಸಂಪೂರ್ಣವಾಗಿ ಹದಗೆಟ್ಟಿದೆ ಎಂದು ರಾಜ್ಯಪಾಲರು ಘೋಷಿಸಿಯೇ ಬಿಟ್ಟರು. 2010ರ ಡಿಸೆಂಬರ್ 22ರಂದು ''ಯಡಿಯೂರಪ್ಪ ಸರಕಾರದ ಭ್ರಷ್ಟಾಚಾರದ ಪಟ್ಟಿಯೇ ನನ್ನ ಬಳಿ ಇದೆ'' ಎಂದು ರಾಜ್ಯಪಾಲರು ಹೇಳಿಕೆಯನ್ನು ನೀಡಿದ್ದರು. ಇದೀಗ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಖೆಹರ್ ಅವರೂ ಕರ್ನಾಟಕ ರಾಜ್ಯವು ಭ್ರಷ್ಟಾಚಾರದಲ್ಲಿ ನಂ.1 ಆಗಿದೆ ಎಂದು ತಿಳಿಸಿದ್ದರು. ಇಂತಹ ಗಂಭೀರ ಆರೋಪಗಳು ಎದುರಾಗುತ್ತಿರುವ ಸಂದರ್ಭದಲ್ಲೂ ಮುಖ್ಯಮಂತ್ರಿ ಯಡಿಯೂರಪ್ಪ ತನ್ನನ್ನು ಸಮರ್ಥಿಸಿಕೊಳ್ಳಲು ಧರ್ಮಸ್ಥಳದ ಮಂಜುನಾಥನ ಮೊರೆ ಹೋಗಿರುವುದು ಭ್ರಷ್ಟಾಚಾರದ ಪರಮಾವಧಿಯಲ್ಲವೇ?

> ಕೇವಲ ಪ್ರೇರಣಾ ಟ್ರಸ್ಟ್‌ವೊಂದರ ಮೂಲಕವೇ ನಡೆಸಿರುವ ಭ್ರಷ್ಟಾಚಾರವೊಂದೇ ರಾಜ್ಯವನ್ನು ನಂ.1 ಪಟ್ಟಕ್ಕೇರಿಸಲು ಸಾಕು. ಅಷ್ಟರ ಮಟ್ಟಿಗೆ ತನ್ನ ಪುತ್ರ ರಾಘವೇಂದ್ರ ನಡೆಸುತ್ತಿರುವ ಪ್ರೇರಣಾ ಟ್ರಸ್ಟ್‌ಗೆ ಮುಖ್ಯಮಂತ್ರಿ ಯಡಿಯೂರಪ್ಪ ಭೂಮಿ, ಹಣವನ್ನು ಒದಗಿಸಿಕೊಟ್ಟಿದ್ದಾರೆ. ಭ್ರಷ್ಟಾಚಾರ, ಹಗರಣ, ಅವ್ಯವಾಹರ, ಅಕ್ರಮ ಭೂಕಬಳಿಕೆ, ಅಕ್ರಮ ಡಿನೋಟಿಫಿಕೇಶನ್, ತೆರಿಗೆ ವಂಚನೆ, ಸ್ವಜನ ಪಕ್ಷಪಾತ ಇವೆಲ್ಲವೂ ಪ್ರೇರಣಾ ಟ್ರಸ್ಟ್‌ನೊಂದಿಗೆ ಬೆಸೆದುಕೊಂಡಿರುವಂಥದ್ದು.

ಕೆಲವು ತಿಂಗಳ ಹಿಂದೆ ರಾಜ್ಯಕ್ಕೆ ಆಗಮಿಸಿದ್ದ ಕಾಂಗ್ರೆಸ್‌ನ ರಾಷ್ಟ್ರೀಯ ಮುಖಂಡ ರಾಹುಲ್ ಗಾಂಧಿಯವರು ಕರ್ನಾಟಕ ರಾಜ್ಯದ ಭ್ರಷ್ಟಾಚಾರದ ಬಗ್ಗೆಯೇ ಮಾತನಾಡಿದ್ದರು. ಇಂತಹ ಹೇಳಿಕೆಗಳು ರಾಜಕೀಯದಲ್ಲಿ ಮಾಮೂಲು ಎಂದೆನಿಸಬಹುದು. ಆದರೆ ರಾಜ್ಯಪಾಲರು ಮತ್ತು ರಾಜ್ಯ ಹೈಕೋರ್ಟ್‌ನ ಮುಖ್ಯನ್ಯಾಯಮೂರ್ತಿಗಳು ಕೂಡ ಕರ್ನಾಟಕದ ಭ್ರಷ್ಟಾಚಾರವನ್ನು ಕಂಡು ಬೇಸತ್ತಿದ್ದಾರೆ ಎಂದಾದರೆ ಯಡಿಯೂರಪ್ಪ ಸರಕಾರ ನಡೆಸಿರುವ ಭ್ರಷ್ಟಾಚಾರದ ಬಗ್ಗೆ ಸ್ವಲ್ಪ ಕಣ್ಣಾಡಿಸಲೇ ಬೇಕಾಗುತ್ತದೆ.

ಕೆಐಡಿಬಿ ಹಗರಣ, ಸೈಕಲ್ ಖರೀದಿ ಹಗರಣ, ಪ್ರೇರಣಾ ಟ್ರಸ್ಟ್ ಹಗರಣ, ಸ್ವಜನ ಪಕ್ಷಪಾತ ಇವೆಲ್ಲವುಗಳ ಮಧ್ಯೆ ಅಕ್ರಮ ಗಣಿಗಾರಿಕೆ ಎಂಬುದು ಸ್ವತಹ ಮುಖ್ಯಮಂತ್ರಿಯೇ ನಿಯಂತ್ರಿಸಲಾಗದಷ್ಟು ಬಲಿಷ್ಠವಾಗಿ ಬೆಳೆದುನಿಂತಿರುವ ಭ್ರಷ್ಟಾಚಾರವಾಗಿದೆ. ಕಳೆದ ವರ್ಷ ಸರಕಾರ ಎರಡು ವರ್ಷ ಪೂರೈಸಿದ ಸಂದರ್ಭದಲ್ಲಿ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆಯವರು ತಮ್ಮ ಹುದ್ದೆಗೆ ರಾಜೀನಾಮೆ ಪತ್ರವನ್ನು ಸಲ್ಲಿಸಿದ್ದರು. ಕರ್ನಾಟಕದ ಭ್ರಷ್ಟಾಚಾರ ಎಂಬುದು ಸ್ವತಹ ಲೋಕಾಯುಕ್ತರನ್ನೇ ಸ್ವಾಹ ಮಾಡಿಕೊಳ್ಳುವಷ್ಟರ ಮಟ್ಟಿಗೆ ಅವತ್ತೇ ಬೆಳೆದು ನಿಂತಿತ್ತು. ಇದೀಗ ಮೂರು ವರ್ಷ


ತಂದೆಯೊಂದಿಗೆ ಅರುಣಾ ದೇವಿ


ಬಿ.ಎಸ್.ರಾಘವೇಂದ್ರ

ಪೂರೈಸುತ್ತಿರುವ ಬಿಜೆಪಿ ಸರಕಾರವು ರಾಜ್ಯವನ್ನು ಭ್ರಷ್ಟಾಚಾರದಲ್ಲಿ ನಂಬರ್ ವನ್ ಸ್ಥಾನಕ್ಕೇರಿಸಿದೆ.

ಕೇವಲ ಪ್ರೇರಣಾ ಟ್ರಸ್ಟ್‌ವೊಂದರ ಮೂಲಕವೇ ನಡೆಸಿರುವ ಭ್ರಷ್ಟಾಚಾರವೊಂದೇ ರಾಜ್ಯವನ್ನು ನಂ.1 ಪಟ್ಟಕ್ಕೇರಿಸಲು ಸಾಕು. ಅಷ್ಟರ ಮಟ್ಟಿಗೆ ತನ್ನ ಪುತ್ರ ರಾಘವೇಂದ್ರ ನಡೆಸುತ್ತಿರುವ ಪ್ರೇರಣಾ ಟ್ರಸ್ಟ್‌ಗೆ ಮುಖ್ಯಮಂತ್ರಿ ಯಡಿಯೂರಪ್ಪ ಭೂಮಿ, ಹಣವನ್ನು ಒದಗಿಸಿಕೊಟ್ಟಿದ್ದಾರೆ. ಭ್ರಷ್ಟಾಚಾರ, ಹಗರಣ, ಅವ್ಯವಹಾರ, ಅಕ್ರಮ ಭೂಕಬಳಿಕೆ, ಅಕ್ರಮ ಡಿನೋಟಿಫಿಕೇಶನ್, ತೆರಿಗೆ ವಂಚನೆ, ಸ್ವಜನ ಪಕ್ಷಪಾತ ಇವೆಲ್ಲವೂ ಪ್ರೇರಣಾ ಟ್ರಸ್ಟ್‌ನೊಂದಿಗೆ ಬೆಸೆದುಕೊಂಡಿರುವಂಥದ್ದು.

ಮುಖ್ಯಮಂತ್ರಿ ಯಡಿಯೂರಪ್ಪನವರ ತವರೂರು ಶಿವಮೊಗ್ಗದಲ್ಲಿ ಕಾರ್ಯಾಚರಿಸುತ್ತಿರುವ ಪ್ರೇರಣಾ ಎಜುಕೇಶನ್ ಸೊಸೈಟಿಯನ್ನು ಅವರ ಮಕ್ಕಳು ನಡೆಸುತ್ತಿದ್ದಾರೆ. ಶಿವಮೊಗ್ಗದಿಂದ 6-7 ಕಿ.ಮೀ. ದೂರದಲ್ಲಿ ಪ್ರೇರಣಾ ಟ್ರಸ್ಟ್‌ನಡಿ ಕಾರ್ಯನಿರ್ವಹಿಸುತ್ತಿರುವ ಈ ವಿದ್ಯಾಸಂಸ್ಥೆಯು ಅಸಲಿಗೆ ಸರಕಾರಿ ಭೂಮಿಯನ್ನು ಕಬಳಿಸುವ ಕೃತ್ಯವನ್ನೇ ಮುಖ್ಯ ಧ್ಯೇಯವನ್ನಾಗಿಸಿಕೊಂಡಂತಿದೆ. 2006ರಲ್ಲಿ ಹೆಸರು ನೋಂದಾಯಿಸಲ್ಪಟ್ಟ ಪ್ರೇರಣಾ ಟ್ರಸ್ಟ್‌ನ ಕೆಲಸ ಕಾರ್ಯಗಳು ತ್ವರಿತಗತಿಯಲ್ಲಿ ನಡೆದವು. ಅದು ಯಡಿಯೂರಪ್ಪ ಅಧಿಕಾರಕ್ಕೇರಿದ ಸಂದರ್ಭವಾಗಿತ್ತು. ಯಡಿಯೂರಪ್ಪ ಅಧಿಕಾರ ಸ್ವೀಕರಿಸಿದ ಬೆನ್ನಿಗೇ ಪ್ರೇರಣಾ ಟ್ರಸ್ಟ್‌ನ ನೋಂದಣಿ ಕೆಲಸ ಮತ್ತು ಅದಕ್ಕೆ ಸಂಬಂಧಿಸಿದ ಕಾಮಗಾರಿಯು ಕೂಡ ಸಮರೋಪಾದಿಯಲ್ಲಿ ಯಾವುದೇ 'ತೊಡಕಿಲ್ಲದೆ' ನಡೆಯಿತು. ಮೊದಲ ಹಂತವಾಗಿ ಶಿವಮೊಗ್ಗದ ಗುಡ್ಡದ ಅರೇಕೆರೆ ಹಾಗೂ ಶ್ರೀರಾಂಪುರ ಗ್ರಾಮಗಳಲ್ಲಿ 10-26 ಗುಂಟೆ ಜಮೀನು ಖರೀದಿಸಲಾಯಿತು. ಆದರೆ ಇದರ ಭೂಪರಿವರ್ತನಾ ಕಾರ್ಯವು ನಡೆದಿರುವುದು ಮಾತ್ರ ಆಶ್ಚರ್ಯಕರ ರೀತಿಯಲ್ಲಿ. ಭೂಕಂದಾಯ ಕಾಯ್ದೆಯನ್ನು ಉಲ್ಲಂಘಿಸಿ ಸರಕಾರದ ಅನುಮತಿ ಇಲ್ಲದೆಯೇ ಭೂಪರಿವರ್ತನಾ ಆದೇಶವನ್ನು ಪಡೆದುಕೊಳ್ಳಲಾಗಿತ್ತು. ಇವೆಲ್ಲವೂ ನಡೆಯುತ್ತಿರುವುದು ಪ್ರೇರಣಾ ಟ್ರಸ್ಟ್ ಶಿಕ್ಷಣ ಸಂಸ್ಥೆಯ ಹೆಸರನ್ನು ಮುಂದಿಟ್ಟುಕೊಂಡು. ವಾಸ್ತವದಲ್ಲಿ ಅಂಥದ್ದೊಂದು ಹೆಸರಿನ ಶಿಕ್ಷಣ ಸಂಸ್ಥೆಯು ಸರಕಾರದಿಂದ ಯಾವುದೇ ಅಂಗೀಕಾರ ಪಡೆದಿರಲಿಲ್ಲ. ಆದಾಗ್ಯೂ ಅಂಗೀಕೃತ ವಿದ್ಯಾಸಂಸ್ಥೆ ಎಂದು ಬಿಂಬಿಸಿರುವುದು 'ಕೈಚಳಕ'! ಈ ಮೂಲಕವೇ ಭೂಖರೀದಿ ಅನುಮತಿ ಮತ್ತು ಅಲಿನೇಶನ್ ಪರ್ಮಿಷನ್‌ಗಳನ್ನೂ ಪಡೆಯಲಾಗಿತ್ತು. ಕುತೂಹಲಕಾರಿ ಅಂಶವೇನೆಂದರೆ, 2006ರ ಆಗಸ್ಟ್‌ನಲ್ಲಿ ಅಸ್ತಿತ್ವಕ್ಕೆ ಬಂದ ಪ್ರೇರಣಾ ಎಜುಕೇಶನ್ ಸೊಸೈಟಿಯು ಯೋಜನೆ ರೂಪಿಸಿದ ಆರೇ ತಿಂಗಳಲ್ಲಿ ಜಮೀನು ಖರೀದಿ ಸೇರಿದಂತೆ ಸಕಲ ಸರಕಾರಿ ಪರವಾನಗಿಗಳನ್ನೂ ಪಡೆದು ನಾಲ್ಕೇ ತಿಂಗಳಲ್ಲಲಿ ಕಾಲೇಜನ್ನೂ ಪ್ರಾರಂಭಿಸಿತ್ತು !

ಇಲ್ಲಿಗೇ ಈ ಟ್ರಸ್ಟ್‌ನ ಭೂಮಾಫಿಯಾ ನಿಲ್ಲಲಿಲ್ಲ. ಅರೇಕೆರೆ ಮತ್ತು ಶ್ರೀರಾಂಪುರ ಗ್ರಾಮದಲ್ಲೇ ಮತ್ತೆ 27 ಎಕರೆ 26 ಗುಂಟೆ ಜಮೀನು ಖರೀದಿಸಿ, 38 ಎಕರೆ 12 ಗುಂಟೆ ಫ್ಲ್ಯಾಟನ್ನೂ ವಶಪಡಿಸಿಕೊಂಡು ಅಲಿನೇಷನ್‌ಗೆ ಅರ್ಜಿ ಸಲ್ಲಿಸಲಾಗಿತ್ತು.

*ವಾಸ್ತವದಲ್ಲಿ ಈ ಸೈಟುಗಳ ಇಂದಿನ ಮಾರುಕಟ್ಟೆ ದರ ಒಂದು ಕೋಟಿ ರೂಪಾಯಿ ! ಭೂ ವ್ಯಾಮೋಹದಲ್ಲಿ ಅರುಣಾ ದೇವಿಗೆ ಒಂದು ಎಡವಟ್ಟು ನಡೆದದ್ದು ಗೊತ್ತೇ ಇರಲಿಲ್ಲ. ನಾಲ್ಕು ಸೈಟುಗಳ ಪೈಕಿ ಮೂರು ಸೈಟುಗಳು ಪತ್ರಕರ್ತರ ಕೋಟಾದಡಿ ಮಂಜೂರಾಗಿದ್ದರೆ ಮಂಜುನಾಥ್‌ಗೆ ಸೇರಿದ ಒಂದು ಸೈಟು ಮಾತ್ರ ಗೃಹಮಂಡಳಿಯ ವಿವೇಚನಾ ಕೋಟಾದಡಿ ದೊರೆತಿದೆ. ವಾಸ್ತವದಲ್ಲಿ ಫಲಾನುಭವಿಗಳಾರೂ ಪತ್ರಕರ್ತರಲ್ಲ. ಎಲ್ಲರೂ ಸಂಸ್ಥೆಯ ನೌಕರರು. ಮಾತ್ರವಲ್ಲದೆ ಭೂಮಿನುಂಗಿದ ಈ ಅವ್ಯವಹಾರಕ್ಕೆ ಬ್ಯಾಂಕ್ ಚಲನ್‌ಗಳು ಪ್ರಬಲ ಸಾಕ್ಷಿಯಾಗಿವೆ. ಗಮನಾರ್ಹ ಸಂಗತಿಯೇನೆಂದರೆ, ಈ ಭೂಕಬಳಿಕೆಯು ಇಷ್ಟು ಸಲೀಸಾಗಿ ನಡೆಯಬೇಕಿದ್ದರೆ ಪ್ರಬಲ ರಾಜಕೀಯ ಅಧಿಕಾರ ಬೇಕೇಬೇಕು.*

ಅಂದಹಾಗೆ ಮುಖ್ಯಮಂತ್ರಿ ಯಡಿಯೂರಪ್ಪನವರ ಸುಪುತ್ರ ವಿಜಯೇಂದ್ರ ಪ್ರೇರಣಾ ಟ್ರಸ್ಟ್‌ನ ಸದಸ್ಯ.

ಇದರ ಜೊತೆಗೆ ಇನ್ನೊಂದು ಅವ್ಯವಹಾರವೂ ಪ್ರೇರಣಾ ಟ್ರಸ್ಟ್ ಮೂಲಕ ನಡೆದಿದೆ. ಅದು ಸರಕಾರವನ್ನು ವಂಚಿಸಿದ ಪ್ರಕರಣವಾಗಿದೆ. ಕೋಟ್ಯಂತರ ವಹಿವಾಟಿನ ಪ್ರೇರಣಾ ಟ್ರಸ್ಟ್‌ನ್ನು ಆದಾಯ ತೆರಿಗೆಯಿಂದ ತಪ್ಪಿಸುವುದಕ್ಕಾಗಿ 'ದತ್ತಿ ಸಂಸ್ಥೆ' ಎಂಬ ಸುಳ್ಳು ಪ್ರಮಾಣ ಪತ್ರವನ್ನು ಸಿದ್ಧಪಡಿಸಿಕೊಳ್ಳಲಾಗಿದೆ. ಇದು ಅಂತಿಂಥವರಿಗೆ ಸಾಧ್ಯವಾಗುವಂತಹ ವಂಚನೆಯಲ್ಲ. ಅದಕ್ಕೆ ರಾಜಕೀಯದಲ್ಲಿ ಭಾರೀ ಪ್ರಭಾವ, ಅಧಿಕಾರ ಇರಬೇಕು. ಆ ಕಾರಣದಿಂದಲೇ ಮುಖ್ಯಮಂತ್ರಿ ಯಡಿಯೂರಪ್ಪ ಕುಟುಂಬದ ಪ್ರೇರಣಾ ಟ್ರಸ್ಟ್‌ಗೆ ದತ್ತಿ ಸಂಸ್ಥೆ ಎಂಬ ಸರ್ಟಿಫಿಕೇಟ್ ಸುಲಭವಾಗಿ ದಕ್ಕಿದೆ. ಇದಲ್ಲದೆ ತಮ್ಮ ಮಕ್ಕಳ ಟ್ರಸ್ಟ್‌ಗೆ ಗಣಿ ಮಾಲಕರಿಂದಲೂ ದೇಣಿಗೆ ಸಂಗ್ರಹಿಸಲಾಗಿದೆ. ಪ್ರೇರಣಾ ಟ್ರಸ್ಟ್‌ಗೆ ಖಾಸಗಿ ಗಣಿ ಕಂಪೆನಿಗಳಿಂದ 20 ಕೋಟಿ ರೂಪಾಯಿ ದೇಣಿಗೆ ಸಂಗ್ರಹವಾದ ವಿಚಾರವು ಬಹಿರಂಗಗೊಳ್ಳುತ್ತಲೇ ಅದರ ಹಿಂದಿನ ಎಲ್ಲ ಅವ್ಯವಹಾರವು ಬೆಳಕಿಗೆ ಬಂದು ಮುಖ್ಯಮಂತ್ರಿ ಯಡಿಯೂರಪ್ಪನವರ ಸ್ವಜನ ಪಕ್ಷಪಾತವು ಬಹಿರಂಗೊಂಡಿತು. ಈ ಪ್ರಕರಣದ ಕುರಿತಂತೆ ನ್ಯಾಯಾಲಯಲ್ಲಿ ವಿಚಾರಣೆಯೂ ನಡೆಯುತ್ತಿದೆ.

ಕರ್ನಾಟಕ ಭೂ ಸುಧಾರಣಾ ಕಾಯ್ದೆ 1090ರ ಅನ್ವಯ ಯಾವುದೇ ವಿದ್ಯಾಸಂಸ್ಥೆ 20 ಯೂನಿಟ್ ಜಮೀನು ಹೊಂದಬಹುದು. ಅದರಲ್ಲಿ 4 ಯೂನಿಟ್ ಜಮೀನನ್ನು ವ್ಯವಸಾಯೇತರ ಉದ್ದೇಶಕ್ಕೆ ಪರಿವರ್ತಿಸಿಕೊಳ್ಳಬಹುದು. ಆದರೆ ಯಡಿಯೂರಪ್ಪನವರಿಗೆ ಇಂತಹ ಯಾವುದೇ ಕಾನೂನು ಅನ್ವಯಿಸಲಿಲ್ಲ. 38 ಎಕರೆ 12 ಗುಂಟೆ ಜಮೀನಿನ ಭೂಪರಿವರ್ತನಾ ಕಾರ್ಯ ಯಾವುದೇ 'ಅಡೆ ತಡೆ' ಇಲ್ಲದೆ ಮುಗಿಯಿತು. ಅದರ ಜೊತೆಗೆ ಶಿವಮೊಗ್ಗ ನಗರ ಸಭೆಯಿಂದಲೂ ಪ್ರೇರಣಾ ಟ್ರಸ್ಟ್‌ಗೆ ಬೇಕಾದ ಎಲ್ಲ ಸೌಲಭ್ಯ ನೆರವನ್ನೂ ಧಾರೆಯೆರೆಯಲಾಯಿತು. ಇದರ ಜೊತೆಗೆ ಬಹಿರಂಗಗೊಂಡ ಮತ್ತೊಂದು ಸಂಗತಿಯೇನೆಂದರೆ, ಪ್ರೇರಣಾ ಟ್ರಸ್ಟ್ ಮೂಲಕ ಕಬಳಿಸಲಾಗಿರುವ ಭೂಮಿಯು ಅಭಯಾರಣ್ಯ ವ್ಯಾಪ್ತಿಗೆ ಸೇರಿದ್ದು ಎಂಬುದು. ಆದರೆ ಭೂಪರಿವರ್ತನೆಯ ಸಂದರ್ಭದಲ್ಲಿ ಎಲ್ಲ ಕಾನೂನು ನಿಯಮಗಳನ್ನು ಗಾಳಿ ತೂರಲಾಗಿದ್ದು, ಅಧಿಕಾರ ಬಲದಿಂದ ಈ ಭೂಮಿ ಖರೀದಿ ಪ್ರಕ್ರಿಯೆ ನಡೆದಿದೆ ಎಂಬುದು ಸತ್ಯಸಂಗತಿ.

ವನ್ಯಜೀವಿ ಕಾಯ್ದೆ 1972ರ ಪ್ರಕಾರ, ಅಭಯಾರಣ್ಯ ಪ್ರದೇಶದಲ್ಲಿ ಯಾರೂ ಯಾವ ಕಾರಣಕ್ಕೂ ಅತಿಕ್ರಮಣ ನಡೆಸುವಂತಿಲ್ಲ. ಈ ಆಸ್ತಿಯನ್ನು ಖರೀದಿಸುವಂತಿಲ್ಲ. ಮಾತ್ರವಲ್ಲ, ಕಾನೂನು ಉಲ್ಲಂಘಿಸಿದರೆ ಅಂಥವರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಜರುಗಿಸುವ ಮತ್ತು ಅತಿಕ್ರಮಿತ ಜಮೀನನ್ನು ವಶಪಡಿಸಿಕೊಳ್ಳುವುದು ಅರಣ್ಯ ಇಲಾಖೆಯ ಜವಾಬ್ದಾರಿ. ಆದರೆ ಪ್ರೇರಣಾ ಎಜುಕೇಶನ್ ಸೊಸೈಟಿಗೆ ಇದ್ಯಾವ ಕಾನೂನು ಅನ್ವಯವಾಗುವುದೇ ಇಲ್ಲ ಬಿಡಿ. ಕಾರಣ, ಅದು ರಾಜ್ಯವನ್ನು ಆಳುತ್ತಿರುವ ಮುಖ್ಯಮಂತ್ರಿಯ ಖಾಸಗಿ ವಿಚಾರವಲ್ಲವೇ?!

ಯಡಿಯೂರಪ್ಪ ಕುಟುಂಬದ ಭೂ ಮೋಹ ಇಲ್ಲಿಗೇ ಮುಗಿಯುವುದಿಲ್ಲ. ಮುಖ್ಯಮಂತ್ರಿಯ ಸುಪುತ್ರಿ ಎಸ್.ವೈ.ಅರುಣಾ ದೇವಿಗೂ ಕೆಲವು ಸೈಟುಗಳು ಬೇಕಂತೆ. 2007ರಲ್ಲಿ ಅರುಣಾ ದೇವಿ ಭೂದರೋಡೆಯಲ್ಲಿ ಸಕ್ರಿಯವಾಗಿದ್ದಾರೆ. ಪ್ರೇರಣಾ ಟ್ರಸ್ಟ್‌ನಲ್ಲಿ ಕೆಲಸ ನಿರ್ವಹಿಸುತ್ತಿಲೇ, ಪತ್ರಕರ್ತರ ಕೋಟಾದಡಿ ಗೃಹಮಂಡಳಿಯ ಭೂಮಿ ನುಂಗಿ ಇದೀಗ ಪ್ರಕರಣವು ರಾಜ್ಯಾದ್ಯಂತ ಸುದ್ದಿಯಲ್ಲಿದೆ. ಸದ್ಯ ಶಿವಮೊಗ್ಗದ ವಕೀಲ ವಿನೋದ ಅವರು ಸಿಎಂ ಪುತ್ರಿ ಹಾಗೂ ಪುತ್ರರು ನಡೆಸಿದ ಭೂಅವ್ಯವಹಾರದ ಬಗ್ಗೆ ಆರೋಪಗಳ ಪಟ್ಟಿಯನ್ನೇ ಪತ್ರಿಕೆಗಳಿಗೆ ಹಂಚುತ್ತಿದ್ದಾರೆ. ಅರುಣಾ ದೇವಿ ಬಹಳ ಚಾಣಾಕ್ಷತನದಿಂದ ಸರಕಾರಿ ಜಮೀನನ್ನು ಕಬಳಿಸಿದ್ದು, ಅದಕ್ಕಾಗಿ ಯೋಜನೆಯನ್ನು ಹೆಣೆದಿದ್ದರು. ಅರುಣಾ ದೇವಿ ತನ್ನ ಸಹೋದ್ಯೋಗಿಗಳಾದ

*ಅದೇ ಕಚೇರಿಯಲ್ಲಿ 6 ತಿಂಗಳಿನಿಂದ ಹಿಂದೆ ಅರ್ಜಿ ಸಲ್ಲಿಸಿದವರೆಲ್ಲಾ ಇನ್ನೂ ಕ್ಯೂನಲ್ಲಿ ನಿಂತಿರುವಾಗ ರಾಘವೇಂದ್ರ ಕೇವಲ ಒಂದು ತಿಂಗಳಲ್ಲಿ ಭೂಪರಿವರ್ತನೆ ಕೆಲಸ ಮಾಡಿ ಮುಗಿಸಿರುವಾದರೆ ಇದರ ಹಿಂದೆ ಅಕ್ರಮ ಇಲ್ಲದಿರಲು ಸಾಧ್ಯವೇ? ಹೀಗೆ ಭೂಮಿಯನ್ನು ಕಬಳಿಸುತ್ತಾ ಮತ್ತು ಅದನ್ನು ಯಡಿಯೂರಪ್ಪ ಅಧಿಕಾರದಲ್ಲಿರುವ ಸಮಯದಲ್ಲೇ ತಮ್ಮ ಹೆಸರಿಗೆ ನೋಂದಾಯಿಸಿಕೊಳ್ಳುತ್ತಿರುವ ಯಡಿಯೂರಪ್ಪ ಮತ್ತು ಅವರ ಕುಟುಂಬವು ರಾಜ್ಯವನ್ನು ಭ್ರಷ್ಟಾಚಾರದಲ್ಲಿ ನಂ.1 ಸ್ಥಾನಕ್ಕೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇನ್ನು ಉಳಿದಂತೆ ಸಹೋದ್ಯೋಗಿ ಶಾಸಕ, ಸಚಿವರ ಭ್ರಷ್ಟಾಚಾರ, ಹಗರಣ ಇದ್ದೇ ಇದೆ. ದೊರೆಯೇ ಹೀಗಿರುವಾಗ ಇನ್ನು ಅವರ ಪರಿವಾರವು ಹೇಗಿರಬಹುದು ಎಂದು ಸುಲಭವಾಗಿ ಊಹಿಸಬಹುದಲ್ಲವೇ?*

ಕೃಷ್ಣ, ಶಿವಶಂಕರ್, ಮಂಜುನಾಥ್ ಮತ್ತು ಸಂದೇಶ್‌ಗೌಡರ ಮೂಲಕ ಪತ್ರಕರ್ತರ ಕೋಟಾದಡಿ ಗೃಹ ಮಂಡಳಿಯ ಭೂಮಿಗೆ ಅರ್ಜಿ ಸಲ್ಲಿಸಿದ್ದರು.

ಕಲ್ಲಳ್ಳಿ ಕಾಶೀಪುರ ರಸ್ತೆಯಲ್ಲಿರುವ ಕರ್ನಾಟಕ ಗೃಹಮಂಡಳಿಯ 9X13.50 ಮೀಟರ್ ಅಳತೆಯ ಸೈಟುಗಳಿಗೆ ತನ ನಾಲ್ಕು ಮಂದಿ ಆಪ್ತರ ಮೂಲಕ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ಸಲ್ಲಿಕೆಯಾದದ್ದು 2007ರ ಆಗಸ್ಟ್ 8ರಂದು. ತನ್ನ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಈ ನಾಲ್ಕು ಮಂದಿಯನ್ನು ಪತ್ರಕರ್ತರೆಂದು ಬಿಂಬಿಸಲು ಅರುಣಾ ದೇವಿಗೆ ಅಷ್ಟೇನು ಕಷ್ಟವಾಗಲಿಲ್ಲ. ಆದರೆ ಯಡಿಯೂರಪ್ಪನವರು ಈ ಅರ್ಜಿಗೆ ಅದೆಷ್ಟು ಬೇಗ ಸ್ಪಂದಿಸಿದರೆಂದರೆ, ಅರ್ಜಿ ಸಲ್ಲಿಸುವ ಮುನ್ನವೇ ಸೈಟು ಕೊಟ್ಟುಬಿಟ್ಟಿದ್ದರು ! ಅಂದರೆ ಸೈಟು ಹಂಚಿಕೆಯಾದದ್ದು 2007ರ ಜೂನ್ 27ರಂದು! ವಿಚಿತ್ರವಾದರೂ ಇದು ಸತ್ಯ.

ಹೇಗೋ ಸೈಟು ತನ್ನ ಆಪ್ತರ ಬಳಿಗೆ ಬಂದ ನಂತರ ಅರುಣಾ ದೇವಿ ಅದನ್ನು ಖರೀದಿಸಲು ಸೂಕ್ತ ಸಮಯಕ್ಕಾಗಿ ಕಾದು ಕುಳಿತಿದ್ದರು. ಬರೋಬ್ಬರಿ ಎರಡು ವರ್ಷಗಳ ಬಳಿಕ 2010ರ ಮಾರ್ಚ್ 31ರಂದು ಈ ಸೈಟುಗಳನ್ನು ಕ್ರಯಪತ್ರದ ಮೂಲಕ ತನ್ನ ಹೆಸರಿಗೆ ವರ್ಗಾಯಿಸಿಕೊಂಡರು. 16 ಲಕ್ಷ ರೂಪಾಯಿಗೆ ಆ ಸೈಟುಗಳನ್ನು ಖರೀದಿಸಿರುವಂತೆ ದಾಖಲೆ ಇದೆ. ವಾಸ್ತವದಲ್ಲಿ ಈ ಸೈಟುಗಳ ಇಂದಿನ ಮಾರುಕಟ್ಟೆ ದರ ಒಂದು ಕೋಟಿ ರೂಪಾಯಿ ! ಭೂ ವ್ಯಾಮೋಹದಲ್ಲಿ ಅರುಣಾ ದೇವಿಗೆ ಒಂದು ಎಡವಟ್ಟು ನಡೆದದ್ದು ಗೊತ್ತೇ ಇರಲಿಲ್ಲ. ನಾಲ್ಕು ಸೈಟುಗಳ ಪೈಕಿ ಮೂರು ಸೈಟುಗಳು ಪತ್ರಕರ್ತರ ಕೋಟಾದಡಿ ಮಂಜೂರಾಗಿದ್ದರೆ ಮಂಜುನಾಥ್‌ಗೆ ಸೇರಿದ ಒಂದು ಸೈಟು ಮಾತ್ರ ಗೃಹಮಂಡಳಿಯ ವಿವೇಚನಾ ಕೋಟಾದಡಿ ದೊರೆತಿದೆ. ವಾಸ್ತವದಲ್ಲಿ ಫಲಾನುಭವಿಗಳಾರೂ ಪತ್ರಕರ್ತರಲ್ಲ. ಎಲ್ಲರೂ ಸಂಸ್ಥೆಯ ನೌಕರರು. ಮಾತ್ರವಲ್ಲದೆ ಭೂಮಿನುಂಗಿದ ಈ ಅವ್ಯವಹಾರಕ್ಕೆ ಬ್ಯಾಂಕ್ ಚಲನ್‌ಗಳು ಪ್ರಬಲ ಸಾಕ್ಷಿಯಾಗಿವೆ. ಗಮನಾರ್ಹ ಸಂಗತಿಯೇನೆಂದರೆ, ಈ ಭೂಕಬಳಿಕೆಯು ಇಷ್ಟು ಸಲೀಸಾಗಿ ನಡೆಯಬೇಕಿದ್ದರೆ ಪ್ರಬಲ ರಾಜಕೀಯ ಅಧಿಕಾರ ಬೇಕೇಬೇಕು. ಅಂದಹಾಗೆ ಮುಖ್ಯಮಂತ್ರಿಯ ಪುತ್ರಿಗೆ ಭೂಮಿ ಬೇಕಾಗಿದೆ ಎಂದಾಗ ಹೇಗಾದರೂ ಮಾಡಿ ಹೊಂದಿಸಿ ಕೊಡಲೇ ಬೇಕಲ್ಲವೇ?! ಅದೇ ಇಲ್ಲಿ ನಡೆದಿರುವುದು.

ಯಡಿಯೂರಪ್ಪನವರ ಇನ್ನೋರ್ವ ಸುಪುತ್ರ ಸಂಸದ ರಾಘವೇಂದ್ರ ಕೂಡ ಭೂ ದರೋಡೆಯಲ್ಲಿ ಎತ್ತಿದ ಕೈ. 2006ರ ಫೆಬ್ರವರಿ 24ರಂದು ರಾಘವೇಂದ್ರ ಶಿವಮೊಗ್ಗದ ಬೈಪಾಸ್‌ನ ನೂರು ಅಡಿ ರಸ್ತೆಯ ಪಕ್ಕದಲ್ಲೊಂದು ಜಮೀನು ಖರೀದಿ ಮಾಡುತ್ತಾರೆ. ಊರಗಡೂರು ಎಂಬಲ್ಲಿರುವ 3.27 ಎಕರೆ ಜಮೀನನ್ನು ಸಮದ್ ಹಾಗೂ ರಫೀಕ್ ಎಂಬವರಿಂದ 12 ಲಕ್ಷದ 18 ಸಾವಿರ ರೂಪಾಯಿಗೆ ಖರೀದಿಸಿರುವುದಾಗಿ ವ್ಯವಹಾರ ದಾಖಲೆ ಇದೆ. ಆದರೆ ಭೂಮಿ ಖರೀದಿಯ ಬಳಿಕ ನಡೆದ ಭೂಪರಿವರ್ತನಾ ಪ್ರಕ್ರಿಯೆಯ ವೇಗವಂತೂ ಅಚ್ಚರಿದಾಯಕವಾದದ್ದು. 2007ರ ಫೆಬ್ರವರಿ 5ರಂದು ರಾಘವೇಂದ್ರ ಅವರು ಭೂಪರಿವರ್ತನೆಗೆ ಅರ್ಜಿ ಸಲ್ಲಿಸಿದರೆ ಒಂದೇ ತಿಂಗಳಲ್ಲಿ ಅಂದರೆ ಮಾರ್ಚ್ 6ರಂದು ಭೂಪರಿವರ್ತನೆ ರೆಡಿ. ಸಾಮಾನ್ಯವಾಗಿ ಭೂಪರಿವರ್ತನೆಗೆ ಅನುಮತಿ ಸಿಗಲು ಕನಿಷ್ಠ 6 ತಿಂಗಳಾದರೂ ಬೇಕು. ಅದೇ ಕಚೇರಿಯಲ್ಲಿ 6 ತಿಂಗಳಿನಿಂದ ಹಿಂದೆ ಅರ್ಜಿ ಸಲ್ಲಿಸಿದವರೆಲ್ಲಾ ಇನ್ನೂ ಕ್ಯೂನಲ್ಲಿ ನಿಂತಿರುವಾಗ ರಾಘವೇಂದ್ರ ಕೇವಲ ಒಂದು ತಿಂಗಳಲ್ಲಿ ಭೂಪರಿವರ್ತನೆ ಕೆಲಸ ಮಾಡಿ ಮುಗಿಸಿರುವುದಾದರೆ ಇದರ ಹಿಂದೆ ಅಕ್ರಮ ಇಲ್ಲದಿರಲು ಸಾಧ್ಯವೇ? ಹೀಗೆ ಭೂಮಿಯನ್ನು ಕಬಳಿಸುತ್ತಾ ಮತ್ತು ಅದನ್ನು ಯಡಿಯೂರಪ್ಪ ಅಧಿಕಾರದಲ್ಲಿರುವ ಸಮಯದಲ್ಲೇ ತಮ್ಮ ಹೆಸರಿಗೆ ನೋಂದಾಯಿಸಿ ಕೊಳ್ಳುತ್ತಿರುವ ಯಡಿಯೂರಪ್ಪ ಮತ್ತು ಅವರ ಕುಟುಂಬವು ರಾಜ್ಯವನ್ನು ಭ್ರಷ್ಟಾಚಾರದಲ್ಲಿ ನಂ.1 ಸ್ಥಾನಕ್ಕೇರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಇನ್ನು ಉಳಿದಂತೆ ಸಹೋದ್ಯೋಗಿ ಶಾಸಕ, ಸಚಿವರ ಭ್ರಷ್ಟಾಚಾರ, ಹಗರಣ ಇದ್ದೇ ಇದೆ. ದೊರೆಯೇ ಹೀಗಿರುವಾಗ ಇನ್ನು ಅದರ ಪರಿವಾರವು ಹೇಗಿರಬಹುದು ಎಂದು ಸುಲಭವಾಗಿ ಊಹಿಸಬಹುದಲ್ಲವೇ?

# ಶಾಂತಿ ಕಾಪಾಡಲು ಹಸುಳೆಯನ್ನೇ ಕೊಂದರು!

## ಫಾರ್ಬಸ್‌ಗಂಜ್ ಗೋಲಿಬಾರ್



● ಶಬೀರ್ ಕೆ.

ಇದನ್ನು ಮಾಡಿರುವುದು ಇಸ್ರೇಲ್‌ನ ಅಥವಾ ಗುಜರಾತ್‌ನ ನರೇಂದ್ರ ಮೋದಿಯ ಪೊಲೀಸರಲ್ಲ! ಬದಲಾಗಿ ಸೆಕ್ಯುಲರ್ ಎಂದು ಪೋಸು ನೀಡುತ್ತಿದ್ದ ನಿತೀಶ್ ಕುಮಾರ್ ನೇತೃತ್ವದ ಜೆಡಿಯು-ಬಿಜೆಪಿ ಮೈತ್ರಿ ಆಡಳಿತ ನಡೆಸುತ್ತಿರುವ ಬಿಹಾರದ ಪೊಲೀಸರು. ಪ್ರಾಥಮಿಕ ಅಗತ್ಯವಾದ ರಸ್ತೆಗಾಗಿ ಪ್ರತಿಭಟನೆ ನಡೆಸಿದ ಬಡ ಗ್ರಾಮಸ್ಥರನ್ನು ಪೊಲೀಸರು ನಿರಂಕುಶವಾಗಿ ಗುಂಡು ಹಾರಿಸಿ ಕೊಂದು ಹಾಕಿದರು. ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕಾಗಿ ಅವರು 5 ತಿಂಗಳ ಗರ್ಭಿಣಿ, 6 ತಿಂಗಳ ಪ್ರಾಯದ ಹಸುಳೆ ಹಾಗೂ 10 ವರ್ಷದ ಬಾಲಕನನ್ನೂ ಸೇರಿದಂತೆ ಆರು ಮಂದಿಯನ್ನು ಗುಂಡಿಕ್ಕಿ ಕೊಂದಿದ್ದರು! ಗುಂಡು ತಗುಲಿ ಅರೆ ಜೀವಾವಸ್ಥೆಯಲ್ಲಿ ಮಲಗಿದ್ದ 18 ವರ್ಷ ಪ್ರಾಯದ ಯುವಕನ ಮುಖದ ಮೇಲೆ ಪೊಲೀಸನೊಬ್ಬ ಕುಣಿಯುತ್ತಿದ್ದ. ಸಮಾನ ನ್ಯಾಯ, ಪ್ರಜೆಗಳಿಗೆ ಮೂಲಭೂತ ಹಕ್ಕುಗಳನ್ನು ನೀಡಬೇಕೆಂದು ಹೇಳಿರುವ ಸಂವಿಧಾನವನ್ನು ರಕ್ಷಿಸುವುದಕ್ಕಾಗಿ ಬಿಹಾರದ ಪೊಲೀಸರು ಇದನ್ನೆಲ್ಲಾ ಮಾಡಿದ್ದಾರೆ!

ಗ್ರಾಮಗಳ ನಡುವಿನ ರಸ್ತೆಯನ್ನು ಖಾಸಗಿ ಫ್ಯಾಕ್ಟರಿಯೊಂದಕ್ಕೆ ನೀಡಿರುವುದನ್ನು ವಿರೋಧಿಸಿ ಬಿಹಾರದ ಅರಾರಿಯಾ ಜಿಲ್ಲೆಯ ಫಾರ್ಬಸ್‌ಗಂಜ್ ಬ್ಲಾಕ್‌ನ ರಾಮ್‌ಪುರ ಮತ್ತು ಭಜನಾಪುರ ಗ್ರಾಮದ ಜನರು ಜೂನ್ 3ರ ಶುಕ್ರವಾರದಂದು ಜುಮ್ಮಾ ನಮಾಝಿನ ಬಳಿಕ ಪ್ರತಿಭಟನೆ ನಡೆಸುವುದಕ್ಕಾಗಿ ಸೇರಿದ್ದರು. ಈ ಎರಡೂ ಗ್ರಾಮಗಳು 90% ಮುಸ್ಲಿಮ್ ಜನಸಂಖ್ಯೆ ಇರುವಂತಹದ್ದಾಗಿದೆ. ಪೊಲೀಸರ ಗುಂಡಿಗೆ ಬಲಿಯಾದವರೆಲ್ಲಾ ಮುಸ್ಲಿಮರೇ ಆಗಿದ್ದಾರೆ. ಗ್ರಾಮಸ್ಥರಲ್ಲಿ ಹೆಚ್ಚಿನವರು ಗೋಣಿನಾರು ತೆಗೆಯುವ ಮಿಲ್‌ಗಳಲ್ಲಿ ಕೆಲಸ ಮಾಡುವವರಾಗಿದ್ದಾರೆ ಮತ್ತು ಬಡವರಾಗಿದ್ದಾರೆ.

ಪೊಲೀಸರು ಕೇವಲ ಪ್ರತಿಭಟನಾಕಾರರ ಮೇಲೆ ಗುಂಡಿನ ದಾಳಿ ನಡೆಸಿರುವುದು ಮಾತ್ರವಲ್ಲ. ಅವರನ್ನು ಅಟ್ಟಿಸಿಕೊಂಡು ಹೋಗಿ ಮನೆಗಳ ಮೇಲೂ ದಾಳಿ ನಡೆಸಿದ್ದರು. ಪೊಲೀಸರು ಇಬ್ಬರು ಮಹಿಳೆಯರನ್ನೊಳಗೊಂಡಂತೆ 6 ಮಂದಿಯನ್ನು ಕೊಂದು ಹಾಕಿದರು. ಪ್ರತಿಭಟನಾಕಾರರು ಕಂಪೆನಿಯ ವಾಹನಕ್ಕೆ ಬೆಂಕಿ ಹಚ್ಚಿದ್ದರು, ಆಯುಧಗಳನ್ನು ಹೊಂದಿದ್ದರು ಎಂದೆಲ್ಲಾ ಪೊಲೀಸರು ಹೇಳಿದ್ದರು ಮತ್ತು ಮಾಧ್ಯಮಗಳು ಅದನ್ನು ವರದಿ ಮಾಡಿದ್ದವು. ಆದರೆ ಗ್ರಾಮಸ್ಥರು ಹೇಳುವ ಪ್ರಕಾರ ಪೊಲೀಸರೇ ಈ ವಾಹನಗಳ ಮೇಲೆ ಬೆಂಕಿಯಿಟ್ಟಿದ್ದರು. ನಮ್ಮ ದೇಶದಲ್ಲಿ ಪೊಲೀಸರು ಇಂತಹ ಕುಕೃತ್ಯಗಳನ್ನು ಮಾಡಿದ ದೃಷ್ಟಾಂತಗಳಿರುವಾಗ ಇಲ್ಲಿ ನಾವು ಅಚ್ಚರಿ ಪಡಬೇಕೇನಿಲ್ಲ.

ರಹೀನಾ ಖಾತೂನ್ ಎಂಬ ಮಹಿಳೆ ತನ್ನ 6 ತಿಂಗಳ ಮಗು ಸಾಹಿಲ್ ಅನ್ಸಾರಿಯನ್ನು ಕಂಕುಳದಲ್ಲಿಟ್ಟುಕೊಂಡು ಆಸ್ಪತ್ರೆಯಿಂದ ಬರುತ್ತಿದ್ದಳು. ತನಗೆ ಮುಂದೆ ಇಂತಹ ದುರಂತವೊಂದು ಕಾದಿದೆಯೆಂದು ಆಕೆಗೆ ತಿಳಿದಿರಲಿಲ್ಲ. ಪೊಲೀಸರು ಎಸೆದ ಗುಂಡು ಆಕೆಯ ತೋಳನ್ನು ಸ್ಪರ್ಶಿಸಿ ನಂತರ ತನ್ನ ಕೈಯ್ಯಲ್ಲಿದ್ದ ಸಾಹಿಲ್‌ನ ಹೊಟ್ಟೆಯನ್ನು ಸೀಳಿತು. 24 ಗಂಟೆಗಳ ನಂತರ ಮಗು ಸಾವನ್ನಪಿತು.

18ರ ಹರೆಯದ ಮುಸ್ತಫಾ ಅನ್ಸಾರಿ ಕೂಡ ಪೊಲೀಸ್ ಗುಂಡಿಗೆ ಮೃತರಾದವರಲ್ಲಿ ಒಬ್ಬ. ಆತ ನಾಲ್ವರು ಸಹೋದರರು ಮತ್ತು ನಾಲ್ವರು ಸಹೋದರಿಯರನ್ನು ಹೊಂದಿದ್ದ. ಅಷ್ಫಿಯಾ ಚೌಕ್‌ನಲ್ಲಿದ್ದ ತನ್ನ ಪಾನ್ ಅಂಗಡಿಗೆ ತೆರಳುತ್ತಿದ್ದಾಗ ಪೊಲೀಸರು ಮುಸ್ತಫಾ ಅನ್ಸಾರಿಯ ಹಿಂಭಾಗಕ್ಕೆ ಗುಂಡಿಕ್ಕಿದ್ದರು. ಗುಂಡಿನ



1)ಕಂಪೆನಿಯು ಮುಚ್ಚಲು ನಿರ್ಧರಿಸಿದ್ದ ರಸ್ತೆ. 2) ಘಟನೆಯ ಸಂತ್ರಸ್ತರು.

ಹೊಡೆತಕ್ಕೆ ಸಿಲುಕಿ ಅರೆ ಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದ ಮುಸ್ತಫಾ ಅನ್ಸಾರಿಯ ಮೇಲೆ ಸುನೀಲ್ ಕುಮಾರ್ ಎಂಬ ಪೇದೆ ಕುಣಿಯುತ್ತಿದ್ದನು. ಆತನ ತಲೆಗೆ ಬೂಟುಗಾಲಿನಿಂದ ಥಳಿಸುತ್ತಿದ್ದನು. ಪೊಲೀಸನ ಈ ಪೈಶಾಚಿಕ ವರ್ತನೆಯನ್ನು ಮುಸ್ತಫಾನ ಸಹೋದರಿ ಖತೀಜಾ ದೂರದಲ್ಲಿ ನಿಂತು ವೀಕ್ಷಿಸುತ್ತಿದ್ದಳು. ಯೂಟ್ಯೂಬ್‌ನಲ್ಲಿ ಬಿತ್ತರಿಸಲ್ಪಟ್ಟ ಇದರ ವೀಡಿಯೊವನ್ನು ಕೆಲವು ಮಾಧ್ಯಮಗಳೂ ಪ್ರಕಟಿಸಿದ್ದವು. ಆ ನಂತರವಷ್ಟೇ ನೀತಿಶ್ ಕುಮಾರ್ ಸರಕಾರ ಆ ಪೇದೆಯನ್ನು ಕರ್ತವ್ಯದಿಂದ ವಜಾಗೊಳಿಸಿತ್ತು.

ಮುಸ್ತಫಾ ಅನ್ಸಾರಿಯ ಸಹೋದರಿ ಖದೀಜಾ ಮಾಧ್ಯಮವೊಂದಕ್ಕೆ ಹೇಳುವಂತೆ, ''ನನ್ನ ಸಹೋದರ ಅಫ್ಷಿಯಾ ಚೌಕ್‌ನಲ್ಲಿದ್ದ ಪಾನ್ ಶಾಪ್‌ಗೆ ಹೋಗುತ್ತಿದ್ದ. ಆ ದಿನದಂದು ಹಿರಿಯ ಸಹೋದರನು ಆ ಶಾಪನ್ನು ಮುಸ್ತಫಾನಿಗೆ ಹಸ್ತಾಂತರಿಸಿ, ಹೆಚ್ಚಿನ ಗಳಿಕೆಗಾಗಿ ತಾನು ಕಾಶ್ಮೀರಕ್ಕೆ ತೆರಳಲು ಉದ್ದೇಶಿಸಿದ್ದ. ಪ್ರತಿಭಟನಾಕಾರರು ಹೋದ ನಂತರ ನನ್ನ ಸಹೋದರನು ಈ ಪ್ರದೇಶದಲ್ಲಿ ರಸ್ತೆಯನ್ನು ದಾಟುತ್ತಿರುವ ವೇಳೆ ಪೊಲೀಸರು ಆತನ ಹಿಂಭಾಗಕ್ಕೆ ಗುಂಡಿಕ್ಕಿದ್ದರು. ಅರೆ ಪ್ರಜ್ಞಾವಸ್ಥೆಯಲ್ಲಿ ಬಿದ್ದಿದ್ದ ಅವನ ದೇಹವನ್ನು ಪೊಲೀಸನೊಬ್ಬ ತುಳಿಯುತ್ತಿದ್ದ. ಆತನ ದೇಹವು ನಿಶ್ಚಲವಾಗುವವರೆಗೆ ಅದು ಮುಂದುವರಿದಿತ್ತು.'' ( http://www.youtube.com/watch?v=Ncn2akDul9w)

ಮುಸ್ತಫಾ ಅನ್ಸಾರ್‌ನ ದೇಹವನ್ನು ಪೋಸ್ಟ್ ಮೋರ್ಟಮ್ ನಡೆಸಬೇಕಾಗಿದ್ದ ಡಾಕ್ಟರ್‌ಗಳು ದೇಹದಲ್ಲಿ ಇನ್ನೂ ಪ್ರಾಣವಿರುವುದನ್ನು ಗಮನಿಸಿ ಆತನನ್ನು ಉಳಿಸಲು ಪ್ರಯತ್ನಿಸಿದ್ದರು. ಆದರೆ ಅವರು ಪ್ರಯತ್ನದಲ್ಲಿ ಸಫಲರಾಗಲಿಲ್ಲ.

ಗುಂಡುಗಳು ಸಂತ್ರಸ್ತರ ತಲೆ, ಕುತ್ತಿಗೆ ಹಾಗೂ ಹೊಟ್ಟೆಗೆ ಹೊಕ್ಕಿರುವುದು ಪೊಲೀಸರ ಉದ್ದೇಶವು ಕೇವಲ ಆ ಬಡ ಜನರನ್ನು ಕೊಲ್ಲುವುದಾಗಿತ್ತು ಎಂಬುದಕ್ಕೆ ನಿದರ್ಶನವಾಗಿದೆ. ಅಲ್ಲದೆ ಪೊಲೀಸರು ಅವರ ಮನೆಗಳ ಮೇಲೆ ದಾಳಿ ನಡೆಸಿದ್ದರು. ಪೊಲೀಸರ ಈ ಕೃತ್ಯವು ನಾಗರಿಕ ಸಮಾಜವು ತಲೆ ತಗ್ಗಿಸುವಂತದ್ದಾಗಿದೆ.

ಗ್ರಾಮಸ್ಥರು ಹಲವು ವರ್ಷಗಳಿಂದ ಆ ರಸ್ತೆಯನ್ನು ಉಪಯೋಗಿಸುತ್ತಿದ್ದರು. ಇದು ಅವರನ್ನು ಆಸ್ಪತ್ರೆ, ಈದ್ಗಾ ಮೈದಾನ ಹಾಗೂ ಮಾರುಕಟ್ಟೆಗೆ ತಲುಪಿಸುತ್ತಿತ್ತು. ಆದರೆ ಕಳೆದ ಕೆಲವು ವರ್ಷಗಳಿಂದ ಅವರು ರಾಷ್ಟ್ರೀಯ ಹೆದ್ದಾರಿ 57ನ್ನು ಬಳಸಲು ಆರಂಭಿಸಿದ್ದರು. ಆದರೆ ನಂತರ ಈ ಹೆದ್ದಾರಿಯನ್ನು ಇನ್ನೂ ವಿಶಾಲಮಾಡಲಾದ ಕಾರಣ ಮತ್ತು ಅದರ ಮೇಲೆ ಫ್ಲೈಓವರ್‌ವೊಂದನ್ನು ನಿರ್ಮಿಸಲಾಗಿರುವುದರಿಂದಲೂ ಟ್ರಾಫಿಕ್ ತಪ್ಪಿಸುವುದಕ್ಕಾಗಿ ಜನರು ಮತ್ತೆ ತಮ್ಮ ಹಳೆಯ ರಸ್ತೆಯನ್ನೇ ಬಳಸಲು ಆರಂಭಿಸಿದ್ದರು. ತನ್ಮಧ್ಯೆ, ಈ ಗ್ರಾಮಗಳ ನಡುವಿನ ರಸ್ತೆಯನ್ನೊಳಗೊಂಡಂತೆ ಇರುವ ಭೂಮಿಯನ್ನು ಬಿಹಾರ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಪ್ರಾಧಿಕಾರವು ಔರೊ ಸುಂದರಾಮ್ ಇಂಟರ್‌ನ್ಯಾಶನಲ್ ಪ್ರೈವೇಟ್ ಲಿಮಿಟೆಡ್‌ಗೆ ನೀಡಿತ್ತು. ಬಿಜೆಪಿ ಶಾಸಕ ಅಶೋಕ್ ಅಗರ್ವಾಲ್‌ನ ಪುತ್ರ ಸೌರಭ್ ಅಗರ್ವಾಲ್ ಕಂಪೆನಿಯ ನಿರ್ದೇಶಕರಲ್ಲಿ ಒಬ್ಬರಾಗಿದ್ದರು.

ಕಂಪೆನಿಯು ಈ ರಸ್ತೆಯನ್ನು ಮುಚ್ಚಲು ನಿರ್ಧರಿಸಿತು. ಇದು ಗ್ರಾಮಸ್ಥರಲ್ಲಿ ನಿರಾಶೆಯನ್ನುಂಟುಮಾಡಿತು. ಅವರು ಪರ್ಯಾಯ ರಸ್ತೆಯೊಂದನ್ನು ನೀಡಬೇಕೆಂಬ ಬೇಡಿಕೆಯನ್ನು ಹೊರತುಪಡಿಸಿ ಇನೇನೂ ಇಟ್ಟಿರಲಿಲ್ಲ. ಕಂಪೆನಿ ಮೊದಲು ಇದಕ್ಕೆ ಒಪ್ಪಿತು. ಆದರೆ ನಂತರ ಗ್ರಾಮಸ್ಥರ ಬೇಡಿಕೆಯನ್ನು ತಳ್ಳಿ ಹಾಕಿತು. ಕಂಪೆನಿಯು ರಸ್ತೆಯನ್ನು ಮುಚ್ಚುವುದಕ್ಕೆ ಸಣ್ಣ ತಡೆಗೋಡೆಯನ್ನು ನಿರ್ಮಿಸಿತು. ಈ ಸುದ್ದಿಯು ಕಾಡ್ಗಿಚ್ಚಿನಂತೆ ಹರಡಿತು ಮತ್ತು ಗ್ರಾಮಸ್ಥರು ಜೂನ್ 3ರ ಶುಕ್ರವಾರದಂದು ಜುಮಾ ನಮಾಝ್‌ನ ನಂತರ ಪ್ರತಿಭಟನೆಯನ್ನು ಆರಂಭಿಸಿದರು.



*ಫಾರ್ಬಸ್‌ಗಂಜ್‌ನಲ್ಲಿ ಅಮಾಯಕ ಯುವಕನ ಮೇಲೆ ಪೊಲೀಸನೊಬ್ಬನ ರೌದ್ರನರ್ತನ*

ಅವರು ಆ ತಡೆಗೋಡೆಯನ್ನು ಧ್ವಂಸಗೊಳಿಸಿದರು. ನಂತರ ಮಧ್ಯ ಪ್ರವೇಶಿಸಿದ ಪೊಲೀಸರು ತಮ್ಮ ರುದ್ರ ನರ್ತನವನ್ನು ಪ್ರದರ್ಶಿಸಿದರು.

ಪೊಲೀಸ್ ಫೈರಿಂಗ್‌ಗೆ ನಿರ್ದೇಶನ ನೀಡಿದವರು ಎಸ್.ಪಿ ಗರಿಮ್ಮಾ ಮಲಿಕ್. ಈ ಸಂದರ್ಭದಲ್ಲಿ ಬಿಜೆಪಿ ಶಾಸಕ ಅಶೋಕ್ ಅಗರ್ವಾಲ್ ಮತ್ತು ಆತನ ಮಗ ಸೌರಭ್ ಅಗರ್ವಾಲ್ ಅಲ್ಲಿ ಉಪಸ್ಥಿತರಿದ್ದರು. ಗ್ರಾಮಸ್ಥರು ಆರೋಪಿಸುವಂತೆ ಪೊಲೀಸರು ಮಾತ್ರವಲ್ಲದೆ ಅಶೋಕ್ ಅಗರ್ವಾಲ್ ಕೂಡ ಜನರ ಮೇಲೆ ಗುಂಡೆಸೆದಿದ್ದರು .

ಮೇ 29ರಂದು ಉಪ ಮುಖ್ಯಮಂತ್ರಿಯಾಗಿರುವ ಸುಶಿಲ್ ಮೋದಿ ಫಾರ್ಬಸ್‌ಗಂಜ್‌ಗೆ ಭೇಟಿ ನೀಡಿ ಗ್ರಾಮದ ರಸ್ತೆಯನ್ನು ಮುಚ್ಚಲು ಕೂಡಲೇ ಕ್ರಮ ಕೈಗೊಳ್ಳುವಂತೆ ಸ್ಥಳೀಯ ಆಡಳಿತದ ಮೇಲೆ ಒತ್ತಡ ಹೇರಿದ್ದರು.

ಪೊಲೀಸರ ಈ ಪೈಶಾಚಿಕ ಕೃತ್ಯದ ಹೊರತಾಗಿಯೂ 'ಜಾತ್ಯತೀತ' ಮುಖ್ಯಮಂತ್ರಿ ನಿತೀಶ್ ಕುಮಾರ್ ಪೊಲೀಸರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಆದರೆ ಪೇದೆ ಸುನಿಲ್ ಯಾದವ್ ಗಾಯಾಳು ವ್ಯಕ್ತಿಯ ಮೇಲೆ ಕುಣಿಯುತ್ತಿರುವುದು ವೀಡಿಯೊದಲ್ಲಿ ಚಿತ್ರೀಕರಿಸಲ್ಪಟ್ಟಿರುವುದರಿಂದ ಮತ್ತು ಮಾಧ್ಯಮಗಳಲ್ಲಿ ಅದು ಪ್ರಕಟವಾದ ಕಾರಣ ಆತನನ್ನು ವಜಾಗೊಳಿಸಲಾಗಿದೆ. ನಿತೀಶ್ ಕೇವಲ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದು, ತನಿಖೆಯು ಮುಗಿಯುವ ತನಕ ಯಾವುದೇ ಕುಟುಂಬಕ್ಕೆ ಪರಿಹಾರ ನೀಡಲಾಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದ್ದಾರೆ. ಈ ಹಿಂದೆಯೂ ಹಲವು ನ್ಯಾಯಾಂಗ ತನಿಖೆಗಳು ಹಳ್ಳ ಹಿಡಿದಿರುವ ಮತ್ತು ಕ್ರಮಕೈಗೊಳ್ಳದೆ ಬಾಕಿಯಾಗಿರುವ ಉದಾಹರಣೆಗಳು ನಮ್ಮ ಮುಂದಿರುವುದರಿಂದ ಇದು ಪರಿಣಾಮಕಾರಿಯಾಗದೆಂಬುದು ಎಲ್ಲರಿಗೂ ತಿಳಿದಿರುವ ವಿಚಾರವೇ ಆಗಿದೆ. ಅಲ್ಲದೆ ಇದುವರೆಗೆ ನ್ಯಾಯಾಂಗ ತನಿಖಾ ತಂಡದ ನಾಯಕರಾಗಿ ಯಾರನ್ನು ಆಯ್ಕೆ ಮಾಡಲಾಗುವುದೆಂದು ಪ್ರಕಟಿಸಲಾಗಿಲ್ಲ.

ಆದರೆ ನಾಗರಿಕ ಹಕ್ಕು ಸಂಘಟನೆಗಳ ಒತ್ತಾಯದಿಂದ ಸರಕಾರ ಪೊಲೀಸರ ಗುಂಡೇಟಿನಲ್ಲಿ ಸಾವನ್ನಪ್ಪಿದ ಮಗುವಿನ ಕುಟುಂಬಕ್ಕೆ 3 ಲಕ್ಷ ರೂಪಾಯಿ ಪರಿಹಾರವನ್ನು ನೀಡಲು ಅಂತಿಮವಾಗಿ ಒಪ್ಪಿಕೊಂಡಿದೆ.

ನಿತೀಶ್ ಕುಮಾರ್ ಸರಕಾರವು ಮುಸ್ಲಿಮರನ್ನು ಬೇಟೆಯಾಡಿರುವುದು ಇದು ಮೊದಲ ಬಾರಿಯೇನಲ್ಲ.

39ನೇ ಪುಟಕ್ಕೆ

# ಕೆಎಫ್‌ಡಿಯ ಬೆನ್ನು ಬಿದ್ದ ರಾಜ್ಯಸರಕಾರ

**ಕೆ.ಎಂ.ಶರೀಫ್**
*ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ*
*ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ*

ಇಬ್ಬರು ವಿದ್ಯಾರ್ಥಿಗಳನ್ನು ಅಪಹರಿಸಿ ಒತ್ತೆ ಹಣದ ಬೇಡಿಕೆ ಇಟ್ಟು ನಂತರ ಆ ಮಕ್ಕಳನ್ನು ಬರ್ಬರವಾಗಿ ಕೊಂದ ಘಟನೆಯನ್ನು ಎಲ್ಲರೂ ಖಂಡಿಸಬೇಕಾಗಿದೆ. ನಾಗರಿಕ ಸಮಾಜ ತಲೆತಗ್ಗಿಸುವಂತೆ ಮಾಡಿದ ಈ ಘಟನೆಯನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಪ್ರಥಮ ಹಂತದಲ್ಲೇ ಖಂಡಿಸಿದೆ ಹಾಗೂ ಈ ಘಟನೆ ನಡೆದ ತಕ್ಷಣ ಹುಣಸೂರಿನಲ್ಲಿ ಎಸ್‌ಡಿಪಿಐ ಹಾಗೂ ಇತರ ಸಮಾಜಮುಖಿ ಸಂಘಟನೆಗಳೊಂದಿಗೆ ಬೀದಿಗಿಳಿದು ಅಪರಾಧಿಗಳನ್ನು ಬಂಧಿಸುವಂತೆ ಪ್ರತಿಭಟನೆಯನ್ನೂ ನಡೆಸಿದೆ.

ಕೆಎಫ್‌ಡಿ ಎಂಬ ಸಂಘಟನೆ ಪಾಪ್ಯುಲರ್ ಫ್ರಂಟ್‌ನಲ್ಲಿ ವಿಲೀನಗೊಂಡು ವರ್ಷಗಳೇ ಕಳೆಯಿತು. ಕೇರಳ, ಕರ್ನಾಟಕ ಮತ್ತು ತಮಿಳುನಾಡು ಸೇರಿದಂತೆ ದೇಶದ ಹಲವು ರಾಜ್ಯಗಳ ಸಮಾನ ಮನಸ್ಕ ಸಂಘಟನೆಗಳನ್ನು ಒಟ್ಟು ಸೇರಿಸಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಎಂಬ ಸಂಘಟನೆಯನ್ನು ರಚಿಸಲಾಯಿತು. ಆದುದರಿಂದ ಕರ್ನಾಟಕದಲ್ಲಿ ಕೆಎಫ್‌ಡಿ ಎಂಬ ಸಂಘಟನೆ ಅಸ್ತಿತ್ವದಲ್ಲಿಲ್ಲ. ಆದಾಗ್ಯೂ ಕೆಎಫ್‌ಡಿ ಎಂಬ ಹೆಸರು ಜನಜನಿತ ವಾಗಿದೆ. ಆದುದರಿಂದ ಕೆಎಫ್‌ಡಿಯ ಹೆಸರು ಬಂದಾಗಲೆಲ್ಲ ಪಾಪ್ಯುಲರ್ ಫ್ರಂಟ್ ಮುಂದೆ ಬಂದು ಉತ್ತರಿಸಬೇಕಾಗಿದೆ. ಕೆಎಫ್‌ಡಿಯ ಹೆಸರನ್ನು ದುರ್ಬಳಕೆ ಮಾಡುವಾಗಲೆಲ್ಲಾ ಒಂದು ಹಂತದವರೆಗೆ ಇದು ಅನಿವಾರ್ಯವೆನಿಸುತ್ತದೆ.

ಕರ್ನಾಟಕದಲ್ಲಿ ಒತ್ತೆ ಹಣಕ್ಕಾಗಿ ಜನರನ್ನು ಕೊಂದ ಘಟನೆ ಇದು ಮೊದಲೇನಲ್ಲ. ಈ ಘಟನೆಯನ್ನು ಅವುಗಳೊಂದಿಗೆ ಸಮೀಕರಿಸುವಂತೆಯೂ ಇಲ್ಲ. ಆದರೆ ರಾಜ್ಯ ಸರಕಾರದ ಗೃಹಮಂತ್ರಿಗಳು ಸ್ವತಹ ಪತ್ರಿಕಾಗೋಷ್ಠಿ ಕರೆದು ''ಈ ಕೃತ್ಯವನ್ನು ಕೆಎಫ್‌ಡಿಯವರು ಮಾಡಿದ್ದಾರೆ. ಆರು ಮಂದಿ ಕೆಎಫ್‌ಡಿ ಕಾರ್ಯಕರ್ತರನ್ನು ಬಂಧಿಸಲಾಗಿದೆ. ಸಂಘಟನೆಗೆ ಹಣ ಜೋಡಿಸುವುದಕ್ಕಾಗಿ ಈ ಕೃತ್ಯ ಎಸಗಲಾಗಿದೆ. ಈ ಸಂಘಟನೆಯನ್ನು ನಿಷೇಧಿಸುವ ಬಗ್ಗೆ ಚಿಂತನೆ ನಡೆಸುತ್ತೇವೆ'' ಎಂಬ ಬೇಜವಾಬ್ದಾರಿ ಹೇಳಿಕೆ ಕೊಟ್ಟ ನಂತರ ಈ ಕ್ರಿಮಿನಲ್ ಕೃತ್ಯ ರಾಜಕೀಯ ಬಣ್ಣವನ್ನು ಪಡೆಯಿತು. ಸಾಮಾನ್ಯವಾಗಿ ಇಂತಹ ಘಟನೆಗಳನ್ನು ಪೊಲೀಸ್ ಇಲಾಖೆ ಆಧಾರ ಸಹಿತ ಪತ್ರಿಕಾಗೋಷ್ಠಿ ಕರೆದು ಬಹಿರಂಗಪಡಿಸುವುದು ವಾಡಿಕೆ. ಆದರೆ ಈ ಘಟನೆಯಲ್ಲಿ ಹಾಗೆ ನಡೆಯಲಿಲ್ಲ. ರಾಜ್ಯ ಸರಕಾರಕ್ಕೆ ತನ್ನ ಹಿಡನ್ ಅಜೆಂಡಾ ಗಳಲ್ಲಿ ಒಂದನ್ನು ಜನರ ಮುಂದಿಡುವ ಯೋಜನೆ ಇತ್ತು.

ಈ ಕ್ರಿಮಿನಲ್ ಕೃತ್ಯಗಳಲ್ಲಿ ಭಾಗಿಯಾದವರು ಕೆಎಫ್‌ಡಿ ಕಾರ್ಯಕರ್ತರು, ಸಂಘಟನೆಗೆ ಹೇರಳ ಮೊತ್ತದ ಒತ್ತೆ ಹಣವನ್ನು ಕೊಟ್ಟು ಸಹಕರಿಸಲು ಈ ಕೃತ್ಯವನ್ನು ಎಸಗಲಾಗಿದೆ ಎಂಬ ಕಪೋಲಕಲ್ಪಿತ ವರದಿಗಳು ಕನ್ನಡ ಚಾನೆಲ್‌ಗಳಲ್ಲಿ ರಾರಾಜಿಸತೊಡಗಿದವು. ಮರುದಿನ ಪತ್ರಿಕೆಗಳ ಮುಖಪುಟಗಳಲ್ಲೂ ವಾರ್ತೆ ಮಸಾಲೆ ಸಹಿತ ಪ್ರಕಟವಾಯಿತು. ಅಲ್ಲಿಗೆ ಆರೆಸ್ಸೆಸ್ಸಿನ ಪುಟ್ಟ ಅಜೆಂಡಾವೊಂದನ್ನು ರಾಜ್ಯ ಸರಕಾರ ಜನರ ಮುಂದೆ ತೆರೆದಿಟ್ಟಿತು.

**ಏನಿದು ಅಜೆಂಡಾ?**

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ದೇಶಾದ್ಯಂತ ಅಲ್ಪಸಂಖ್ಯಾತರ ಸಬಲೀಕರಣಕ್ಕಾಗಿ ದುಡಿಯುವ ಸಂವಿಧಾನಬದ್ಧ ಸಂಘಟನೆ. ಶಿಕ್ಷಣದಲ್ಲಿ ಹಿಂದುಳಿಯುವಿಕೆ, ಬಡತನ, ಸಾಮಾಜಿಕ ಅಸಮಾನತೆ, ರಾಜಕೀಯ ಅಸ್ಥಿರತೆ ಮುಂತಾದ ಕ್ಷೇತ್ರಗಳಲ್ಲಿ ಮುಸ್ಲಿಮರನ್ನು ಜಾಗೃತಗೊಳಿಸಿ ಅದನ್ನು ಮೀರುವ ಸ್ಥಿತಿಯ ಬಗ್ಗೆ ಚಿಂತಿಸುವವರನ್ನಾಗಿ ಮಾಡುವ ಕೆಲಸವನ್ನು ಈ ಸಂಘಟನೆ ಮಾಡುತ್ತಿದೆ. ಜೊತೆಗೆ ದೇಶದ ಆಂತರಿಕ ಸುಭದ್ರತೆಗೆ ಸವಾಲಾಗಿರುವ ಆರೆಸ್ಸೆಸ್ ಮತ್ತು ಪರಿವಾರದ ಬಗ್ಗೆ ಜನರಿಗೆ ಎಚ್ಚರಿಕೆ ನೀಡುವ ಕೆಲಸವನ್ನೂ ಸಂಘಟನೆ ಎತ್ತಿಕೊಂಡಿದೆ.

ಈ ದೇಶದಲ್ಲಿ ಸುಮಾರು ಎಂಟು ದಶಕಗಳ ಕಾಲ ಆರೆಸ್ಸೆಸ್ ನಡೆಸಿದ ವಿಧ್ವಂಸಕ ಕೃತ್ಯಗಳನ್ನು ಅದರ ಕೋಮುವಾದಿ ಅಜೆಂಡಾಗಳನ್ನು ಪುರಾವೆ ಸಹಿತ ಜನರ ಮುಂದೆ ಇಡುತ್ತದೆ.

ಯಾವ ಸಮುದಾಯವನ್ನು ಆರೆಸ್ಸೆಸ್ ತನ್ನ ವಿಧ್ವಂಸಕ ಕೃತ್ಯಕ್ಕೆ ಗುರಿಯಾಗಿಸಿತ್ತೋ ಮತ್ತು ಇಷ್ಟು ವರ್ಷಗಳ ಕಾಲ ಸಮುದಾಯವನ್ನು ಬೆದರಿಸಿ ತೆಪ್ಪಗಾಗಿಸಿತ್ತೋ ಅದೇ ಸಮುದಾಯದಿಂದ ಸಂಘಟನೆಯೊಂದು ಬೆಳೆದು ಬಂದು ತಮ್ಮ ಎದುರು ನಿಂತು ಮಾತನಾಡುತ್ತಾ ನಿಜಬಣ್ಣವನ್ನು ಬಯಲು ಮಾಡತೊಡಗಿದಾಗ ಇಡೀ ಮುಸ್ಲಿಮ್ ಸಮುದಾಯದಿಂದ ತನ್ನ ಗುರಿಯನ್ನು ಆರೆಸ್ಸೆಸ್ ತಾತ್ಕಾಲಿಕವಾಗಿ ಆ ಸಂಘಟನೆಯತ್ತ ಬದಲಾಯಿಸಿದ್ದಲ್ಲಿ ಆಶ್ಚರ್ಯವೇನಿಲ್ಲ. ಎಲ್ಲೆಲ್ಲಾ ತನ್ನ ವಾನರ ಗುಂಪುಗಳಿಂದ ಮುಸ್ಲಿಮರ ಮೇಲೆ ದೈಹಿಕ ಹಲ್ಲೆ ನಡೆಸಲಾಗುತ್ತೋ ಅಲ್ಲಿ ಹಲ್ಲೆ, ಎಲ್ಲೆಲ್ಲಿ ಕೋಮುಗಲಭೆ ಹೆಸರಿನಲ್ಲಿ ಗಲಭೆ ಸೃಷ್ಟಿಸಿ ಮುಸ್ಲಿಮರ ಮಾರಣ ಹೋಮ ಮಾಡಲಾಗುತ್ತೋ ಅಲ್ಲಿ ಮಾರಣಹೋಮ, ಎಲ್ಲೆಲ್ಲಿ ತನ್ನ ಪಕ್ಷದ ಆಡಳಿತವಿದೆಯೋ ಅಲ್ಲಿ ಸರಕಾರಿ ಯಂತ್ರವನ್ನು ಉಪಯೋಗಿಸಿ ಮುಸ್ಲಿಮರ ಬಂಧನ, ಪೊಲೀಸರಿಂದ ಹಲ್ಲೆ, ಕೇಸು ದಾಖಲಿಸುವುದು ಇತ್ಯಾದಿ ನಡೆಯುತ್ತಲೇ ಇದೆ. ಯಾಕೆಂದರೆ, ಇದನ್ನು ನಡೆಸದಿದ್ದರೆ ಆರೆಸ್ಸೆಸ್ ಆರೆಸ್ಸಾಗುವುದಿಲ್ಲ. ಬಿಜೆಪಿ ಬಿಜೆಪಿಯಾಗುವುದಿಲ್ಲ. ಯಾಕೆಂದರೆ ಇದು ಹಿಂದು ರಾಷ್ಟ್ರ ನಿರ್ಮಾಣ ಕನಸು ಕಾಣುವವರಿಗೆ ಅನಿವಾರ್ಯ. ಇದನ್ನು ವಿರೋಧಿಸುವ ಯಾವ ಸಂಘಟನೆಯನ್ನೂ, ಯಾವ ಚಳವಳಿಯನ್ನೂ ಇವರು ಸಹಿಸುವುದಿಲ್ಲ. ಅದು ಮುಸ್ಲಿಮರ ಸಂಘಟನೆಯಿರಲಿ, ದಲಿತ ಸಂಘಟನೆಯಿರಲಿ, ಪ್ರಗತಿಪರ ಸಂಘಟನೆಯಿರಲಿ, ಕ್ರೈಸ್ತ ಸಂಘಟನೆಯಿರಲಿ.

ಇಂತಹ ಯಾವುದೇ ಬೆದರಿಕೆಗೂ ಮಣಿಯದೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ; ಹುಟ್ಟಿದಂದಿನಿಂದ ಕಾರ್ಯಚಟುವಟಿಕೆಯಲ್ಲಿದೆ. ಇಂತಹ 'ಕೆಎಫ್‌ಡಿ'ಯನ್ನು ಜನರ ಮುಂದೆ ಭಯೋತ್ಪಾದಕ ಸಂಘಟನೆಯಾಗಿ, ಕೇಡಿ ಸಂಘಟನೆಯಾಗಿ, ಸಮಾಜದ ಸ್ವಾಸ್ಥ್ಯ ಕೆಡಿಸುವ ಸಂಘಟನೆಯಾಗಿ, ಕೋಮುವಾದಿ ಸಂಘಟನೆಯಾಗಿ, ಕೊಲೆಗಾರರ ಸಂಘಟನೆಯಾಗಿ ಜನರ ಮುಂದೆ ಇಡುವ ಪ್ರಯತ್ನವನ್ನು ಬಿಜೆಪಿ ಸರಕಾರ ಹಲವು ವರ್ಷಗಳಿಂದ ಮಾಡುತ್ತಿದೆ. ಇಂದು ಕೂಡ ಕ್ರಿಮಿನಲ್ ಕೃತ್ಯವೊಂದಕ್ಕೆ ಕೋಮುಬಣ್ಣ ಕೊಡುವ, ಅದರೊಂದಿಗೆ ಕೆಎಫ್‌ಡಿಯನ್ನು ಥಳಕು ಹಾಕುವ ಹೀನ ಅಜೆಂಡಾವೊಂದನ್ನು ಸರಕಾರ ಕೈಗೆತ್ತಿಕೊಂಡಿದೆ.

**ಅಪಪ್ರಚಾರ ಹೊಸತಲ್ಲ**

ದೇಶದಲ್ಲಿ ನಡೆಯುವ ಯಾವುದೇ ಸಮಾಜಬಾಹಿರ ಕೃತ್ಯಗಳೊಂದಿಗೆ ಪಾಪ್ಯುಲರ್ ಫ್ರಂಟ್‌ನ್ನು ಜೋಡಿಸಿ ಸಂಘಟನೆಗೆ ಮಸಿ ಬಳಿಯುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಕರ್ನಾಟಕದ ಮೈಸೂರಿನಲ್ಲಿ ಹಾಗೂ ಮಂಗಳೂರಿನಲ್ಲಿ ನಡೆದ


ಗೃಹ ಸಚಿವ ಆರ್ ಅಶೋಕ್

ಗಲಭೆಯ ಆರೋಪವನ್ನು ಪಾಪ್ಯುಲರ್ ಫ್ರಂಟ್‌ನ ಹೆಸರಿನೊಂದಿಗೆ ಥಳಕು ಹಾಕಲಾಯಿತು. ಲವ್‌ಜಿಹಾದ್ ಮತ್ತು ಮತಾಂತರದ ದೊಡ್ಡ ಚರ್ಚೆ ನಡೆಯುತ್ತಿರುವಾಗ ಪಾಪ್ಯುಲರ್ ಫ್ರಂಟ್‌ನ ಹೆಸರನ್ನು ಎಳೆದು ತರಲಾಯಿತು. ಫ್ರಾನ್ಸ್‌ನಲ್ಲಿ ತಮಿಳುನಾಡಿನ ಯುವಕನೊಬ್ಬನನ್ನು ಬಂಧಿಸಿದಾಗ ಅಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಫ್ರಾನ್ಸ್ ರಚಿಸಲಿದ್ದಾನೆ, ಅವನಿಗೆ ಅಲ್‌ಖಾಯಿದದೊಂದಿಗೆ ನಂಟು ಇದೆ. ಆತ ಇಲ್ಲಿನ ಪಾಪ್ಯುಲರ್ ಫ್ರಂಟ್‌ನ ಸದಸ್ಯ ಎಂದು ಬಿಂಬಿಸಲಾಯಿತು. ಆದರೆ ಇವೆಲ್ಲವೂ ಸತ್ಯಕ್ಕೆ ದೂರವಾದದ್ದು ಎಂದು ಮತ್ತೆ ಸಾಬೀತಾಯಿತು. ಮೈಸೂರಿನ ಗಲಭೆಗೆ ಮುಖ್ಯ ಕಾರಣ ಪ್ರಮೋದ್ ಮುತಾಲಿಕ್. ಕಡಿದ ಹಂದಿಯ ರುಂಡವನ್ನು ಮಸೀದಿಯ ಮುಂದಿಟ್ಟದ್ದು. ಇದನ್ನು ಮುಂದಿಟ್ಟು ಮುಸ್ಲಿಮರು ಪ್ರತಿಭಟಿಸಿದ್ದನ್ನು ನೆಪವಾಗಿಟ್ಟುಕೊಂಡು ಅವರ ಮನೆಗಳಿಂದ ಗಂಡಸರು, ಹೆಂಗಸರು ಮಕ್ಕಳು ಎಂಬ ಭೇದವಿಲ್ಲದೆ ಪೊಲೀಸರು ದೌರ್ಜನ್ಯ ನಡೆಸಿದರು. ಇದರ ವಿರುದ್ಧ ಪಾಪ್ಯುಲರ್ ಫ್ರಂಟ್ 'ಜೈಲ್‌ಭರೋ' ನಡೆಸಿತು. ಜೈಲ್ ಭರೋ ನಡೆಸಿದ ಸಂದರ್ಭ ನೂರಾರು ಜನ ಕಾರ್ಯಕರ್ತರು ಸೇರಿದಂತೆ ಹಲವು ಮಂದಿ ಮುಸ್ಲಿಮ್ ಯುವಕರನ್ನೂ ಸರಕಾರ ಮೂರು ತಿಂಗಳ ಕಾಲ ಅಕ್ರಮ ಬಂಧನದಲ್ಲಿರಿಸಿತು. ವಿಚಾರಣೆಯ ಬಳಿಕ ಕರ್ನಾಟಕ ಹೈಕೋರ್ಟು ಪೊಲೀಸರಿಗೆ ಛೀಮಾರಿ ಹಾಕಿತು ಮತ್ತು ದಂಡ ವಿಧಿಸಿತ್ತು. ರಾಜ್ಯದ ನಾನಾ ಕಡೆಗಳಿಂದ ಸೇರಿದ ಬುದ್ಧಿಜೀವಿಗಳು ಸತ್ಯಶೋಧನೆ ಕೈಗೊಂಡು ವರದಿ ಪ್ರಕಟಿಸಿದರು. ಅದರಲ್ಲಿ ಪಾಪ್ಯುಲರ್ ಫ್ರಂಟ್ ಗಲಭೆಗೆ ಕಾರಣ ಎಂದು ಎಲ್ಲೂ ಬರೆದಿಲ್ಲ.

ಲವ್ ಜಿಹಾದ್‌ನಲ್ಲಿ ಒಂದೇ ಒಂದು ಘಟನೆಯನ್ನು ಪಾಪ್ಯುಲರ್ ಫ್ರಂಟ್‌ನೊಂದಿಗೆ ಜೋಡಿಸಲು ಸಾಧ್ಯವಾಗದೆ, ತಮ್ಮ ಪಾತ್ರವನ್ನು ನಿರಾಕರಿಸುವ ಹೇಳಿಕೆಯನ್ನು ಕೇರಳ ಡಿಜಿಪಿ ನೀಡಿದರು. ಲವ್‌ಜಿಹಾದ್ ನಲ್ಲಿ ಕರ್ನಾಟಕದ ಪಾಪ್ಯುಲರ್ ಫ್ರಂಟ್‌ನ ಭಾಗವಹಿಸುವಿಕೆ ಯನ್ನು ಕೂಡ ಇಲ್ಲಿನ ಪೊಲೀಸ್ ಇಲಾಖೆ ನಿರಾಕರಿಸಿತು.

ಹೀಗೆ ಪಾಪ್ಯುಲರ್ ಫ್ರಂಟನ್ನು ಗುರಿಯಾಗಿಸಿ ಆರೋಪಗಳನ್ನು ಮಾಡುವಾಗಲೆಲ್ಲಾ ಆಧಾರ ರಹಿತವಾಗಿರುತ್ತದೆ ಎಂಬುದನ್ನು ಜನರು ತಿಳಿದುಕೊಂಡಿದ್ದಾರೆ. ನಮಗೆ ಇಂಡಿಯಾದ ಹೊರಗೆ ಯಾವ ದೇಶದಲ್ಲೂ ಸಂಘಟನೆ ಇಲ್ಲ. ನಮ್ಮ ಸಂಘಟನೆ ದೇಶದ ಅಥವಾ ಹೊರದೇಶದ ಯಾವುದೇ ಸಂಘಟನೆಯ ಒಂದು ಅಂಗವಾಗಲೀ, ಭಾಗವಾಗಲೀ ಅಲ್ಲ. ನಮ್ಮ ದೇಶದ ಸಂವಿಧಾನಕ್ಕೆ ವಿರುದ್ಧವಾದ ಯಾವುದೇ ಅಜೆಂಡಾ ನಮ್ಮ ಬಳಿ ಇರುವುದಿಲ್ಲ.

**ಹಣದ ಮೂಲ**

ಎಲ್ಲರಿಗೂ ಕುತೂಹಲವಿರುವುದು ಸಂಘಟನೆಯ ಹಣದ ಮೂಲದ ಬಗ್ಗೆ. ಈಗಾಗಲೇ ಪಾಪ್ಯುಲರ್ ಫ್ರಂಟ್‌ನ ರಾಜ್ಯಾಧ್ಯಕ್ಷ ಇಲ್ಯಾಸ್ ತುಂಬೆ ಸಂಘಟನೆಯ ಹಣದ ಮೂಲದ ಬಗ್ಗೆ ಜನರ ಮುಂದೆ ಹೇಳಿಕೊಂಡಿದ್ದಾರೆ. ನಮ್ಮ ಹಣದ ಮೂಲ ಮೆಂಬರ್‌ಶಿಪ್ ಮತ್ತು ಸಾರ್ವಜನಿಕರು. ನಾವು ನಡೆಸುವ ಜನಪರ ಕಾರ್ಯಕ್ರಮಗಳು, ರ್‍ಯಾಲಿಗಳು, ಪ್ರತಿಭಟನೆಗಳು, ಬಹಳ ಯಶಸ್ಸು ಕಾಣುತ್ತಿದೆ. ಈ ಯಶಸ್ಸನ್ನು ನಾವು ಹಣ ಬಲದಿಂದ ಮಾಡುತ್ತಿದ್ದೇವೆ ಎಂಬ ಭಾವನೆ ಕೆಲವರಿಗೆ ಇದ್ದಂತಿದೆ. ಯಾಕೆಂದರೆ, ರಾಜಕೀಯ ಪಕ್ಷಗಳು, ಕೆಲವು ಸಂಘಟನೆಗಳು ತಮ್ಮ ಕಾರ್ಯಕ್ರಮವನ್ನು ಯಶಸ್ಸುಗೊಳಿಸುವ ಹೇರಳವಾದ ಹಣ ಖರ್ಚು ಮಾಡಿ ಜನರನ್ನು ಸೇರಿಸುವ ಪರಿಪಾಠವಿದೆ. ನಮ್ಮನ್ನು ಕೂಡ ಹಾಗೇ ಎಂದು ಭಾವಿಸಿದ್ದಾರೆ.

ಆದರೆ ನಮ್ಮದು ಕೇಡರ್ ಸಂರಚನೆಯಿರುವ ಸಂಘಟನೆ. ಎಲ್ಲ ವಿಷಯದಲ್ಲಿ ಶಿಸ್ತು ಇರುವಂತೆ ಹಣದ ವಿಚಾರದಲ್ಲೂ ನಮ್ಮ ಸಂಘಟನೆಗೆ ಶಿಸ್ತು ಇದೆ. ಅತ್ಯಂತ ಕಡಿಮೆ ಖರ್ಚಿನಲ್ಲಿ ಕಾರ್ಯಕ್ರಮ ಯಶಸ್ಸುಗೊಳಿಸುವ ಗುಣ ಕೇಡರ್ ಸಂಘಟನೆಗೆ ಇರುತ್ತದೆ. ಇದರ ಅರ್ಥ ಹಣ ಬೇಡವೆಂದಲ್ಲ. ಬೇಕಾದ ಹಣವನ್ನು ಆಯಾಯ ಕಾರ್ಯಕ್ರಮದ ಸಂದರ್ಭದಲ್ಲಿ ನಾವು ಒಟ್ಟುಗೂಡಿಸುತ್ತೇವೆ. ಜನರ ನಮಗೆ ಕೊಡುತ್ತಾರೆ. ನಮ್ಮ ಮೆಂಬರ್‌ಶಿಪ್‌ನ ಹಣ ಸಂಘಟನೆ ನಡೆಸಲು ನಮಗೆ ಸಾಕಾಗುತ್ತದೆ. ಸಂಘಟನೆ ಇಷ್ಟು ಬೆಳೆದಿದ್ದರೂ ಕರ್ನಾಟಕದಲ್ಲಿ ನಮಗೆ ಇದುವರೆಗೆ ಸ್ವಂತ ನಿವೇಶನವಿಲ್ಲ. ಬೇನಾಮಿ ಆಸ್ತಿಯೂ ಇಲ್ಲ. ನಮ್ಮದೇನಿದ್ದರೂ ಜನಪರ ಹೋರಾಟಕ್ಕೆ ಮೀಸಲು. ಇಬ್ಬರು ಮಕ್ಕಳನ್ನು ಕೊಂದು ಒತ್ತೆ ಹಣದಿಂದ ಸಂಘಟನೆಯನ್ನು ನಡೆಸುವ ಜರೂರತ್ತೂ ನಮಗಿಲ್ಲ.

**ನಮ್ಮ ಕಾರ್ಯಕರ್ತರು ಹೇಗಿರುತ್ತಾರೆ?**

ಸಂಘಟನೆಯ ಆದರ್ಶವನ್ನು ಕಾಪಾಡಿಕೊಂಡು ಬರುವ ದೇಶದ ಪ್ರಗತಿಗಾಗಿ ದುಡಿಯುವ ಸಬಲೀಕರಣಕ್ಕಾಗಿ ಹೋರಾಟ ನಡೆಸುವವರಾಗಿರುತ್ತಾನೆ ನಮ್ಮ ಕಾರ್ಯರ್ತ. ಈ ನಿಟ್ಟಿನಲ್ಲೇ ಸಂಘಟನೆ ತನ್ನ ಕಾರ್ಯಕರ್ತನಿಗೆ ತರಬೇತಿ ನೀಡುತ್ತದೆ. ಇದಕ್ಕೆ ಹೊರತಾಗಿರುವವ ನಮ್ಮ ಸಂಘಟನೆಯ ಸದಸ್ಯನಾಗಿರುವುದಿಲ್ಲ. ಸಂಘಟನೆ ಒಂದು ವೇಳೆ ಕ್ರಿಮಿನಲ್‌ಗಳನ್ನು ಬೆಳೆಸುವುದಾದರೆ ಈ ಹತ್ತು ವರ್ಷಗಳಲ್ಲಿ ಕರ್ನಾಟಕದಲ್ಲಿ ಎಷ್ಟು ಕ್ರಿಮಿನಲ್‌ಗಳನ್ನು ಬೆಳೆಸುತ್ತಿತ್ತು?! ಎಷ್ಟು ಜನರ ತಲೆ ಒಡೆದು ಹಣ ಮಾಡುತ್ತಿತ್ತು? ಸರಕಾರ ಮತ್ತು ಕೆಲವು ಮಾಧ್ಯಮಗಳು ನಡೆಸುತ್ತಿರುವ ಕಪೋಲಕಲ್ಪಿತ ವರದಿಗಳು ಕರ್ನಾಟಕದ ಅಲ್ಪಸಂಖ್ಯಾತ ಮುಸ್ಲಿಮರ ಸಂಸ್ಕೃತಿಯನ್ನೇ ಅಣಕಿಸುವಂತಿದೆ. ಮುಸ್ಲಿಮರನ್ನು ಸಂಘಟನೆಯಿಂದ ದೂರ ಮಾಡುವ ಕೀಳು ಅಭಿರುಚಿ ವ್ಯಕ್ತವಾಗುತ್ತಿದೆ.

**ನಿಷ್ಪಕ್ಷ ತನಿಖೆ ಅಗತ್ಯವಿದೆ**

ಸಂಘಟನೆ ಇಲ್ಲಿನ ಲಾ ಆ್ಯಂಡ್ ಆರ್ಡರ್‌ನ ಮೇಲೆ ನಂಬಿಕೆ ಇಟ್ಟಿದೆ. ಈ ಘಟನೆಗೆ ರಾಜಕೀಯ ಬಣ್ಣ ಈಗಾಗಲೇ ಬಂದಿದೆ. ಕೋಮುವಾದಿ ಬಣ್ಣವನ್ನು ಕೊಡುವ ಹುನ್ನಾರವೂ ನಡೆಯುತ್ತಿದೆ. ಈ ಕ್ರಿಮಿನಲ್ ಘಟನೆಯೊಂದನ್ನು ಮುಂದಿಟ್ಟುಕೊಂಡು ಮುಸ್ಲಿಮರ ಸಂಘಟನೆಯನ್ನು ನಿಷೇಧಿಸುವ ಪುಕಾರು ಕೂಡ ಎದ್ದಿದೆ. ಈ ನಿಟ್ಟಿನಲ್ಲಿ ನಿಷ್ಪಕ್ಷಪಾತ ಸ್ವತಂತ್ರ ತನಿಖೆ ನಡೆಯಬೇಕಾಗಿದೆ. ಕುಮಾರಸ್ವಾಮಿ ಸರಕಾರದ ಜೊತೆಗೆ ಬಿಜೆಪಿ ಭಾಗಿಯಾಗಿದ್ದಾಗ ಮತ್ತು ಬಿಜೆಪಿ ಸ್ವತಂತ್ರವಾಗಿ ಸರಕಾರ ರಚಿಸಿದ ನಂತರ ಕರ್ನಾಟಕದಲ್ಲಿ ನಡೆದ ಕೋಮುವಾದಿ ಘಟನೆಗಳನ್ನೆಲ್ಲ ತನಿಖೆ ನಡೆಸಬೇಕು. ಆಗ ನಿಷೇಧಿಸಬೇಕಾಗಿ ಬರುವ ಸಂಘಟನೆಗಳಲ್ಲಿ ಪಾಪ್ಯುಲರ್ ಫ್ರಂಟ್ ಎಷ್ಟನೇ ಸ್ಥಾನದಲ್ಲಿ ನಿಲ್ಲುತ್ತದೆ ಎಂದು ಜನರಿಗೆ ತಿಳಿಯುತ್ತದೆ. ಇಂತಹ ತನಿಖೆಗಳಿಂದ ಜನಪರ ಕಾಳಜಿಯುಳ್ಳ ಸಾಮಾಜಿಕ ಚಳವಳಿಯನ್ನು ಪ್ರಭುತ್ವ ಮಟ್ಟ ಹಾಕುವುದು ಯಾಕೆ ಎಂಬುದನ್ನೂ ಜನ ತಿಳಿಯುವಂತಾಗುತ್ತದೆ.

ಭ್ರಷ್ಟಾಚಾರ, ಕೋಮುವಾದ, ಮತಾಂಧತೆ, ಗಣಿಲೂಟಿ, ಲ್ಯಾಂಡ್ ಮಾಫಿಯಾ ಮುಂತಾದ ಚಟುವಟಿಕೆಗಳಿಂದ ಮಾನಹರಣಗೊಂಡ ಬಿಜೆಪಿ ಸರಕಾರ ಕೆಎಫ್‌ಡಿಯ ಹಿಂದೆ ನಿಂತು ಮಾನಮುಚ್ಚಿಕೊಳ್ಳಲು ಪ್ರಯತ್ನಿಸುತ್ತಿದೆ.

ದುಃಖಿತಪ್ತ ಕುಟುಂಬಕ್ಕೆ ಸಾಂತ್ವನ ಹೇಳಲು ಮತ್ತು ನೈಜ ಆರೋಪಿಗಳನ್ನು ಬಂಧಿಸಲು ಉಪಯೋಗಿಸಬೇಕಾದ ಸಮಯದ ದುರ್ಲಾಭವನ್ನು ಸರಕಾರ ಪಡೆಯುತ್ತಿದೆ. ಅಲ್ಪಸಂಖ್ಯಾತ ಎದ್ದೇಳದಂತೆ ಸದಾ ಕೊಡಲಿಯನ್ನು ಎತ್ತಿಹಿಡಿದುಕೊಂಡೇ ಮುಸಲತ್ತು ನಡೆಸುತ್ತಿದೆ.

# ತರ್ಕಕ್ಕೆ ನಿಲುಕದ ಮಾದರಿ ಟರ್ಕಿ

●ಅಕ್ರಂ ಹಸನ್

ಟರ್ಕಿಯ ಪ್ರಧಾನಿ ರಜಬ್ ತಯ್ಯಿಬ್ ಉರ್ದುಗಾನ್‌ರವರು ಮೂರನೇ ಬಾರಿಗೆ ಚುನಾವಣೆಯಲ್ಲಿ ಜಯಗಳಿಸಿದ್ದಾರೆ. ಈ ವರ್ಷ ಜೂನ್ ತಿಂಗಳಲ್ಲಿ ಟರ್ಕಿಯ ಪಾರ್ಲಿಮೆಂಟಿಗೆ ಸಾರ್ವತ್ರಿಕ ಚುನಾವಣೆ ನಡೆದಿದ್ದು, ಅದರ ಫಲಿತಾಂಶವೂ ಹೊರಬಿದ್ದಿದೆ. ಜನತೆ ಮತ್ತೆ ಉರ್ದುಗಾನ್‌ರನ್ನು ಬಲವಾಗಿ ಒಪ್ಪಿಕೊಂಡಿದ್ದಾರೆ. ಅವರ ಆಡಳಿತ ವೈಖರಿಗೆ ಅಭೂತಪೂರ್ವ ಬೆಂಬಲ ವ್ಯಕ್ತಪಡಿಸಿದ್ದಾರೆ. ಅರ್ಥಾತ್ ಆಡಳಿತಾರೂಢ ಜಸ್ಟಿಸ್ ಆ್ಯಂಡ್ ಡೆವಲಪ್‌ಮೆಂಟ್ (AKP)ಪಾರ್ಟಿ ಜಯಗಳಿಸಿದೆ. ಉರ್ದುಗಾನ್‌ರ ಎಕೆಪಿ ಪಕ್ಷವು 327 ಸ್ಥಾನಗಳಿಸಿದ್ದು ಅದರಲ್ಲಿ 44 ಮಂದಿ ಮಹಿಳೆಯರು ಜಯಗಳಿಸಿದ್ದಾರೆ. ಪ್ರಧಾನ ವಿರೋಧ ಪಕ್ಷವಾದ ರಿಪಬ್ಲಿಕನ್ ಪೀಪಲ್ಸ್ ಪಾರ್ಟಿ 135 ಸ್ಥಾನ, ನೇಶನಲಿಸ್ಟ್ ಮೂವ್‌ಮೆಂಟ್ ಪಾರ್ಟಿ-53, ಪಕ್ಷೇತರರು 35 ಸ್ಥಾನ ಪಡೆದಿವೆ. ಕಮ್ಯುನಿಸ್ಟ್ ಲೇಬರ್ ಮತ್ತಿತರ ಪಕ್ಷಗಳಿಗೆ ಯಾವುದೇ ಸ್ಥಾನ ದೊರೆತಿಲ್ಲ.

ಜಾಗತಿಕ ಇತಿಹಾಸದಲ್ಲಿ ಟರ್ಕಿಯು ಬಹಳಷ್ಟು ಚರ್ಚೆಗೊಳಗಾಗಿರುವ ಭೂಭಾಗವಾಗಿತ್ತು. ಹಿಂದೊಮ್ಮೆ ಜಾಗತಿಕ ಮುಸ್ಲಿಮ್ ಸಮುದಾಯದ ಖಿಲಾಫತ್ ಚಳವಳಿಯ ಕೇಂದ್ರವೆಂದು ಗುರುತಿಸಿಕೊಂಡಿದ್ದ ಟರ್ಕಿಯ ಮೇಲೆ ಪಾಶ್ಚಿಮಾತ್ಯ ವಸಾಹತುಶಾಹಿಗಳು ಕಣ್ಣಿಟ್ಟಿದ್ದರು. ಅದರ ಪರಿಣಾಮೆಂಬಂತೆ ಟರ್ಕಿಯಲ್ಲಿ ಮುಸ್ತಫಾ ಕಮಾಲ್ ಅತಾತುರ್ಕ್‌ನ ಆಗಮನವಾಗುತ್ತದೆ. 1919 ರಿಂದ 1924ರವರೆಗೆ ಟರ್ಕಿ ರಾಷ್ಟ್ರೀಯ ಚಳವಳಿ ನಡೆದು, ಖಿಲಾಫತ್ ಆಡಳಿತವನ್ನು ಕೊನೆಗೊಳಿಸಿ ಆಧುನಿಕ ಟರ್ಕಿಯನ್ನು ನಿರ್ಮಾಣ ಮಾಡುವುದು ಅತಾತುರ್ಕ್‌ನ ಗುರಿಯಾಗಿತ್ತು. ಆಧುನಿಕ ಟರ್ಕಿ ಎಂದರೆ ಇಸ್ಲಾಮೀ ಆಚರಣೆಗೆ ನಿಷೇಧ ಹೇರಿ, ಸಂಪೂರ್ಣ ಪಾಶ್ಚಿಮಾತ್ಯ ಶೈಲಿಯನ್ನು ರಾಷ್ಟ್ರದಲ್ಲಿ ಜಾರಿಗೊಳಿಸುವುದಾಗಿತ್ತು. 1924ರ ವೇಳೆಗೆ ಅತಾತುರ್ಕ್ ತನ್ನ ಗುರಿ ತಲುಪುವಲ್ಲಿ ಯಶಸ್ವಿಯಾದ. ಹೀಗೆ ಖಿಲಾಫತ್ ಆಡಳಿತ ಕೊನೆಗೊಂಡು ಟರ್ಕಿಯಲ್ಲಿ ಜಾತ್ಯತೀತತೆಯ ಸೋಗಿನಲ್ಲಿ ಪಾಶ್ಚಿಮಾತ್ಯ ಆಡಳಿತ ಜಾರಿಗೆ ಬಂತು. ಅತಾತುರ್ಕ್ ಸ್ಪಷ್ಟವಾಗಿ ಇಸ್ಲಾಮ್ ಧರ್ಮವನ್ನು ವಿರೋಧಿಸುತ್ತಿದ್ದು, ಅದರ ಯಾವುದೇ ಆಚರಣೆಗೆ ಅವಕಾಶ ಕಲ್ಪಿಸುತ್ತಿರಲಿಲ್ಲ. ಮಸೀದಿಯಲ್ಲಿ ಆದಾನ್ ಮೊಳಗಿಸುವುದು, ಮಹಿಳೆಯರು ಸ್ಕಾರ್ಫ್ ಧರಿಸುವುದು



ಟರ್ಕಿಯ ಪ್ರಧಾನಿ ರಜಬ್ ತಯ್ಯಿಬ್ ಉರ್ದುಗಾನ್



ಟರ್ಕಿಯ ಮಾಜಿ ಪ್ರಧಾನಿ ನಝ್ಮುದ್ದೀನ್ ಅರ್ಬಕಾನ್

ಅತಾತುರ್ಕ್‌ಗೆ ಸಹಿಸಲು ಸಾಧ್ಯವಾಗುತ್ತಿರಲಿಲ್ಲ.

ಇಂತಹ ಹೊತ್ತಿನಲ್ಲಿಯೇ ಉರ್ದುಗಾನ್ ಟರ್ಕಿಯಲ್ಲಿ ಇಸ್ಲಾಮೀ ಆಡಳಿತದ ಪ್ರಾಧಾನ್ಯವನ್ನು ಜನತೆಗೆ ಮನಗಾಣಿಸಿದರು. ಬಹಿರಂಗವಾಗಿಯೇ ಪಾಶ್ಚಿಮಾತ್ಯ ಆಡಳಿತದ ಧೋರಣೆಯನ್ನು ಖಂಡಿಸಿದರು. ತನ್ನ ಪತ್ನಿಯು ಇಸ್ಲಾಮೀ ವೇಷಭೂಷಣದೊಂದಿಗೆ ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಲ್ಲಿಯೂ ಉರ್ದುಗಾನ್ ಹೆಮ್ಮೆ ವ್ಯಕ್ತಪಡಿಸುತ್ತಿದ್ದರು. ತನ್ನ ಅಭಿಪ್ರಾಯವನ್ನು ಮುಕ್ತ ವ್ಯಕ್ತಪಡಿಸಿದ್ದಕ್ಕಾಗಿ ಉರ್ದುಗಾನ್ 1997ರಲ್ಲಿ 10 ತಿಂಗಳ ಜೈಲು ಶಿಕ್ಷೆಗೂ ಒಳಗಾಗಿದ್ದರು. ಅಂತಹ ಉರ್ದುಗಾನ್‌ರ ವಿಚಾರಧಾರೆಗಳಿಗೆ ಇಂದು ಟರ್ಕಿಯಾದ್ಯಂತ ಜನಮನ್ನಣೆ ದೊರೆತಿದೆ. ಇದಕ್ಕೆ ಕಾರಣ,

49ನೇ ಪುಟಕ್ಕೆ

■ಕೆ.ವೈ ಅಬ್ದುಲ್ ಹಮೀದ್
kukkaje09@gmail.com

# ಹಾಮದ್‌ನ ಕೊಡೆ

ಬೆಳಗಿನ ಜಾವದ ತಂಪಾದ ವಾತಾವರಣದಲ್ಲಿ ಅರೆ ನಿದ್ದೆಯಲ್ಲಿದ್ದ ಹಾಮದ್‌ಗೆ ಜೋರಾದ ಮಾತು ಕೇಳಿದಂತಾಗಿ ಮೈ ತುಂಬಾ ಹೊದ್ದುಕೊಂಡಿದ್ದ ಮುಸುಕನ್ನು ಮೆಲ್ಲನೆ ಸರಿಸಿಕೊಂಡು ಮಲಗಿದಲ್ಲಿಂದಲೆ ಕಿವಿ ನಿಮಿರಿಸಿ ಮಾತನ್ನು ಆಲಿಸತೊಡಗಿದ. ಹೊರಗಡೆ ಮಳೆ ಜೋರಾಗಿ ಸುರಿಯುತ್ತಿತ್ತು. ಮಳೆಬೀಳುವ ಗದ್ದಲದಲ್ಲಿ ಮಾತು ಸರಿಯಾಗಿ ಹಾಮದ್‌ಗೆ ಅರ್ಥವಾಗದಿದ್ದರೂ ಮಾತಿನ ದಾಟಿಯನ್ನು ಅರ್ಥೈಸಿಕೊಂಡ ಅವನಿಗೆ ಇದು ಪತ್ನಿ ನೆಬಿಸಳ ಬೈಗುಳ ಎಂದು ತಿಳಿಯಲು ಹೆಚ್ಚು ಸಮಯ ಬೇಕಾಗಲಿಲ್ಲ. 'ಏನೋ



ಎಡವಟ್ಟಾಗಿದೆ ' ಎಂದು ತನ್ನ ಪಾಡಿಗೆ ಹೇಳಿ ಮತ್ತೆ ಮುಸುಕೆಳೆದು ಮಲಗಿ ನಿದ್ರಿಸಲು ಪ್ರಯತ್ನಿಸಿದರೂ ನೆಬಿಸಳ ವಾಗ್ದಾಳಿಗೆ ಹಾಮದ್‌ನ ಕಣ್ಣಿನ ನಿದ್ದೆ ಪೂರ್ಣ ಹಾರಿಹೋಗಿತ್ತು.

ಮಡಿಲಲ್ಲಿ ಬೀಡಿ ಸೂಪನ್ನಿಟ್ಟು ಕಾಲು ಚಾಚಿ ನೆಲದಲ್ಲಿ ಕುಳಿತ ನೆಬಿಸ ಮಧ್ಯೆ ಮಧ್ಯೆ ತನ್ನ ಎಡ ಕೈಯಿಂದ ಒಲೆಯ ಬೆಂಕಿ ಸರಿಯಾಗಿ ಉರಿಯುವಂತೆ ಸರಿಪಡಿಸಿಕೊಳ್ಳುತ್ತಿರುವುದನ್ನು ಹಾಮದ್ ಮಲಗಿದಲ್ಲಿಂದಲೆ ಗಮನಿಸುತ್ತಿದ್ದ. ಒಲೆಯಲ್ಲಿ ಬೇಯುತ್ತಿದ್ದ ಗಂಜಿಯ ಸುವಾಸನೆ ಅವನ ಮೂಗನ್ನರಳಿಸಿದ್ದರೂ ನೆಬಿಸಳ ವಾಗ್ದಾಳಿಯಿಂದ ತಪ್ಪಿಸಿಕೊಂಡು ಸ್ವಲ್ಪ ಹೊತ್ತು ಮಲಗಿ ನಿದ್ರಿಸುವ ಎಂದರೆ ಒಂದೇ ಕೋಣೆಯ ಆ ಗುಡಿಸಲಿನಲ್ಲಿ ಬೇರೆ ಜಾಗವಿರಲಿಲ್ಲ.

ನೆಬಿಸ ತನ್ನ ವಾಗ್ದಾಳಿ ನಿರರ್ಗಳವಾಗಿ ಮುಂದುವರಿಸಿದ್ದಳು. 'ಏನು ಮರೆ ಗುಳಿಯೋ ನನಗೆ ಗೊತ್ತಿಲ್ಲ. ಕಳೆದ ವರ್ಷ ಅರುವತ್ತೈದ್ ರೂಪಾಯಿ ಕೊಟ್ಟ ಕೈ ಬಿಸಿ ಇನ್ನೂ ಆರಿಲ್ಲ. ಒಂದು ಕೊಡೆಯನ್ನು ಸರಿಯಾಗಿ ಇಟ್ಟುಕೊಳ್ಳಲು ಸಾಧ್ಯವಿಲ್ಲ ಅಂದರೆ ಹೇಗೆ ?.... '

'ಕೊಡೆ 'ಎಂಬ ಶಬ್ದ ಕೇಳಿದ್ದೇ ತಡ, ಹಾಮದ್‌ನ ಕಿವಿ ಒಮ್ಮೆಲೆ ಚುರುಕಾಗಿಬಿಟ್ಟಿತ್ತು. ಹೊದ್ದು ಕೊಂಡಿದ್ದ ಬಟ್ಟೆಯನ್ನು ಕೈಯಿಂದ ಸರಿಸಿ ತಲೆದಿಂಬಿನ ಮೇಲಿಟ್ಟು ದಡಕ್ಕನೆ ಮಲಗಿದಲ್ಲಿಂದ ಎದ್ದು ಕುಳಿತ ಆತ ಕೊಡೆಯ ಕುರಿತಾಗಿ ಯೋಚಿಸತೊಡಗಿದ. ಆತನ ಪಕ್ಕದಲ್ಲಿ ಅವನ ಮೂರು ಮಕ್ಕಳು ತಾಯಿಯ ಹಳೆಯ ಸೀರೆಯನ್ನು ಹೊದ್ದುಕೊಂಡು ಮಳೆಯಿಂದ ತೇವಗೊಂಡ ಚಾಪೆಯಲ್ಲಿ ಮುದುಡಿ ಮಲಗಿತ್ತು. ನೆಬಿಸಳ ಗದ್ದಲಕ್ಕೆ ಮಕ್ಕಳು ಎಚ್ಚರವಾಗದಿರಲು ಹಾಮದ್ ತನ್ನ ತೋರುಬೆರಳನ್ನು ತುಟಿಗೆ ಆನಿಸಿಟ್ಟು 'ಮೆಲ್ಲಗೆ ಮಾತನಾಡು' ಎಂಬಂತೆ ನೆಬಿಸಳಿಗೆ ಸನ್ನೆ ಮಾಡಿ ತೋರಿಸಿದ. ಅದನ್ನು ಅರ್ಥ

ಮಾಡಿಕೊಂಡವಳಂತೆ ಅವಳು ತನ್ನ ವಾಗ್ಝರಿಯನ್ನು ನಿಲ್ಲಿಸಿ ಸನ್ನೆಯಿಂದಲೆ ಕೊಡೆ ಎಲ್ಲಿ ಎಂದು ಕೇಳಿದಳು.

ಹಾಮದ್‌ನ ಎದೆ ದಸಕ್ಕೆಂದಿತ್ತು. ಕಳೆದ ದಿನ ಸಂಜೆ ಹಾಲು ತರಲು ಹೊರಟಾಗ ಜತೆಯಲ್ಲಿ ಕೊಡೆ ಕೊಂಡು ಹೋದುದು ಆತನಿಗೆ ಇನ್ನೂ ನೆನಪಿದೆ. ಆದರೆ ಮರಳಿ ಬರುವಾಗ ಕೊಡೆ ಜತೆಯಲ್ಲಿ ತಂದಿರುವುದು ಮಾತ್ರ ಆತನ ನೆನಪಿಗೆ ಬರುತ್ತಿರಲಿಲ್ಲ. ಒಮ್ಮೆಲೆ ತಪ್ಪನ್ನು ಒಪ್ಪಿಕೊಳ್ಳಲು ಆತನಿಗೆ ಇಷ್ಟವಿರಲಿಲ್ಲ. 'ನಾನು ಕೊಂಡು ಹೋದ ಕೊಡೆ ತಂದಿದ್ದೇನೆ, ಇಲ್ಲೇ ಎಲ್ಲಾದರೂ ಇರಬಹುದು, ಸರಿಯಾಗಿ ಹುಡುಕು 'ಎಂದು ಹೇಳಿ ಹಾಮದ್, ಹೊರಗಡೆ ಮಾಡಿನಿಂದ ಹರಿಯುತ್ತಿದ ಮಳೆ ನೀರಿನಲ್ಲಿ ಮುಖ ತೊಳೆಯಲು ತೊಡಗಿದ. 'ಕೋಳಿಗೂಡಿನಂತಹ ಈ ಮನೆಯಲ್ಲಿ ಹುಡುಕಲೇನಿದೆ, ಎಲ್ಲಿ ಮರೆತು ಬಿಟ್ಟಿದ್ದೀರಿ. ಬೇಗ ಹುಡುಕಿ ತನ್ನಿ' ನೆಬಿಸಳ ಧ್ವನಿ ಆಜ್ಞಾಪಿಸುವ ಶೈಲಿಯಲ್ಲಿತ್ತು. ತನ್ನ ಮನೆಯನ್ನು ಕೋಳಿಗೂಡು ಎಂದು ಹೇಳಿದ ಅವಳ ಚುಚ್ಚು ಮಾತು ಹಾಮದ್‌ನ ಎದೆಗೆ ಬಲವಾಗಿ ನಾಟಿತ್ತು. ಬಡತನ ಇದ್ದರೆ ಏನೆಲ್ಲಾ ಅವಮಾನವನ್ನು ಸಹಿಸಿಕೊಳ್ಳಬೇಕು ಎಂದು ನೆನೆದು ಕಣ್ಣಲ್ಲಿ ಅವನಿಗರಿವಿಲ್ಲದೆ ಜಾರಿದ ಕಣ್ಣೀರು ಮಳೆ ನೀರಿನೊಂದಿಗೆ ಬೆರೆತು ಹೋಗಿತ್ತು.

ಮುಖ ಊದಿಸಿಕೊಂಡು ಮಳೆ ನಿಲ್ಲುವುದನ್ನೆ ಕಾದು ಕುಳಿತಿದ್ದ ಹಾಮದ್‌ಗೆ ನೆಬಿಸ ಹಾಲು ಹಾಕದ ಚಹಾ ನೀಡಿದಳು. ಗಪ್‌ಚಿಪ್ ಎನ್ನದೆ ಅದನ್ನು ಹೀರಿಕೊಳ್ಳುತ್ತಿದ್ದ ಹಾಮದ್‌ನ ಮುಖದಲ್ಲುಂಟಾದ ಬದಲಾವಣೆಯನ್ನು ನೆಬಿಸ ಗಮನಿಸಿದ್ದಳು. ನಾಲಿಗೆ ಹಿಡಿತ ತಪ್ಪಿ ಹೊರಟ ಮಾತು ಪತಿಯ ಮನಸ್ಸಿಗೆ ನೋವು ನೀಡಿದೆ ಎಂಬುದು ಅವಳಿಗರಿವಾಗಿತ್ತು. ಅವನನ್ನು ಸಮಾಧಾನ ಪಡಿಸುವ ಉದ್ದೇಶದಿಂದ ನೆಬಿಸ 'ದೇವರು ನಮಗೆ ಇಷ್ಟಾದರು ಕೊಟ್ಟನಲ್ಲ.. ' ಎಂದು ವೇದಾಂತಿಯಂತೆ ಮಾತನಾಡತೊಡಗಿದ್ದಳು.

ಹಾಮದ್ ಇದೆಲ್ಲವನ್ನು ಕೇಳಿಸಿಕೊಳ್ಳುತ್ತಿದ್ದರೂ ಏನೂ ಕೇಳಿಸಿಕೊಂಡಿಲ್ಲ ಎಂಬಂತೆ ಕುಳಿತು ಮಳೆ ನಿಲ್ಲುವುದನ್ನು ಕಾಯುತ್ತಿದ್ದ. ನಿನ್ನೆ ಸಂಜೆ ಯಾವ್ಯಾವ ಅಂಗಡಿಗೆಲ್ಲಾ ಭೇಟಿ ನೀಡಿದ್ದೆ ಎಂಬುದನ್ನು ಒಂದೊಂದಾಗಿ ಅವನು ನೆನಪಿಸಿಕೊಳ್ಳುತ್ತಿದ್ದ. ಡಿಪ್ಪೊದಿಂದ ಹಾಲು ತೆಗೆದುಕೊಂಡು ಅಬ್ದುಲ್ಲಾಕರ ಅಂಗಡಿ ಜಗಲಿಯಲ್ಲಿ ಕುಳಿತು ಮರುದಿನದ ಕೂಲಿ ಕೆಲಸಕ್ಕೆ ಯಾರಾದರೂ ಕರೆಯುತ್ತಾರೊ ಎಂಬ ನಿರೀಕ್ಷೆಯನ್ನಿಟ್ಟು ಅತ್ತಿತ್ತ ಕತ್ತು ತಿರುಗಿಸಿ ಪರಿಚಿತರನ್ನು ಅರಸಿದ ಬಳಿಕ ನೇರವಾಗಿ ಬದ್ರಿಯಾ ಹೋಟೆಲ್ ಕಡೆ ಹೋಗಿದ್ದೆ. ಅಲ್ಲಿ ಸಿಕ್ಕಿದ ರಮ್ಲುನನ್ನು ಮಾತನಾಡಿಸಿ ರಮೇಶನ ಅಂಗಡಿಯಲ್ಲಿದ್ದ ಸಂಜೆ ಪತ್ರಿಕೆಯನ್ನು ಓದಿ ನೇರವಾಗಿ ಮರಳಿ ಮನೆಗೆ ಬಂದಿದ್ದೆ. ಈ ಮಧ್ಯೆ ಕೊಡೆ ಬಿಟ್ಟು ಬಂದಿರುವುದು ಎಲ್ಲೆಂದು ಆತನಿಗೆ ನೆನಪಿಗೆ ಬರುತ್ತಿರಲಿಲ್ಲ. ತಾನು ಹೋದ ಎಲ್ಲಾ ಅಂಗಡಿಗೆ ಬೀಡ ನೀಡಿ ಕೊಡೆಯನ್ನು ಹುಡುಕುವುದಾಗಿ ಆತನು ಆಗಲೆ ನಿರ್ಧರಿಸಿದ್ದ. ಅದಕ್ಕಾಗಿ ಅವನು ದೃಷ್ಟಿ ಹೊರಚಾಚಿ ಮಳೆ ನಿಲ್ಲುವುದನ್ನೆ ಕಾಯುತ್ತಿದ್ದ.

ಹಾಮದ್‌ನ ಸಹನೆಯನ್ನು ಪರೀಕ್ಷಿಸಲೋ ಎಂಬಂತೆ ಮಳೆ ನಿರಂತರ ಧಾರಾಕಾರವಾಗಿ ಸುರಿಯುತ್ತಲೇ ಇತ್ತು. ಅಸಹನೆ ಅವನಲ್ಲಿ ಅದಾಗಲೆ ಮನೆಮಾಡಿಕೊಂಡುಬಿಟ್ಟಿತ್ತು. 'ಛೇ ಎಂಥಾ ಮಳೆ, ಸ್ವಲ್ಪ ನಿಲ್ಲುವುದೂ ಇಲ್ಲ..' ಎನ್ನುತ್ತಾ ಮಳೆಯೊಡನೆ ಕೋಪವನ್ನು ತೀರಿಸುವವನಂತೆ ಎದ್ದು ನಿಂತು ಲುಂಗಿಯನ್ನು ಮಡಿಸಿ ಸೊಂಟಕ್ಕೆ ಸಿಕ್ಕಿಸಿಕೊಂಡು ಮನೆಯೊಳಗೆ ಅತ್ತಿತ್ತ ಶತಪಥ ನಡೆದಾಡತೊಡಗಿದ. ಹಾಮದ್‌ನ ಕೋಪವನ್ನು ಶಮನಗೊಳಿಸಲೋ ಎಂಬಂತೆ ಮಳೆ ಕಡಿಮೆಯಾಗತೊಡಗಿತು. ತುಂತುರು ಮಳೆ ಇನ್ನೂ ಸುರಿಯುತ್ತಿತ್ತು. ಹಾಮದ್ ಅಂಗಡಿಯತ್ತ ನೆನೆದು ಕೊಂಡೇ ಓಟಕಿತ್ತ. ಅವನು ಅಂಗಡಿಯತ್ತ ಹೋದ ಸ್ವಲ್ಪ ಹೊತ್ತಿನ ಬಳಿಕ ನೆರೆಮನೆಯ ಪುಟ್ಟ ಹುಡುಗ ಶಬೀರ್ ಬಂದು 'ನೆಬಿಸಾದ ತಗೊಳ್ಳಿ ಕೊಡೆ. ನಿನ್ನೆ ಬೈಲುಕಾಕರ ಮನೆಗೆ ಹೋಗಲು ಹಾಮದಾಕರಿಂದ ತಂದೆ ತೆಗೆದುಕೊಂಡಿದ್ದರು' ಎಂದು ಹೇಳಿ ಕೈಯಲ್ಲಿದ್ದ ಕೊಡೆಯನ್ನು ನೆಬಿಸಳತ್ತ ಚಾಚಿದ. ಬೆಳಗಿನಿಂದ ಹುಡುಕಿ ಹುಡುಕಿ ಸುಸ್ತಾಗಿ ಹೋಗಿದ್ದ ಅವಳಿಗೆ ತನ್ನ ಕಳೆದು ಹೋಗಿದ್ದ ಕೊಡೆಯನ್ನು ಕಂಡ ತಕ್ಷಣ ಎಲ್ಲಾ ಸುಸ್ತು ಅವಳನ್ನು ಬಿಟ್ಟೋಡಿತ್ತು. ಅವಳ ಕಣ್ಣು ಪಳಪಳ ಹೊಳೆಯತೊಡಗಿತ್ತು. ಅತ್ತ ಹಾಮದ್ ಬೆಳ್ಳಂಬೆಳಿಗ್ಗೆ ಕಣ್ಣಿಗೆ ಕಂಡವರ ಕೊಡೆಗಳತ್ತ ಅನುಮಾನದ ದೃಷ್ಟಿಯನ್ನು ಬೀರುತ್ತಾ ತನ್ನ ಕಳೆದು ಹೋದ ಕೊಡೆಯನ್ನು ಹುಡುಕುವ ಕಾಯಕದಲ್ಲಿ ತೊಡಗಿದ್ದ. ಆ ದೃಶ್ಯವನ್ನು ಮನದಲ್ಲಿ ಊಹಿಸಿಕೊಂಡು ನೆಬಿಸ ಗೊಳ್ಳೆಂದು ನಗತೊಡಗಿದಳು. ಅವಳ ನಗುವಿನ ತಲೆ ಬುಡ ತಿಳಿಯದೆ ಕಕ್ಕಾಬಿಕ್ಕಿಯಾಗಿ ಅಲ್ಲಿಂದ ಓಡಿದ ಶಬೀರ್ ತನ್ನ ಮನೆ ಸೇರಿ ಬಾಗಿಲ ಮರೆಯಿಂದ ಇಣುಕಿ ಅವಳನ್ನೆ ನೋಡತೊಡಗಿದ್ದ. ಇದಾವುದರ ಪರಿವೆ ಇಲ್ಲದೆ ನೆಬಿಸ ಇನ್ನೂ ನಗುತ್ತಲೆ ಇದ್ದಳು. ನಿದ್ರಿಸಿದ್ದ ಅವಳ ಮಕ್ಕಳು ಈ ಗದ್ದಲದ ನಡುವೆ ಎಚ್ಚರಗೊಂಡು ತಮ್ಮ ತಾಯಿಯ ವಿಚಿತ್ರ ವರ್ತನೆಯನ್ನು ಬೆದರು ಕಣ್ಣಳಿಂದ ನೋಡುತ್ತಾ ಎದ್ದು ಕುಳಿತಿತ್ತು.

★★★

# ದಿಕ್ಕೆಟ್ಟ ಜನಾಂದೋಲನ

# ದಿಕ್ಕು ತಪ್ಪಿಸಿದವರೆಲ್ಲಾ ನಾಪತ್ತೆ

● ಪಿಎನ್‌ಬಿ



ಭ್ರಷ್ಟಾಚಾರದ ವಿರುದ್ಧ ಆಂದೋಲನಕ್ಕಿಳಿದಿರುವ ಅಣ್ಣಾ ಹಝಾರೆಯನ್ನು ಹೈಜಾಕ್ ಮಾಡಿಕೊಳ್ಳಲು ಬಿಜೆಪಿ ಮತ್ತು ಅದರ ಪರಿವಾರ ಯತ್ನಿಸಿ ವಿಫಲಗೊಂಡಿರಬೇಕು. ''ಸಂಘಪರಿವಾರದೊಂದಿಗೆ ತನ್ನನ್ನು ಸೇರಿಸುವ ಮೂಲಕ ತೇಜೋವಧೆ ಮಾಡಬೇಡಿ'' ಎಂದು ಮಾಧ್ಯಮದವರೊಂದಿಗೆ ಹಾಗೂ ರಾಜಕೀಯ ಮುಖಂಡರೊಂದಿಗೆ ಕೇಳಿಕೊಂಡಿರುವ ಹಝಾರೆಯ ಬೇಡಿಕೆಯು ಭ್ರಷ್ಟಾಚಾರದ ಅಬ್ಬರದಲ್ಲಿ ಅಷ್ಟೊಂದು ಕೇಳಿಸಲೇ ಇಲ್ಲ. ಅಣ್ಣಾ ಹಝಾರೆಯ ಅಭೂತಪೂರ್ವ ಜನಾಂದೋಲನವು ನಿರ್ಣಾಯಕ ಹಂತದಲ್ಲಿ ಶಕ್ತಿ ಕಳೆದುಕೊಂಡದ್ದು, ಆ ವೇಳೆಗೆ ಯೋಗಗುರು ರಾಮ್‌ದೇವ್‌ನ ಹೋರಾಟ ಆರಂಭವಾದದ್ದು ಇವೆಲ್ಲವೂ ಆಕಸ್ಮಿಕವಲ್ಲ. ಈ ಎರಡೂ ಘಟನೆಯ ಹಿಂದೆ ಸಂಘಪರಿವಾರದ ಕರಾಳ ಹಸ್ತವಿದೆ. ಅಣ್ಣಾ ಹಝಾರೆಯ ಆಂದೋಲನವನ್ನು ತಮ್ಮ ಕೇಸರಿ ತೆಕ್ಕೆಗೆ ಎಳೆದುಕೊಳ್ಳಲು ಪ್ರಯತ್ನಿಸಿದ ಬಿಜೆಪಿ ಮತ್ತು ಪರಿವಾರ, ಜನಾಂದೋಲನದ ದಿಕ್ಕನ್ನೇ ತಪ್ಪಿಸಿತು. ಆಗ ಅಖಾಡಕ್ಕಿಳಿದದ್ದು ಯೋಗ ಉದ್ಯಮಿ ಬಾಬಾ ರಾಮ್‌ದೇವ್.

ಇದು ಕೆಲವೇ ತಿಂಗಳ ಹಿಂದೆ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ನಡೆದ ಆರೆಸ್ಸೆಸ್ ರಾಷ್ಟ್ರೀಯ ಪ್ರತಿನಿಧಿ ಸಭೆಯಲ್ಲಿ ಕೈಗೊಳ್ಳಲಾಗಿದ್ದ ಹಿಡನ್ ಅಜೆಂಡಾ. ಬಾಬಾ ರಾಮ್‌ದೇವ್‌ನ ಆಂದೋಲನಕ್ಕೆ ಅಲ್ಲಿಯೇ ರೂಪುರೇಷೆ ಹಾಕಲಾಗಿತ್ತು. ಅದಕ್ಕೆ ತಕ್ಕ ಸಮಯಕ್ಕಾಗಿ ಕಾದುಕುಳಿತಿದ್ದ ಕೇಸರಿ ಪರಿವಾರಕ್ಕೆ ಅಣ್ಣಾ ಹಝಾರೆಯ ಜನಾಂದೋಲನವು ಮುನ್ನುಡಿ ಬರೆಯಿತು. ಈ ಜನಾಂದೋಲನದೊಂದಿಗೆ ಸೇರಿಕೊಂಡು ರಾಮ್‌ದೇವ್‌ನನ್ನು ಫೋಕಸ್ ಮಾಡಲು ಯತ್ನಿಸಿದ ಸಂಘಪರಿವಾರ, ಕೊನೆಗೆ ಅಣ್ಣಾ ಹಝಾರೆಯನ್ನು ಕೈಬಿಟ್ಟು ಯೋಗ ಗುರುವಿನ ಮೂಲಕ ಹೊಸತೊಂದು ಜನಾಂದೋಲನವನ್ನು ಹುಟ್ಟುಹಾಕಲು ಯತ್ನಿಸಿತು. ಆದರೆ ಭಾರತೀಯರು ಭ್ರಷ್ಟಾಚಾರದಿಂದ ಎಷ್ಟೇ ರೋಸಿಹೋಗಿದ್ದರೂ ತಮ್ಮ ಬುದ್ಧಿಮತ್ತೆಯನ್ನು ಕಳೆದುಕೊಂಡಿಲ್ಲ. ಪ್ರಜ್ಞಾವಂತರು ಜನಾಂದೋಲನದ ಹಿಂದಿನ ಕೇಸರಿ ರಾಜಕೀಯದ ರಹಸ್ಯವನ್ನು ಅರ್ಥ ಮಾಡಿಕೊಂಡಿದ್ದರ ಫಲವಾಗಿ ರಾಮ್‌ದೇವ್‌ನ ನಕಲಿ ಆಂದೋಲನವು ವಿಫಲಗೊಂಡಿತು. ಈ ಎಲ್ಲ ವಿದ್ಯಮಾನದೊಂದಿಗೆ ಇನ್ನೊಂದು ಅಂಶ ಸ್ಪಷ್ಟವಾಗುತ್ತಿದೆ; ಅದೇನೆಂದರೆ ಸಂಘಪರಿವಾರದ ಅಜೆಂಡಾಗಳು ಈಗೀಗ 1992ರ ಅಯೋಧ್ಯೆಯ ಅಜೆಂಡಾದಂತೆ ಯಶಸ್ವಿಯಾಗುತ್ತಿಲ್ಲ ಎಂಬುದು. ಜನರನ್ನು ಭಾವನಾತ್ಮಕವಾಗಿ ಶೋಷಣೆ ಮಾಡುತ್ತಿದ್ದ ಸಂಘಪರಿವಾರದ ನೈಜ ಮುಖವು ಬಯಲಾಗುತ್ತಿರುವ ಕಾಲಘಟ್ಟವಿದು. ಅದರ ಜೊತೆಯಲ್ಲೇ ಜನರು ವಿದ್ಯಾವಂತರು

***ಇನ್ನು ಅಣ್ಣಾ ಹಝಾರೆಯ ಕುರಿತಾಗಿ ಚರ್ಚಿಸುವುದಾದರೆ ಭ್ರಷ್ಟಾಚಾರದ ಕುರಿತು ಈಗ ಅಣ್ಣಾ ಹಝಾರೆ ವ್ಯಕ್ತಪಡಿಸುತ್ತಿರುವ ಹೋರಾಟ, ಪ್ರತಿಕ್ರಿಯೆಗಳು ಅಷ್ಟೇನೂ ಪ್ರಚಾರಕ್ಕೆ ಬರುತ್ತಿಲ್ಲ. ಹಾಗಾದರೆ ಈ ಮೊದಲು ಪ್ರಚಾರ ಒದಗಿಸಿದ್ದು ಕೂಡ ಕೇಸರಿ ಪರಿವಾರದ ತಂತ್ರವೇ ಆಗಿತ್ತು. ಆದರೆ ಅದನ್ನು ಮುನ್ನುಡಿ ಯಾಗಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಲು ಫ್ಯಾಷಿಸ್ಟರಿಗೆ ಸಾಧ್ಯವಾಗಲಿಲ್ಲ. ಅದೇನೇ ಇರಲಿ, ಅಣ್ಣಾ ಹಝಾರೆ ಇವೆಲ್ಲ ವನ್ನು ಸೂಕ್ಷ್ಮ ವಾಗಿ ಅಂದಾಜಿಸಿರಲಿಲ್ಲ. ಫ್ಯಾಷಿಸ್ಟ್ ಅಜೆಂಡಾವನ್ನು ಅಷ್ಟು ಸುಲಭವಾಗಿ ಅಂದಾಜಿಸಿಕೊಳ್ಳಲು ಸಾಧ್ಯವಿಲ್ಲ.***

ಮತ್ತು ಪ್ರಜ್ಞಾವಂತರಾಗುತ್ತಿದ್ದಾರೆ ಎಂಬುದರ ಸಂಕೇತವಿದು.

ರಾಮ್‌ಲೀಲಾ ಮೈದಾನದಲ್ಲಿ ಪೊಲೀಸರು ಮಧ್ಯರಾತ್ರಿಯ ಹೊತ್ತಿನಲ್ಲಿ ನಡೆಸಿದ ಕಾರ್ಯಾಚರಣೆಯಿಂದಾಗಿ ಕತ್ತಲಲ್ಲಿ ಕರಗಿ ಹೋಗಬಹುದಾಗಿದ್ದ ಭಯಾನಕ ಸತ್ಯವೊಂದು ಬೆಳಕಿಗೆ ಬಂದಂತಾಗಿದೆ. ರಾಮ್‌ಲೀಲಾ ಮೈದಾನಕ್ಕೆ ಬೆಂಕಿಹಚ್ಚಿ, ಅಲ್ಲಿ ನೆರೆದಿದ್ದ ರಾಮ್‌ದೇವ್‌ನ ಭಕ್ತರನ್ನು (ಇವರು ಭ್ರಷ್ಟಚಾರದ ವಿರೋಧಿ ಆಂದೋಲನದ ಹೋರಾಟಗಾರರು ಎನ್ನುವುದಕ್ಕಿಂತ ಯೋಗ ಗುರುವಿನ ಭಕ್ತರು ಎನ್ನುವುದು ಸೂಕ್ತ) ಹತ್ಯೆಗೈಯ್ಯುವುದರೊಂದಿಗೆ ದೇಶದಲ್ಲಿ ಭಾರೀ ಗಲಭೆಯೊಂದನ್ನು ಸೃಷ್ಟಿಸುವ ಹಿಡನ್ ಅಜೆಂಡಾವೊಂದು ವಿಫಲಗೊಂಡಿದೆ. ಇದೇ ಸಂದರ್ಭದಲ್ಲಿ ರಾಮ್‌ದೇವ್ ನೀಡಿದ ಹೇಳಿಕೆ ಕೂಡ ಆತ ಯಾರು ಎಂಬುದನ್ನು ಪರಿಚಯಿಸಿದೆ. 11,000 ಶಸ್ತ್ರಸಜ್ಜಿತ ಸೈನಿಕರ ತಂಡವೊಂದನ್ನು ಕಟ್ಟಿ ಆಂದೋಲನ ಕೈಗೊಳ್ಳುವುದಾಗಿ ರಾಮ್‌ದೇವ್ ಘೋಷಿಸಿದ. ಇದೇ ಘೋಷಣೆಯನ್ನು ಹಿಂದೊಮ್ಮೆ ಕೇಳಿದ ನೆನಪಿರಬೇಕು. ಹೌದು, ಅದು ರಾಮಸೇನೆಯ ಮುಖಂಡ ಪ್ರಮೋದ್ ಮುತಾಲಿಕ್ ಆಗಾಗ ಬಹಿರಂಗವಾಗಿ ಮಾಡುತ್ತಿದ್ದ ಘೋಷಣೆ. ತಾನು ಆತ್ಮಹತ್ಯಾ ದಳವನ್ನು ರಚಿಸಿಕೊಂಡಿರುವುದಾಗಿ ಮುತಾಲಿಕ್ ಪದೇ ಪದೇ ಹೇಳುತ್ತಿದ್ದ. ಇಂಥದ್ದೇ ಒಂದು ಅಣಿಮುತ್ತು ಈಗ ರಾಮ್‌ದೇವ್‌ನ ಬಾಯಿಯಿಂದಲೂ ಹೊರಬಿದ್ದಿದೆ. ಹಾಗಾದರೆ ಇವರಿಗೆಲ್ಲ ಇದರ ತರಬೇತಿ ನೀಡುತ್ತಿರುವ ಇನ್ನೊಬ್ಬ ಕರ್ನಲ್ ಪುರೋಹಿತ್ ಯಾರು? ಎಂಬುದನ್ನು ಕೇಂದ್ರ ಸರಕಾರ ಪತ್ತೆಹಚ್ಚಬೇಕಾಗಿದೆ.

ಇದೆಲ್ಲ ಹಳೆಯ ಸುದ್ದಿ. ಆದರೆ ಲೋಕಪಾಲ ಮಸೂದೆ ಮಾತ್ರ ಇನ್ನೂ ಗೊಂದಲದಲ್ಲಿದೆ. ಲೋಕಮಸೂದೆಯ ಕರಡು ಸಮಿತಿ ಸಭೆಯಲ್ಲಿ ಒಮ್ಮೆಯೂ ಒಮ್ಮತದ ಅಭಿಪ್ರಾಯ ಮೂಡಿಬಂದಿಲ್ಲ. ಕೇಂದ್ರ ಸರಕಾರ ಮತ್ತು ಅಣ್ಣಾ ಹಝಾರೆಯ ನಡುವೆ ಸಂಘರ್ಷ ನಡೆಯುತ್ತಲೇ ಇದೆ. ಆದಾಗ್ಯೂ ಅಣ್ಣಾ ಹಝಾರೆಗೆ ಈ ಮೊದಲು ಇದ್ದ ಮೀಡಿಯಾ ಬೆಂಬಲ ಮತ್ತು ಜನಬೆಂಬಲ ಯಾಕೆ ದೊರೆಯುತ್ತಿಲ್ಲ. ಈ ಹಿಂದೆ ದಿನಬೆಳಗಾಗುವುದರೊಂದಿಗೆ ದೇಶಾದ್ಯಂತದ ಜನರು ಟಿವಿ ಮುಂದೆ ನಿಂತು ಅಣ್ಣಾ ಹಝಾರೆಯನ್ನು ಬೆಂಬಲಿಸಿದವರು ಇದೀಗ ಯಾಕೆ ಯಾವುದೂ ಬೇಡ ಎಂದು ಸುಮ್ಮನಾಗಿದ್ದಾರೆ. ಭಾರತದ ಭ್ರಷ್ಟಚಾರವನ್ನು ನಿರ್ಮೂಲನೆಗೊಳಿಸಲು ಸಾಧ್ಯವೇ ಇಲ್ಲ ಎಂದು ಜನರು ಹತಾಶರಾಗಿದ್ದಾರೆಯೇ? ಇಂಥದ್ದೊಂದು ಪ್ರಶ್ನೆ ಕಾಡುವುದು ಸಹಜ.

ಇದಕ್ಕೆಲ್ಲ ಕಾರಣ ಜನಾಂದೋಲನದಲ್ಲಿ ಆರೆಸ್ಸೆಸ್ ಮಧ್ಯಪ್ರವೇಶ. ಜನಾಂದೋಲನವು ಯಾವಾಗ ರಾಜಕೀಯ ತಿರುವು ಪಡೆಯಿತೋ, ಸ್ವತಹ ಭ್ರಷ್ಟಾಚಾರದ ಗೂಡಾಗಿರುವ ಬಿಜೆಪಿ ಪಕ್ಷವು ಕೂಡ ಜನಾಂದೋಲನದಲ್ಲಿ ಮೂಗುತೂರಿಸಿಕೊಂಡಿತೋ ಆವಾಗಲೇ ಆಂದೋಲನವು ದಿಕ್ಕುತಪ್ಪಿತು. ಬಿಜೆಪಿಗೆ ಬೇಕಾಗಿದ್ದುದು ಜನಾಂದೋಲನ ಅಲ್ಲ. ಬದಲಾಗಿ ಆ ಜನಾಂದೋಲನದ ದಿಕ್ಕು ಬಿಜೆಪಿಯೆಡೆಗೆ ತಿರುಗುವುದಾಗಿತ್ತು. ವಿದೇಶದಲ್ಲಿರುವ ಕಪ್ಪು ಹಣವನ್ನು ವಾಪಾಸು ತರಬೇಕು ಎಂದು ಆಗ್ರಹಿಸಿ ಮತ್ತು ಭ್ರಷ್ಟಾಚಾರದ ನಿರ್ಮೂಲನೆಗೆ ಲೋಕಪಾಲ ಮಸೂದೆಯನ್ನು ಜಾರಿಗೆ ತರುವಂತೆ ಒತ್ತಾಯಿಸಿ ನಡೆಯುತ್ತಿರುವ ಜನಾಂದೋಲನವು ಅದು ಬಿಜೆಪಿಯ ವಿರುದ್ಧ ನಡೆಯುವ ಹೋರಾಟವೂ ಹೌದು. ಆದರೆ ಬಿಜೆಪಿ ಹಾಕಿಕೊಂಡಿದ್ದ ಲೆಕ್ಕಾಚಾರವೇ ಬೇರೆ. ಅದು ಕೇಂದ್ರದಲ್ಲಿ ಅಧಿಕಾರಕ್ಕೇರುವುದಕ್ಕಾಗಿ ಈಗಾಗಲೇ ನಾನಾ ರೀತಿಯ ತಂತ್ರ ಯೋಜನೆಗಳನ್ನು ರೂಪಿಸಿಕೊಂಡಿದೆ. ಆದಾಗ್ಯೂ ಅದ್ಯಾವುದೂ ಫಲ ನೀಡಿಲ್ಲ. ಮಾತ್ರವಲ್ಲ, ಬಿಜೆಪಿಯೊಳಗೂ ಶಮನಗೊಳಿಸಲಾಗದಷ್ಟು ಭಿನ್ನಮತವಿದೆ. ಇವೆಲ್ಲವನ್ನೂ ಒಂದು ಅಜೆಂಡಾದಡಿ ಪರಿಹರಿಸಿ ಅಧಿಕಾರಕ್ಕೇರಲು ಬಿಜೆಪಿ ತಂತ್ರ ಹೆಣೆದುಕೊಂಡಿದೆ. ಹೀಗಾಗಿ ದೇಶದಲ್ಲಿ ಒಂದು ಉತ್ತಮ ಭವಿಷ್ಯಕ್ಕೆ ನಾಂದಿಯಾಗಬೇಕಾಗಿದ್ದ ಜನಾಂದೋಲನವು ಬಹುತೇಕ ಹಳ್ಳಹಿಡಿದಿದೆ.

ಇನ್ನು ಅಣ್ಣಾ ಹಝಾರೆಯ ಕುರಿತಾಗಿ ಚರ್ಚಿಸುವುದಾದರೆ ಭ್ರಷ್ಟಾಚಾರದ ಕುರಿತು ಈಗ ಅಣ್ಣಾ ಹಝಾರೆ ವ್ಯಕ್ತಪಡಿಸುತ್ತಿರುವ ಹೋರಾಟ, ಪ್ರತಿಕ್ರಿಯೆಗಳು ಅಷ್ಟೇನೂ ಪ್ರಚಾರಕ್ಕೆ ಬರುತ್ತಿಲ್ಲ. ಹಾಗಾದರೆ ಈ ಮೊದಲು ಪ್ರಚಾರ ಒದಗಿಸಿದ್ದು ಕೂಡ ಕೇಸರಿ ಪರಿವಾರದ ತಂತ್ರವೇ ಆಗಿತ್ತು. ಆದರೆ ಅದನ್ನು ಮುನ್ನುಡಿ ಯಾಗಿಸಿಕೊಂಡು ತಮ್ಮ ಬೇಳೆ ಬೇಯಿಸಿಕೊಳ್ಳಲು ಫ್ಯಾಷಿಸ್ಟರಿಗೆ ಸಾಧ್ಯವಾಗಲಿಲ್ಲ. ಅದೇನೇ ಇರಲಿ, ಅಣ್ಣಾ ಹಝಾರೆ ಇವೆಲ್ಲ

28ನೇ ಪುಟಕ್ಕೆ

■ ಅರಬಿ ಮೂಲ: ಸುವರುನ್ ಮಿನ್ ಹಯಾತಿಸ್ಸಹಾಬಾ
ಮಳಯಾಳಂ: ಡಾ.ಎ.ಐ.ವಿಲಾಯತುಲ್ಲಾ
ಕನ್ನಡಕ್ಕೆ: ಮುರ್ಶಿದ್

# ತುಫೈಲ್ ಬಿನ್ ಅಮ್ರ್ (ರ)

*''ಅಲ್ಲಾಹನೇ, ಈತ ಬಯಸುವ ಎಲ್ಲಾ ಸತ್ಕಾರ್ಯಗಳಲ್ಲೂ ಸಹಾಯಕವಾಗುವ ದೃಷ್ಟಾಂತವೊಂದನ್ನು ಈತನಿಗೆ ನೀಡು''*
*-ಪ್ರವಾದಿ (ಸ)ರ ಪ್ರಾರ್ಥನೆಯಿಂದ.*

★★★

ತುಫೈಲ್ ಬಿನ್ ಅಮ್ರ್ ಅದ್ದೌಸಿ ಜಾಹಿಲಿಯ್ಯಾ ಕಾಲದಲ್ಲಿ ದೌಸ್ ಗೋತ್ರದ ನಾಯಕನಾಗಿದ್ದರು. ಅರೇಬಿಯನ್ ಪ್ರಮುಖರ ಖ್ಯಾತ ಉದಾರಮತಿಗಳ ಗುಂಪಿನಲ್ಲಿ ಅವರು ಮುಂಚೂಣಿಯಲ್ಲಿದ್ದರು. ಅವರ ಅಡಿಗೆ ಪಾತ್ರೆಯ ಕೆಳಗೆ ಎಂದೂ ಬೆಂಕಿಯು ಆರುತ್ತಿರಲಿಲ್ಲ ಮತ್ತು ದಾರಿಹೋಕರಿಗೆಂದೂ ಅವರ ಮನೆಯ ಬಾಗಿಲು ಮುಚ್ಚಿರುತ್ತಿರಲಿಲ್ಲ ಎಂದು ತುಫೈಲ್‌ರ ಬಗ್ಗೆ ಊರವರು ಹೇಳುತ್ತಿದ್ದರು.

ಹಸಿದಾತನಿಗೆ ಊಟ, ಭಯಭೀತನಿಗೆ ನಿರ್ಭೀತಿ, ಅಭಯ ಯಾಚಿಸುವವನಿಗೆ ಅಭಯ ತುಫೈಲ್‌ರ ಬಳಿ ಖಾತರಿಯಾಗಿತ್ತು.

ಇವೆಲ್ಲಕ್ಕಿಂತ ಹೊರತಾಗಿ ತುಫೈಲ್‌ರನ್ನು ಖ್ಯಾತರನ್ನಾಗಿಸಿದ ಇನ್ನೊಂದು ಮುಖ್ಯ ಕ್ಷೇತ್ರವೂ ಇದೆ. ಅವರು ಅಸಾಧಾರಣ ಬುದ್ಧಿ, ದೂರದೃಷ್ಟಿಯಿರುವ ಸಾಹಿತಿಯಾಗಿದ್ದರು. ಮಾತುಗಳ ಮೂಲಕ ಅದ್ಭುತಗಳನ್ನು ಸೃಷ್ಟಿಸಿರುವ ತೀಕ್ಷ್ಣಮತಿ ಕವಿಯಾಗಿದ್ದರು.

ತಿಹಾಮಾದ ತನ್ನ ಬುಡಕಟ್ಟು ಜನಾಂಗ ವಾಸ್ತವ್ಯ ಹೂಡಿದ ಸ್ಥಳದಿಂದ ಮಕ್ಕಾವನ್ನು ಗುರಿಯಾಗಿಸಿಕೊಂಡು ತುಫೈಲ್ ಹೊರಟಿರುವರು. ಪ್ರವಾದಿ (ಸ) ಮತ್ತು ಸತ್ಯ ನಿಷೇಧಿಗಳಾದ ಖುರೈಷಿಗಳ ಮಧ್ಯೆ ಸಂಘರ್ಷವು ತೀವ್ರಗೊಂಡ ಕಾಲ. ಉಭಯ ಪಕ್ಷೀಯರು ಜನರನ್ನು ಪ್ರಭಾವಕ್ಕೊಳಪಡಿಸಿ ತಮ್ಮ ಪಕ್ಷಕ್ಕೆ ಸೇರಿಸಿಕೊಳ್ಳಲು ತೀವ್ರ ಪ್ರಯತ್ನ ನಡೆಸುತ್ತಿದ್ದರು. ಪ್ರತಿಯೋರ್ವನೂ ತಮ್ಮ ಪಕ್ಷಕ್ಕೆ ಸಹಾಯಕನಾಗಿ ದೊರಕುವಂತಾಗಲು ಬಯಸಿದರು. ಅವರನ್ನು ಆಕರ್ಷಿಸಲು ಹಲವಾರು ಕಾರ್ಯಕ್ರಮಗಳನ್ನು ನಡೆಸಿದ್ದರು.

ಪ್ರವಾದಿ(ಸ) ತನ್ನ ಒಡೆಯನ ಮಾರ್ಗದೆಡೆಗೆ ಜನರನ್ನು ಆಹ್ವಾನಿಸುತ್ತಿದ್ದ ಕಾಲ. ಅವರ ಕೈಯಲ್ಲಿದ್ದ ಆಯುಧವೆಂದರೆ ಅಲ್ಲಾಹನೊಂದಿಗಿರುವ ದೃಢ ವಿಶ್ವಾಸ ಮತ್ತು ಅಲ್ಲಾಹನಿಂದ ಅವತೀರ್ಣವಾದ ಸಂದೇಶ ಮಾತ್ರ. ಆದರೆ ಸತ್ಯನಿಷೇಧಿಗಳಾದ ಖುರೈಶರು ಸರ್ವವಿಧ ಆಯುಧ ಮತ್ತು ಶಕ್ತಿಯನ್ನು ಉಪಯೋಗಿಸಿಕೊಂಡು ಅಲ್ಲಿರುವ ಸಂದೇಶ ಪ್ರಚಾರವನ್ನು ವಿರೋಧಿಸುತ್ತಿದ್ದಾರೆ. ಎಲ್ಲಾ ರೀತಿಯಲ್ಲೂ ಜನರನ್ನು ಪ್ರವಾದಿ(ಸ)ಯಿಂದ ದೂರಗೊಳಿಸಲು ಪ್ರಯತ್ನಿಸುತ್ತಿದ್ದಾರೆ.

ಅದ್ಯಾವುದೋ ಅಗತ್ಯಕ್ಕಾಗಿ ಮಕ್ಕಾಗೆ ಪ್ರಯಾಣ ಬೆಳೆಸಿದ ತುಫೈಲ್ ಈ ಸಂಘರ್ಷ ಭೂಮಿಗೆ ಆಕಸ್ಮಿಕವಾಗಿ ತಲುಪುತ್ತಾರೆ. ಪ್ರವಾದಿ (ಸ) ಮತ್ತು ಖುರೈಷಿಗಳ ಮಧ್ಯೆಯಿರುವ ಸಂಘರ್ಷವನ್ನು ತುಫೈಲ್ ಗಮನಿಸಿರಲಿಲ್ಲ. ಆದರೆ ಈ ಪ್ರಯಾಣವು ತುಫೈಲ್‌ರವರ ಬದುಕಿನಲ್ಲಿ ಅವಿಸ್ಮರಣೀಯವಾದ ಹಲವು ಅನುಭವಗಳಿಗೆ ನಾಂದಿಯಾಯಿತು. ಅದು ವಿಚಿತ್ರವೂ ಅದ್ಭುತವೂ ಆದ ಕತೆ.

ವಿಸ್ಮಯಕರವಾದ ಆ ಘಟನೆಗಳನ್ನು ತುಫೈಲ್‌ರವರೇ ಸ್ವಯಂ ವಿವರಿಸುತ್ತಾರೆ. ''ನಾನು ಮಕ್ಕಾಗೆ ತಲುಪಿದೆನಷ್ಟೆ. ಖುರೈಷಿ ನೇತಾರರು ನನ್ನನ್ನು ಕಂಡೊಡನೆ ಲಗುಬಗೆಯಿಂದೆದ್ದು ಸ್ವಾಗತಿಸಿದರು. ಭಾರೀ ಗೌರವಾದರದಿಂದ ನನ್ನನ್ನು ಅವರ ಕೇಂದ್ರಗಳಿಗೆ ಕರೆದುಕೊಂಡು ಹೋದರು. ನಂತರ ಖುರೈಷಿ ಪ್ರಮುಖರು, ನೇತಾರರು ನನ್ನ ಸುತ್ತಲೂ ಕುಳಿತರು. ನಂತರ ಅವರೆಂದರು,'ಓ ತುಫೈಲ್ ಇದೀಗ ತಾವು ನಮ್ಮ ಊರಿಗೆ ಬಂದಿದ್ದೀರಿ. ಪ್ರವಾದಿ ಎಂದು ಸ್ವಯಂ ವಾದಿಸುವ ಓರ್ವ ವ್ಯಕ್ತಿ ನಮ್ಮ ಮಧ್ಯೆ ಇದ್ದಾರೆ. ಅವರು ಎಲ್ಲಾ ವಿಚಾರಗಳಲ್ಲೂ

''ಮುಹಮ್ಮದ್, ತಮ್ಮ ಸಮುದಾಯವು ತಮ್ಮ ಕುರಿತು ಬಹಳ ಕೆಟ್ಟದಾದ ರೀತಿಯಲ್ಲಿ ಪರಿಚಯಿಸಿದರು. ತಮ್ಮ ಮಾತನ್ನು ಕೇಳದಂತಿರಲು ನಾನು ಕಿವಿಗಳಿಗೆ ಹತ್ತಿಯನ್ನು ತುರುಕಿಸಿದ್ದೆನು. ಏಕೆಂದರೆ ತಮ್ಮ ಕುರಿತು ಅವರು ನನ್ನಲ್ಲಿ ಅಷ್ಟೊಂದು ಭಯ ಹುಟ್ಟಿಸಿದ್ದರು.ಆದರೆ ತಮ್ಮ ಒಂದೆರಡು ಮಾತನ್ನು ನನಗೆ ಕೇಳಿಸಿಕೊಳ್ಳುವಂತಾಗಲು ಅಲ್ಲಾಹನು ತೀರ್ಮಾನಿಸಿರಬೇಕು. ತಮ್ಮಿಂದ ನಾನು ಕೇಳಿಸಿಕೊಂಡ ಮಾತುಗಳೆಲ್ಲವೂ ಉತ್ತಮವಾದುದು. ಆದುದರಿಂದ ತಮ್ಮ ಸಂದೇಶವನ್ನು ಪೂರ್ತಿಯಾಗಿ ನನಗೆ ಹೇಳಿಬಿಡಿ.

ಸಮಸ್ಯೆಗಳನ್ನು ಹುಟ್ಟು ಹಾಕಿ ನಮ್ಮ ಮಧ್ಯೆ ತೀವ್ರ ಭಿನ್ನಮತ ಮತ್ತು ಶಿಥಿಲತೆಯನ್ನು ಸೃಷ್ಟಿಸಿ ನಮ್ಮ ಸಮುದಾಯವನ್ನು ಛಿದ್ರಗೊಳಿಸಿದ್ದಾರೆ. ನಮಗೆ ಒದಗಿದ ಈ ದುರಂತ ತಮಗೂ, ತಾವು ಪ್ರತಿನಿಧಿಸುವ ಸಮುದಾಯಕ್ಕೂ ಬಾಧಿಸಬಹುದೋ ಎಂದು ನಮಗೆ ಭಯವಾಗುತ್ತಿದೆ. ಆದುದರಿಂದ ತಾವು ಅವರೊಂದಿಗೆ ಮಾತನಾಡುವ ಮತ್ತು ಅವರ ಮಾತನ್ನು ಕೇಳುವ ಸಂದರ್ಭ ಉಂಟಾಗಲೇಬಾರದು. ಕಾರಣ ಅವರ ಮಾತಿಗೆ ಅದ್ಯಾವುದೋ ಮಾಂತ್ರಿಕ ಶಕ್ತಿ ಇರುವಂತೆ ತೋರುತ್ತಿದೆ. ಅವರ ಮಾತು ಮತ್ತು ಚಟುವಟಿಗೆಗಳೆಲ್ಲವೂ ತಂದೆ, ಮಕ್ಕಳು, ಸಹೋದರರು, ಪತಿಪತ್ನಿಯರ ಮಧ್ಯೆ ಒಡಕನ್ನುಂಟು ಮಾಡುತ್ತಿದೆ.''

ತುಫೈಲ್ ಮುಂದುವರಿಸುತ್ತಾ ಹೇಳುತ್ತಾರೆ: ''ಅಲ್ಲಾಹನೇ, ಆ ಮನುಷ್ಯನ ಕುರಿತಾದ ವಿಚಿತ್ರವಾದ ಈ ವಿವರಣೆಗಳನ್ನು ಕೇಳಿದಾಗ ನನ್ನ ಮತ್ತು ಗೋತ್ರದಲ್ಲಿ ಒಡಕ್ಕನ್ನುಂಟು ಮಾಡುವ ಆ ಮನುಷ್ಯನಿಂದ ದೂರವಿರುವುದು ಲೇಸೆಂದು ನಾನು ನಿರ್ಧರಿಸಿದೆನು. ಅವರೊಂದಿಗೆ ಮಾತನಾಡಬಾರದೆಂದೂ, ಅವರ ಮಾತನ್ನು ಕೇಳಬಾರದೆಂದೂ ತೀರ್ಮಾನಿಸಿದೆನು.

''ಹಾಗೆಯೇ ಪವಿತ್ರ ಕಅಬಾಲಯದ ತವಾಫ್ ನಿರ್ವಹಿಸಲು ಮತ್ತು ಮೆಚ್ಚಿನ ವಿಗ್ರಹಗಳನ್ನು ಪೂಜಿಸಲು ನಾನು ಕಅಬಾಲಯದ ಆವರಣದೊಳಗೆ ಪ್ರವೇಶಿಸಿದೆನು. ಆ ವೇಳೆ ಮುಹಮ್ಮದ್ (ಸ)ರ ಮಾತುಗಳು ಕೇಳದಿರಲೆಂದು ಎರಡೂ ಕಿವಿಗಳಲ್ಲಿ ಹತ್ತಿಯನ್ನು ತುರುಕಿಸಿದ್ದೆನು.''

''ಆದರೆ ಪವಿತ್ರ ಮಂದಿರವನ್ನು ಪ್ರವೇಶಿಸುತ್ತಲೇ ಪ್ರವಾದಿ(ಸ) ಕಅಬಾದ ಬಳಿ ನಮಾಝ್ ನಿರ್ವಹಿಸುವುದನ್ನು ಕಂಡೆನು. ನಾವು ಪ್ರಾರ್ಥಿಸುತ್ತಿರುವ ರೀತಿಯಲ್ಲಿ ಅವರು ಪ್ರಾರ್ಥಿಸುತ್ತಿರಲಿಲ್ಲ. ಅದು ಎಲ್ಲಾ ರೀತಿಯಲ್ಲೂ ವಿಭಿನ್ನವಾಗಿತ್ತು. ಆ ಪ್ರಾರ್ಥನಾ ದೃಶ್ಯವು ನನ್ನನ್ನು ಬಹಳಷ್ಟು ಆಕರ್ಷಿಸಿತು. ಪ್ರವಾದಿ(ಸ)ರವರ ಪ್ರಾರ್ಥನೆ ನನ್ನಲ್ಲಿ ಚಲನೆಯನ್ನು ಸೃಷ್ಟಿಸಿತು. ಇದೀಗ ನನಗೆ ತಿಳಿಯದೇನೇ ನಾನು ಅವರ ಬಳಿಗೆ ಮೆಲ್ಲಮೆಲ್ಲನೆ ಸಾಗುತ್ತಿದ್ದೆ.

ಅವರು ಮಾತನಾಡುತ್ತಿರುವುದನ್ನು ಒಂದಿನಿತಾದರೂ ನಾನು ಕೇಳುವಂತಾಗಲು ಅಲ್ಲಾಹನು ನಿರ್ಧರಿಸಿದಂತೆ! ಅವರು ಬಹಳ ಉತ್ತಮ ಮಾತುಗಳನ್ನಾಡುತ್ತಿದ್ದಾರೆಂದು ನನಗೆ ತೋರಿತು. ಆ ವೇಳೆ ನಾನು ಮನದೊಳಗೆ ಹೀಗೆ ಅಂದುಕೊಂಡೆನು.

''ಓ ತುಫೈಲ್ ನಿನ್ನ ತಾಯಿ ನಿನ್ನನ್ನು ಕಳೆದುಕೊಂಡಳು. ನೀನು ಬುದ್ಧಿವಂತ ಹಾಗೂ ಕವಿಯಾಗಿರುವಿ. ಒಳಿತು ಕೆಡುಕುಗಳನ್ನು ಬೇರ್ಪಡಿಸಿ ತಿಳಿಯಲು ನಿನಗೆ ಚೆನ್ನಾಗಿ ತಿಳಿಯದೆ? ಮತ್ಯಾಕೆ ಈ ಮನುಷ್ಯನು ಹೇಳುವುದನ್ನು ಕೇಳಲು ಭಯಪಡುತ್ತಿರುವುದು? ಇನ್ನು ಆತ ಕೆಡುಕನ್ನು ಪ್ರಚಾರ ಮಾಡುತ್ತಿದ್ದರೆ ಅದನ್ನು ಉಪೇಕ್ಷಿಸಬಹುದಲ್ಲವೇ?

''ಪ್ರವಾದಿ(ಸ)ಅಲ್ಲಿಂದ ಮನೆಗೆ ನಿರ್ಗಮಿಸುವವರೆಗೆ ನಾನಲ್ಲೇ ನಿಂತಿದ್ದೆನು. ಅವರು ಅಲ್ಲಿಂದ ಹೊರಟಾಗ ನಾನು ಅವರನ್ನು ಹಿಂಬಾಲಿಸಿದೆನು. ನಂತರ ಅವರು ಮನೆಯನ್ನು ಪ್ರವೇಶಿಸಬೇಕಾದರೆ ಅವರೊಂದಿಗೆ ನಾನೂ ಪ್ರವೇಶಿಸಿದೆನು. ನಾನು ಅವರೊಂದಿಗೆ ಕೇಳಿದೆನು;

''ಮುಹಮ್ಮದ್, ತಮ್ಮ ಸಮುದಾಯವು ತಮ್ಮ ಕುರಿತು ಬಹಳ ಕೆಟ್ಟದಾದ ರೀತಿಯಲ್ಲಿ ಪರಿಚಯಿಸಿದರು. ತಮ್ಮ ಮಾತನ್ನು ಕೇಳದಂತಿರಲು ನಾನು ಕಿವಿಗಳಿಗೆ ಹತ್ತಿಯನ್ನು ತುರುಕಿಸಿದ್ದೆನು. ಏಕೆಂದರೆ ತಮ್ಮ ಕುರಿತು ಅವರು ನನ್ನಲ್ಲಿ ಅಷ್ಟೊಂದು ಭಯ ಹುಟ್ಟಿಸಿದ್ದರು.ಆದರೆ ತಮ್ಮ ಒಂದೆರಡು ಮಾತನ್ನು ನನಗೆ ಕೇಳಿಸಿಕೊಳ್ಳುವಂತಾಗಲು ಅಲ್ಲಾಹನು ತೀರ್ಮಾನಿಸಿರಬೇಕು. ತಮ್ಮಿಂದ ನಾನು ಕೇಳಿಸಿಕೊಂಡ ಮಾತುಗಳೆಲ್ಲವೂ ಉತ್ತಮವಾದುದು. ಆದುದರಿಂದ ತಮ್ಮ ಸಂದೇಶವನ್ನು ಪೂರ್ತಿಯಾಗಿ ನನಗೆ ಹೇಳಿಬಿಡಿ.''

''ನಂತರ ಅವರು ತನ್ನ ಸಂದೇಶವನ್ನು ಸ್ಪಷ್ಟವಾಗಿ ನನಗೆ ವಿವರಿಸಿದರು. ಕುರ್‌ಆನಿನ ಸೂರಃ ಇಖ್‌ಲಾಸ್ ಮತ್ತು ಸೂರಃ ಫಲಖ್ ಓದಿ ಕೇಳಿಸಿದರು. ಅಲ್ಲಾಹನಾಣೆ, ಅವರ ಮಾತಿಗಿಂತ ಉತ್ತಮವಾದ ಮಾತನ್ನು ಅಂದಿನವರೆಗೆ ನಾನು ಕೇಳಿದ್ದಿಲ್ಲ. ಅವರು ಹೇಳುವುದಕ್ಕಿಂತ ಸರಿಯಾದ ಮತ್ತು ನ್ಯಾಯವಾದ ಬೇರೊಂದು ದೌತ್ಯ ಮತ್ತು ಸಂದೇಶದ ಅನುಭವ ಬೇರೆಲ್ಲೂ ನನಗೆ ಉಂಟಾಗಲಿಲ್ಲ.''

''ಆ ಸ್ಥಳದಲ್ಲೇ ನಾನು ನನ್ನ ಕೈಗಳನ್ನು ಅವರ ಮುಂದೆ ಚಾಚಿ ಅಲ್ಲಾಹನಲ್ಲದೆ ಬೇರೆ ಆರಾಧ್ಯನಿಲ್ಲವೆಂದೂ ಮುಹಮ್ಮದ್(ಸ) ಅಲ್ಲಾಹನ ರಸೂಲರೆಂದು ಹೇಳಿ ಸತ್ಯಸಾಕ್ಷ್ಯವನ್ನು ಘೋಷಿಸಿದೆನು. ಈ ರೀತಿ ನಾನು ಇಸ್ಲಾಮ್ ಪ್ರವೇಶಿಸಿದೆನು.''

''ಅದರ ನಂತರ ಸ್ವಲ್ಪ ಕಾಲ ಮಕ್ಕಾದಲ್ಲೇ ಕಳೆದೆನು. ಇಸ್ಲಾಮ್‌ಗೆ ಸಂಬಂಧಿಸಿದ ವಿಚಾರಗಳನ್ನು ಕಲಿತೆನು ಮತ್ತು ಕುರ್‌ಆನಿನ ಸುಲಭದ ಭಾಗಗಳನ್ನು ಕಂಠಪಾಠ ಮಾಡಿದೆನು. ನನ್ನ ಬುಡಕಟ್ಟಿನ ಕಡೆಗೆ ವಾಪಸು ತಿರುಗಿ ಹೋಗುವ ವೇಳೆ ನಾನು ಪ್ರವಾದಿ(ಸ)ಯೊಂದಿಗೆ ಹೇಳಿದೆನು;

''ಅಲ್ಲಾಹನ ದೂತರೇ, ನಾನು ನನ್ನ ಸಮುದಾಯಕ್ಕೆ ಬಹಳ ಸ್ವೀಕಾರ್ಯನಾದ ವ್ಯಕ್ತಿಯಾಗಿರುವೆನು. ಅವರೆಲ್ಲರನ್ನು ಇಸ್ಲಾಮ್‌ಗೆ ಆಹ್ವಾನಿಸಲು ಇದೀಗ ಹೊರಡುತ್ತಿರುವೆನು. ಆದುದರಿಂದ ನನಗೊಂದು ದೃಷ್ಟಾಂತವನ್ನು ನೀಡುವಂತಾಗಲು ಅಲ್ಲಾಹನೊಂದಿಗೆ ತಾವು ಪ್ರಾರ್ಥಿಸುಬೇಕು. ನಾನು ಅವರನ್ನು ಯಾವ ವಿಚಾರಕ್ಕಾಗಿ ಆಹ್ವಾನಿಸುವೆನೋ ಅದಕ್ಕೆ ಸಹಾಯಕವಾಗುವಂತಹ ದೃಷ್ಟಾಂತ.''

ಆ ವೇಳೆ ಪ್ರವಾದಿ (ಸ) ಈ ರೀತಿ ಪ್ರಾರ್ಥಿಸಿದರು. ''ಅಲ್ಲಾಹನೇ, ನೀನು ಈತನಿಗೊಂದು ದೃಷ್ಟಾಂತವನ್ನು ನೀಡು...''

ನಂತರ ನಾನು ನನ್ನ ಊರ ಜನರ ಬಳಿಗೆ ಹೊರಟೆನು. ಅವರ ಮನೆಗಳನ್ನು ದೂರದಿಂದ ಕಾಣುವಷ್ಟು ದೂರದಲ್ಲಿದ್ದಾಗ ನನ್ನ ಕಣ್ಣುಗಳ ಮಧ್ಯೆ ಪ್ರಕಾಶವೊಂದು ತೇಲಿ ಬಂತು. ಆ ವೇಳೆ ನಾನು ಹೇಳಿದನು. ''ಈ ಪ್ರಕಾಶವನ್ನು ನನ್ನ ಮುಖವನ್ನು ಹೊರತುಪಡಿಸಿ ಬೇರೆಲ್ಲಾದರೂ ಮಾಡಿ ಬಿಡು. ಇಲ್ಲದಿದ್ದರೆ ಅದು ನಾನು ಧರ್ಮವನ್ನು ತ್ಯಜಿಸಿದ್ದಾಗಿ ಎರಗಿದ ಶಿಕ್ಷೆ ಎಂದು ಅವರು ಭಾವಿಸಿಯಾರು ಎಂದು ನಾನು ಭಯಪಟ್ಟೆನು.'' ಆ ವೇಳೆ ಆ ಪ್ರಕಾಶವು ನನ್ನ ಚಾಟಿಯ ಒಂದು ಪಾರ್ಶ್ವಕ್ಕೆ ಬಡಿಯಿತು. ತೂಗು ಹಾಕಿದ ಒಂದು ಬೆಳಕಿನಂತೆ ಜನರೆಲ್ಲರೂ ನನ್ನ ಚಾಟಿಯಲ್ಲಿರುವ ಪ್ರಕಾಶವನ್ನು ಆಶ್ಚರ್ಯಚಕಿತರಾಗಿ ನೋಡುತ್ತಿದ್ದರು. ನಾನು ಬೆಟ್ಟದಿಂದ ಇಳಿದು ಅವರ ಬಳಿ ಸಾಗುತ್ತಿರಲು ಅವರು ನನ್ನನ್ನು ಆಶ್ಚರ್ಯದಿಂದ ನೋಡುತ್ತಿದ್ದರು. ಹಾಗೆಯೇ ನಾನು ಅವರ ಬಳಿಗೆ ತಲುಪಿದಾಗ ವಯೋವೃದ್ಧನಾದ ನನ್ನ ತಂದೆ ನನ್ನ ಬಳಿಗೆ ಬಂದರು. ನಾನು ಅವರೊಂದಿಗೆ ಹೇಳಿದೆನು:

''ಓ ನನ್ನ ತಂದೆಯೇ, ತಾವುಗಳು ಸ್ವಲ್ಪ ಸರಿದು ನಿಲ್ಲಿರಿ. ಇಂದಿನಿಂದ ನಾನು ನಿಮ್ಮ ಗುಂಪಿನಲ್ಲಿ ಸೇರಲಾರೆ. ತಾವು ನನ್ನ ಗುಂಪಿನಲ್ಲೂ ಸೇರಲಾರಿರಿ.''

ಅವರು ಹೇಳಿದರು: ''ನಿನಗೇನು ಸಂಭವಿಸಿತು ಮಗನೆ? ಯಾತಕ್ಕಾಗಿ ಈ ರೀತಿ ಮಾತನಾಡುತ್ತಿದ್ದಿ?''

ನಾನು ಹೇಳಿದೆನು: ''ನಾನು ಮುಸ್ಲಿಮನಾದೆನು. ನಾನು ಮುಹಮ್ಮದ್(ಸ)ರ ಧರ್ಮವನ್ನು ಸ್ವೀಕರಿಸಿದೆನು.''

ಅವರು ಹೇಳಿದರು. ''ಮಗನೇ ನನ್ನ ಧರ್ಮ ನಿನ್ನ ಧರ್ಮವೇ ಆಗಿದೆ. ನೀನು ಯಾವ ಧರ್ಮದಲ್ಲಿದ್ದೀಯೋ, ನಾನು ಸಹ ಆ ಧರ್ಮದಲ್ಲಿರುವೆನು.''

''ಹಾಗಿದ್ದರೆ ನೀವು ಹೊರಟು ಸ್ನಾನ ಮಾಡಿ ಬಟ್ಟೆಬರೆಗಳನ್ನು ತೊಳೆದು ಬರುವಿರಂತೆ. ನಾನು ಕಲಿತ ವಿಚಾರಗಳನ್ನು ತಮಗೂ ಕಲಿಸುವೆನು.

ಅವರು ಸ್ನಾನ ಮಾಡಿ ಬಟ್ಟೆಬರೆಗಳನ್ನು ತೊಳೆದು ಶುಚಿಯಾಗಿಸಿಕೊಂಡು ಬಂದರು. ನಾನು ಅವರಿಗೆ ಇಸ್ಲಾಮನ್ನು ವಿವರಿಸಿಕೊಟ್ಟೆನು. ಅವರು ಇಸ್ಲಾಂ ಸ್ವೀಕರಿಸಿದರು.

''ನಂತರ ನನ್ನ ಪತ್ನಿ ಬಂದಳು. ನಾನು ಆಕೆಯೊಂದಿಗೆ ಹೇಳಿದೆನು. ನೀನು ಸ್ವಲ್ಪ ಸರಿದು ನಿಲ್ಲುವಿಯಂತೆ. ನಾನು ನಿನ್ನ ಗುಂಪಿನಲ್ಲಿ ಸೇರಿದವನಲ್ಲ. ನೀನು ನನ್ನ ಗುಂಪಿನಲ್ಲೂ ಸೇರಿದವಳಲ್ಲ.''

''ಇದೇನು ಮಾತಿದು? ನನ್ನ ಮಾತಾಪಿತರು ತಮಗೆ ಬಲಿ.... ಅದೇಕೆ ಈ ರೀತಿಯ ಮಾತನ್ನು ಹೇಳುತ್ತಿದ್ದೀರಿ'' ಆಕೆ ಕೇಳಿದಳು.

''ನನ್ನನ್ನೂ ನಿನ್ನನ್ನೂ ಇಸ್ಲಾಂ ಬೇರ್ಪಡಿಸಿ ಬಿಟ್ಟಿದೆ. ನಾನು ಮುಸ್ಲಿಮನಾದೆನು. ನಾನು ಮುಹಮ್ಮದ್ (ಸ)ರ ಧರ್ಮವನ್ನು ಸ್ವೀಕರಿಸಿದೆನು.''

''ಹಾಗಿದ್ದರೆ ತಮ್ಮ ಧರ್ಮವೇ ನನ್ನ ಧರ್ಮವಾಗಿರುವುದು.''

ಹಾಗಿದ್ದರೆ ನೀನು 'ದುಶ್ಶರಾ[1]' ಕಾಲುವೆಗೆ ಹೋಗಿ ಸ್ನಾನ ಮಾಡಿ ಶುದ್ಧಿಯಾಗಿ ಬಂದು ಬಿಡು.

''ದುಶ್ಶರಾ ಕಾಲುವೆಯ ಕಾರಣದಿಂದ ಏನಾದರೂ ಶಾಪ ಅಥವಾ ಅಪಶಕುನವನ್ನು ನೀವು ಭಯಪಡುತ್ತೀರಾ?''

''ನಿನಗೂ, ದುಶ್ಶರಾಗೂ ನಾಶವುಂಟಾಗಲಿ! ಜನರಿಂದ ದೂರ ಸರಿದು ಯಾವುದಾದರೊಂದು ಸ್ಥಳಕ್ಕೆ ಹೋಗಿ ಸ್ನಾನ ಮಾಡಿ ಬಾ ಎಂದಷ್ಟೇ ನಾನು ಹೇಳಿದ್ದು. ಮಾತನಾಡಲು ಶಕ್ತಿಯಿಲ್ಲದ ದುಶ್ಶರಾದ ಶಿಲಾ ವಿಗ್ರಹ ನಿನಗೇನೂ ಕೇಡುಂಟು ಮಾಡಲಾರದೆಂದು ನಾನು ನಿನಗೆ ಮಾತು ಕೊಡುವೆನು.''

''ಆಕೆ ಹೋಗಿ ಸ್ನಾನ ಮಾಡಿ ಶುದ್ಧಿಯಾಗಿ ಬಂದಳು. ಆಕೆಗೂ ನಾನು ಇಸ್ಲಾಮಿನ ಪಾತ್ರದ ಕುರಿತು ಪಾಠ ಹೇಳಿದೆನು. ಆಕೆಯೂ ಇಸ್ಲಾಂ ಸ್ವೀಕರಿಸಿದಳು. ನಂತರ ನಾನು ದೌಸ್ ಗೋತ್ರವನ್ನು ಪೂರ್ತಿಯಾಗಿ ಇಸ್ಲಾಂಗೆ ಆಹ್ವಾನಿಸಿದೆನು. ಆದರೆ ಅಬೂ ಹುರೈರ ಒಬ್ಬರನ್ನು ಹೊರತುಪಡಿಸಿ ಬೇರೆ ಎಲ್ಲರೂ ಹಿಂಜರಿದು ನಿಂತರು. ಆದರೆ ಅಬೂಹುರೈರಾ ಯಾರನ್ನೂ ಕಾದು ನಿಲ್ಲದೆ ತಕ್ಷಣ ಇಸ್ಲಾಂ ಸ್ವೀಕರಿಸಿದರು.''

''ಹಾಗೆಯೇ ನಾನು ಅಬೂಹುರೈರಾರನ್ನು ಕರೆದುಕೊಂಡು ಮಕ್ಕಾಗೆ ಪ್ರವಾದಿ (ಸ)ಯ ಬಳಿಗೆ ಹೋದೆನು. ಆ ವೇಳೆ ಪ್ರವಾದಿ(ಸ) ಕೇಳಿದರು. ''ತುಫೈಲ್, ನೀವು ಯಾವ ರೀತಿ ತಮ್ಮೂರ ಜನರನ್ನು ಬಿಟ್ಟು ಬಂದಿರಿ?''

ನಾನು ಹೇಳಿದೆನು: ''ಮುಚ್ಚಿದ ಹೃದಯಗಳು! ಮಿತಿಮೀರಿದ

**''ನಾನು ಕೇಶಮುಂಡನ ಮಾಡಿದಂತೆ ಕಂಡ ಕನಸಿನ ಅರ್ಥ ನನ್ನ ತಲೆ ತಂಡರಿಸಲ್ಪಡುವುದು. ನನ್ನ ಬಾಯಿಂದ ಹೊರಟು ಹೋದ ಪಕ್ಷಿ ನನ್ನ ಆತ್ಮವಾಗಿತ್ತು. ನನ್ನನ್ನು ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡ ಮಹಿಳೆ ಭೂಮಿಯಾಗಿತ್ತು.**

**ಭೂಮಿಯಲ್ಲಿ ಕಬ್‌ರ್ ಅಗೆದು ಅದರಲ್ಲಿ ದಫನ ಮಾಡುವುದೆಂದರೆ ಖಂಡಿತವಾಗಿಯೂ ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟು ಹುತಾತ್ಮನಾಗಲು ನಾನು ಬಯಸುವೆನು. ನನ್ನನ್ನು ಹುಡುಕುತ್ತಿರುವ ನನ್ನ ಮಗನ ಚಿತ್ರಣ, ಆತನೂ ಹುತಾತ್ಮತೆಯ ಸೌಭಾಗ್ಯವನ್ನು ಹುಡುಕುತ್ತಿದ್ದಾನೆ ಎಂದರ್ಥ.**

ಸತ್ಯನಿಷೇಧ. ದೌಸ್ ಜನಾಂಗವನ್ನು ಧಿಕ್ಕಾರ ಮತ್ತು ಮಾರ್ಗಭ್ರಷ್ಠತೆ ಸೋಲಿಸಿಬಿಟ್ಟಿದೆ.'' ಅದನ್ನು ಕೇಳಿದ ಪ್ರವಾದಿ(ಸ) ಎದ್ದು ನಿಂತು ಅಂಗಸ್ನಾನ ಮಾಡಿ ನಮಾಝ್ ನಿರ್ವಹಿಸಿದರು. ನಂತರ ಆಕಾಶದ ಕಡೆಗೆ ಕೈ ಎತ್ತಿದರು. ಅಬೂ ಹುರೈರಾ (ರ) ಹೇಳುತ್ತಾರೆ: ''ಅದನ್ನು ಕಂಡಾಗ ಅವರು ನನ್ನ ಜನತೆಗೆ ಕೇಡಾಗಿ ಪ್ರಾರ್ಥಿಸುವರೆಂದೂ, ಆ ಕಾರಣದಿಂದ ಅವರೆಲ್ಲರೂ ನಾಶಗೊಳ್ಳುವರೆಂದೂ ನಾನು ಭಯಪಟ್ಟೆನು.

''ನಾನು ಉದ್ಗಾರ ತೆಗೆದನು: ''ಅಯ್ಯೋ, ಓ ನನ್ನ ಜನಾಂಗವೇ!''

ಆದರೆ ಪ್ರವಾದಿ (ಸ) ಈ ರೀತಿ ಪ್ರಾರ್ಥಿಸಿದರು.

''ಅಲ್ಲಾಹನೇ, ನೀನು ದೌಸ್‌ಗೆ ಸನ್ಮಾರ್ಗವನ್ನು ನೀಡು. ಅಲ್ಲಾಹನೇ ನೀನು ದೌಸ್‌ಗೆ ಸನ್ಮಾರ್ಗವನ್ನು ನೀಡು.''

ನಂತರ ಪ್ರವಾದಿ(ಸ)ತುಫೈಲ್‌ರತ್ತ ತಿರುಗಿ ಈ ರೀತಿ ಹೇಳಿದರು. ''ತಾವು ತಮ್ಮ ಊರಮಂದಿಯ ಕಡೆಗೆ ಹೊರಟು ಹೋಗಿ. ಅವರನ್ನು ಪ್ರೀತ್ಯಾದರಗಳಿಂದ ಇಸ್ಲಾಮಿನೆಡೆಗೆ ಕರೆಯಿರಿ.

ತುಫೈಲ್ ಹೇಳುತ್ತಾರೆ: ''ನಂತರ ಪ್ರವಾದಿ(ಸ)ರವರು ಮದೀನಾಗೆ ಹೋಗುವವರೆಗೆ ನಾನು ದೌಸ್ ಗೋತ್ರದೊಂದಿಗೇ ಇದ್ದೆನು. ವರ್ಷಗಳು ಕಳೆದು ಹೋದವು. ಬದ್ರ್, ಉಹ್‌ದ್, ಖಂದಖ್ ಕಳೆಯಿತು. ದೌಸ್‌ನ ಎಂಬತ್ತು ಕುಟುಂಬಗಳೊಂದಿಗೆ ನಾನು ಪ್ರವಾದಿ (ಸ)ರ ಸನ್ನಿಧಿಗೆ ತಲುಪಿದೆನು. ಅವರೆಲ್ಲರೂ ಇಸ್ಲಾಂ ಸ್ವೀಕರಿಸಿ ಉತ್ತಮ ಮುಸ್ಲಿಮರಾಗಿ ಜೀವಿಸುತ್ತಿದ್ದರು. ನಮ್ಮನ್ನು ನೋಡಿದಾಕ್ಷಣ ಪ್ರವಾದಿ(ಸ) ತುಂಬಾ ಸಂತಸಗೊಂಡರು. ಖೈಬರ್ ಯುದ್ಧದಲ್ಲಿ ಕೈವಶಪಡಿಸಿದ ಗನೀಮತ್[2] ಸೊತ್ತುಗಳಿಂದ ಬಾಣಗಳನ್ನು ಪ್ರವಾದಿ (ಸ)ರವರು ನಮಗೆ ಪಾಲು ಮಾಡಿಕೊಟ್ಟರು.

ಆ ವೇಳೆ ನಾವು ಹೇಳಿದೆವು: ''ಪ್ರವಾದಿವರ್ಯರೇ, ತಾವು ನೇತೃತ್ವವನ್ನು ನೀಡುವ ಎಲ್ಲಾ ಯುದ್ಧಗಳಲ್ಲೂ ತಮ್ಮ ಬಲಭಾಗದಲ್ಲಿ ದೃಢವಾಗಿ ನಿಂತು ಸಮರ ನಡೆಸುವ ಮುಂಚೂಣಿ ಹೋರಾಟಗಾರರನ್ನಾಗಿ ನಮ್ಮನ್ನು ನೇಮಿಸಿರಿ.''

''ಅಲ್ಲಾಹನು ಪ್ರವಾದಿವರ್ಯ(ಸ)ರಿಗೆ ಮಕ್ಕಾ ವಿಜಯವನ್ನು ನೀಡಿ ಅನುಗ್ರಹಿಸುವವರೆಗೆ ನಾನು ನೆಬಿವರ್ಯ(ಸ)ರೊಂದಿಗಿದ್ದೆನು. ಮಕ್ಕಾ ಫತಹ್ ನಂತರ ನಾನು ಪ್ರವಾದಿ (ಸ)ರ ಬಳಿ ತೆರಳಿ ಹೀಗೆಂದೆನು: ಅಲ್ಲಾಹನ ದೂತರೇ, ಅಮ್ರ್ ಬಿನ್ ಹಮಾಮರ ಮನೆಯಲ್ಲಿರುವ 'ದುಲ್‌ಕಫೈನ್' ವಿಗ್ರಹವನ್ನು ಸುಟ್ಟು ಬಿಡಲು ತಾವುಗಳು ಅನುಮತಿ ನೀಡಿರಿ.''

ಪ್ರವಾದಿ(ಸ) ಅದಕ್ಕಾಗಿ ಅವರಿಗೆ ಅನುಮತಿಯನ್ನು ನೀಡಿದರು. ಅದನ್ನು ಸುಟ್ಟುಬಿಡಲು ತಯಾರಾದಾಗ ಮಹಿಳೆಯರೂ, ಪುರುಷರೂ, ಮಕ್ಕಳೆಲ್ಲರೂ ಗುಂಪು ಸೇರಿದರು. ಅದನ್ನು ಸುಡುವುದರೊಂದಿಗೆ ಅದೇನೋ ದೊಡ್ಡ ದುರಂತ ನಡೆಯುವುದೆಂದು ಅವರು ಭಯಪಟ್ಟರು. ದುಲ್‌ಕಫೈನ್ ವಿಗ್ರಹಕ್ಕೇನಾದರೂ ಕೀಟಲೆ ಮಾಡಿದರೆ ಆಕಾಶದಿಂದೆರಗಿದ ಮಿಂಚು ತುಫೈಲರನ್ನು ನುಂಗಿಬಿಡುವುದೆಂದೂ, ಸಿಡಿಲು ಬಡಿದವರಂತೆ ತುಫೈಲ್ ಕುಸಿದು ಬೀಳುವರೆಂದೂ ಅವರು ಭಾವಿಸಿದರು. ವಾಸ್ತವದಲ್ಲಿ ಅದನ್ನು ನೋಡಲು ಅವರೆಲ್ಲರೂ ಕಾದು ಕುಳಿತಿದ್ದಾರೆ.

ಆದರೆ ಆ ವಿಗ್ರಹಗಳಿಗೆ ಆರಾಧಿಸುವ ಮಂದಿ ನೋಡುತ್ತಿದ್ದಂತೆಯೇ ತುಫೈಲ್ ಅದರ ಬಳಿಗೆ ಸರಿದರು. ವಿಗ್ರಹಕ್ಕೆ ಬೆಂಕಿಯಿಟ್ಟು ಅವರು ಈ ರೀತಿ ಹಾಡಿದರು.

''ದುಲ್‌ಕುಫೈನ್ ನಾನು ನಿನ್ನನ್ನು ಆರಾಧಿಸುವವನಲ್ಲ.
ನಮ್ಮ ಹುಟ್ಟು ನಿನ್ನ ಹುಟ್ಟಿಗಿಂತ ಮುಚೆಯೇ ನಡೆದಿತ್ತು.
ನಾನು ನಿನ್ನ ಎದೆಗೆ ಬೆಂಕಿಯನ್ನು ತುಂಬಿಸುತ್ತಿರುವೆನು.''

ದೌಸ್ ಗೋತ್ರದಲ್ಲಿ ಬಾಕಿಯಾದ ವಿಗ್ರಹಾರಾಧನೆ ಮತ್ತು ಬಹುದೇವ ವಿಶ್ವಾಸವೆಲ್ಲವೂ ಆ ವಿಗ್ರಹದೊಂದಿಗೆ ಸುಟ್ಟು ಕರಕಲಾಯ್ತು. ಆ ಜನಾಂಗ ಸಂಪೂರ್ಣವಾಗಿ ಇಸ್ಲಾಂ ಸ್ವೀಕರಿಸಿದರು.

ನಂತರ ಪ್ರವಾದಿ (ಸ)ರವರ ವಫಾತ್‌ವರೆಗೆ ತುಫೈಲ್‌ಬ್‌ನು ಅಮ್ರುದ್ದೌಸೀ ಪ್ರವಾದಿಯವರನ್ನು ಬಿಟ್ಟಗಲದೆ ನಿಂತರು.

ಪ್ರವಾದಿ(ಸ)ರವರ ವಿಯೋಗದ ನಂತರ ಅಬೂಬಕರ್(ರ) ಖಲೀಫರಾಗಿ ಅಧಿಕಾರ ವಹಿಸಿದಾಗ ತುಫೈಲ್(ರ) ತನ್ನನ್ನೂ ತನ್ನ ಖಡ್ಗವನ್ನೂ ಪ್ರಿಯ ಮಗನನ್ನೂ ಪ್ರವಾದಿ(ಸ)ರ ಉತ್ತರಾಧಿಕಾರಿಯೊಂದಿಗೆ ಅನುಸರಣಾ ಪ್ರತಿಜ್ಞೆಯನ್ನು ಮಾಡಿ ಸಮರ್ಪಿಸಿದರು.

ಧರ್ಮಭ್ರಷ್ಟರೊಂದಿಗಿರುವ ಯುದ್ಧವು ತೀವ್ರಗೊಂಡ

ವೇಳೆಯಲ್ಲಿ ತುಫೈಲ್(ರ) ಮುಸ್ಲಿಂ ಸೈನ್ಯದ ಮುಂಚೂಣಿಯಲ್ಲಿ ನಿಂತರು. ಮಹಾಸುಳ್ಳ ಪ್ರವಾದಿ ಮುಸೈಲಿಮನ ವಿರುದ್ಧ ಹೋರಾಡಲು ತನ್ನ ಮಗನನ್ನೂ ತನ್ನೊಂದಿಗೆ ಸೇರಿಸಿಕೊಂಡರು. ಯಮನ್ ಪ್ರಯಾಣದ ಮಧ್ಯೆ ದಾರಿಯಲ್ಲಿ ಅವರು ಕನಸೊಂದನ್ನು ಕಂಡರು. ಆ ವೇಳೆ ತನ್ನ ಸಂಗಡಿಗರನ್ನು ಕರೆದು ಅವರು ಹೀಗೆಂದರು: ''ನಾನೊಂದು ಕನಸನ್ನು ಕಂಡೆನು. ನೀವು ಅದರ ವ್ಯಾಖ್ಯಾನವನ್ನು ವಿವರಿಸಿರಿ'' ಆ ವೇಳೆ ಅವರು ಕೇಳಿದರು: ನೀವು ಕಂಡ ಕನಸೇನು?'' ಅವರು ಹೇಳಿದರು: ''ನಾನು ನನ್ನ ಕೇಶಮುಂಡನ ಮಾಡಿದಂತೆ ಕನಸ ಕಂಡೆನು. ನನ್ನ ಬಾಯೊಳಗಿಂದ ಪಕ್ಷಿಯೊಂದು ಹೊರಗೆ ಹಾರಿ ಹೋಯಿತು. ಓರ್ವ ಮಹಿಳೆ ನನ್ನನ್ನು ಆಕೆಯ ಹೊಟ್ಟೆಯೊಳಗೆ ಬಚ್ಚಿಟ್ಟುಕೊಂಡಿದ್ದಳು. ಆ ವೇಳೆ ನನ್ನ ಮಗ ಅಮ್ರ್ ಆತಂಕದಿಂದ ನನ್ನನ್ನು ಹುಡುಕುತ್ತಿರುವುದನ್ನು ಕಂಡೆನು. ಆದರೆ ನನ್ನ ಮತ್ತು ಅವನ ಮಧ್ಯೆ ಒಂದು ತೆರೆ ಬಿದ್ದು ಬಿಟ್ಟಿತು.''

ಕನಸಿನ ವಿವರ ಕೇಳಿದ ನಂತರ ಅವರು ಹೇಳಿದರು. ''ಒಳ್ಳೆಯ ಕನಸು'' ಆ ವೇಳೆ ತುಫೈಲ್ ಈ ರೀತಿ ಹೇಳಿದರು: ''ಹಾಗಿದ್ದರೆ ಆ ಕನಸನ್ನು ನಾನು ಈ ರೀತಿ ವ್ಯಾಖ್ಯಾನಿಸುವೆನು.''

''ನಾನು ಕೇಶಮುಂಡನ ಮಾಡಿದಂತೆ ಕಂಡ ಕನಸಿನ ಅರ್ಥ ನನ್ನ ತಲೆ ತುಂಡರಿಸಲ್ಪಡುವುದು. ನನ್ನ ಬಾಯಿಂದ ಹೊರಟು ಹೋದ ಪಕ್ಷಿ ನನ್ನ ಆತ್ಮವಾಗಿತ್ತು. ನನ್ನನ್ನು ಹೊಟ್ಟೆಯಲ್ಲಿ ಬಚ್ಚಿಟ್ಟುಕೊಂಡ ಮಹಿಳೆ ಭೂಮಿಯಾಗಿತ್ತು.

ಭೂಮಿಯಲ್ಲಿ ಕಬ್ರ್ ಅಗೆದು ಅದರಲ್ಲಿ ದಫನ ಮಾಡುವುದೆಂದರೆ ಖಂಡಿತವಾಗಿಯೂ ಅಲ್ಲಾಹನ ಮಾರ್ಗದಲ್ಲಿ ಕೊಲ್ಲಲ್ಪಟ್ಟು ಹುತಾತ್ಮನಾಗಲು ನಾನು ಬಯಸುವೆನು. ನನ್ನನ್ನು ಹುಡುಕುತ್ತಿರುವ ನನ್ನ ಮಗನ ಚಿತ್ರಣ, ಆತನೂ ಹುತಾತ್ಮತೆಯ ಸೌಭಾಗ್ಯವನ್ನು ಹುಡುಕುತ್ತಿದ್ದಾನೆ ಎಂದರ್ಥ. ಅಲ್ಲಾಹನು ಅನುಮತಿಸಿದರೆ ಕೊನೆಗೆ ಆತನಿಗೆ ಅದನ್ನು ಒಮ್ಮೆ ಮಾತ್ರವೇ ಕೈವಶಪಡಿಸಲು ಸಾಧ್ಯ. ಯಮಾಮದ ರಣರಂಗದಲ್ಲಿ ತನ್ನ ವೀರ ಶೌರ್ಯವನ್ನು ತುಫೈಲ್(ರ)ರವರು ತೋರಿದರು. ಕೊನೆಗೆ ಗಾಯಗೊಂಡು ಬಿದ್ದ ಅವರು ರಣರಂಗದಲ್ಲಿ ಶಹೀದ್ ಆದರು.

ತುಫೈಲ್(ರ)ರ ಮಗ ಅಮ್ರ್‌ರವರ ಬಲಗೈ ಯುದ್ಧದಲ್ಲಿ ಕತ್ತರಿಸಲ್ಪಟ್ಟಿತು. ತನ್ನ ತಂದೆ ಮತ್ತು ತನ್ನ ಬಲಗೈನ್ನು ಯುದ್ಧ ಭೂಮಿಯಲ್ಲಿ ದಫನ ಮಾಡಿದ ನಂತರ ಅಮ್ರ್(ರ)ರವರು ಮದೀನಾಗೆ ಮರಳಿದರು.

ಉಮರ್(ರ)ರವರ ಆಡಳಿತಾವಧಿಯಲ್ಲಿ ಒಮ್ಮೆ ಅಮ್ರ್‌ಬಿನ್‌ತುಫೈಲ್(ರ)ರವರು ಖಲೀಫಾರ ಸಭೆಗೆ ಹಾಜರಾದರು. ಆ ವೇಳೆಗಷ್ಟೇ ಉಮರ್(ರ)ರವರಿಗೆ ಆಹಾರವನ್ನು ತಂದಿರಿಸಲಾಯಿತು. ಅವರ ಸುತ್ತಲೂ ತುಂಬಾ ಜನರು ಸೇರಿದ್ದರು. ಆದರೆ ಅಮ್ರ್(ರ) ಅಲ್ಲಿಂದ ಮೆಲ್ಲನೆ ಸರಿದು ನಿಂತರು. ಆ ವೇಳೆ ಉಮರ್ (ರ) ಅವರೊಂದಿಗೆ ಕೇಳಿದರು: ''ಏನಾಯ್ತು ಅಮ್ರ್? ತಮ್ಮ ಕತ್ತರಿಸಲ್ಪಟ್ಟ ಕೈಯ ಕಾರಣದಿಂದ ಸಂಕೋಚಗೊಂಡು ಊಟ ಮಾಡಲು ಮುಂದೆ ಬರದೆ ಹಿಂದೆ ಸರಿದು ನಿಂತಿರಾ?''

ಅವರು ಹೇಳಿದರು: ''ಹೌದು, ಅಮೀರುಲ್ ಮುಅ್‌ಮಿನೀನ್. ಆ ವೇಳೆ ಉಮರ್(ರ) ಹೇಳಿದರು: ''ಅಲ್ಲಾಹನಾಣೆ, ಛೇಧಿಸಲ್ಪಟ್ಟ ಕೈಯಿಂದ ತಾವು ಈ ಆಹಾರವನ್ನು ಕಲಸುವವರೆಗೆ ನಾನು ಈ ಆಹಾರದ ರುಚಿ ನೋಡಲಾರೆ ಖಂಡಿತ. ಅಲ್ಲಾಹನಾಣೆ, ಈ ಸಮುದಾಯದಲ್ಲಿ ಸ್ವಂತ ದೇಹದ ಒಂದು ಭಾಗವು ಸ್ವರ್ಗದಲ್ಲಿರುವ ವ್ಯಕ್ತಿ ನೀವಲ್ಲದೆ ಬೇರೆ ಯಾರೂ ಇಲ್ಲ.'' ಯಮಾಮ ಯುದ್ಧದಲ್ಲಿ ಕತ್ತರಿಸಲ್ಪಟ್ಟ ಕೈಯ ಕುರಿತಾಗಿತ್ತು ಖಲೀಫರ ಮಾತು.

ಹುತಾತ್ಮತೆಯ ಕನಸು ಅಮ್ರ್‌ರವರ ಹೃದಯದಲ್ಲಿ ಸಾಕ್ಷಾತ್ಕಾರವನ್ನು ಹುಡುಕಾಡುತ್ತಿತ್ತು. ಯಮಾಮದಲ್ಲಿ ತಂದೆಯನ್ನು ಅಗಲಿದ ಆ ದಿನದಿಂದ ಹುತಾತ್ಮತೆಯ ಕನಸಲ್ಲಿ ವಿಹರಿಸುತ್ತಿದ್ದರು ಅಮ್ರ್(ರ).

ಒಂದು ಅವಕಾಶಕ್ಕಾಗಿ ಕಾಯುತ್ತಿದ್ದ ಅಮ್ರ್(ರ) ಯರ್ಮೂಕ್[3] ಯುದ್ಧದ ವೇಳೆ ಮುಂಚೂಣಿಯಲ್ಲಿ ಸ್ಥಾನವನ್ನ ಪಡೆದುಕೊಂಡರು. ವೀರ ಹೋರಾಟದ ಕೊನೆಯಲ್ಲಿ ತಾನು ಧೀರ್ಘಕಾಲ ಕನಸು ಕಂಡ - ತನ್ನ ತಂದೆ ತನಗಾಗಿ ಬಯಸಿದ - ಹುತಾತ್ಮತೆ ಅವರನ್ನು ಹುಡುಕಿಕೊಂಡು ಬಂದಿತ್ತು.

ಅಲ್ಲಾಹನು ತುಫೈಲ್ ಬಿನ್ ಅಮ್ರ್ (ರ)ಗೆ ಕರುಣೆಸಲಿ. ವೀರನಾದ ಹುತಾತ್ಮನೂ, ವೀರ ಹುತಾತ್ಮನ ತಂದೆಯೂ ಆಗಿರುವರು ತುಫೈಲ್ ಬಿನ್ ಅಮ್ರ್(ರ).

***ಟಿಪ್ಪಣಿ:***

***1.ದೌಸ್ ಬುಡಕಟ್ಟು ಜನಾಂಗದವರು ದುಶ್ಶರಾ ಶಿಲಾವಿಗ್ರಹವನ್ನು ಆರಾಧಿಸುತ್ತಿದ್ದರು. ಆ ವಿಗ್ರಹದ ಸುತ್ತಲೂ ಪರ್ವತದಿಂದ ಇಳಿದು ಬಂದ ನೀರು ಕಾಲುವೆಯಂತೆ ಹರಡಿ ನಿಂತಿತ್ತು.***

***2.ಯುದ್ಧದಲ್ಲಿ ಶತ್ರುಸೇನೆಯ ಕೈಯಿಂದ ವಶಪಡಿಸಿಕೊಂಡ ಯುದ್ಧ ಸಾಮಗ್ರಿಗಳು ಮತ್ತು ಸೊತ್ತುಗಳು.***

***3.ಹಿಜ್ರ 15ನೇ ವರ್ಷದಲ್ಲಿ ಮುಸ್ಲಿಮ್-ರೋಮನ್ ಸೈನ್ಯದ ಮಧ್ಯೆ ನಡೆದ ಹಲವಾರು ಯುದ್ಧಗಳಲ್ಲಿ ಯರ್ಮೂಕ್ ಯುದ್ಧವು ನಿರ್ಣಾಯಕವಾಗಿತ್ತು. ಐತಿಹಾಸಿಕವಾದ ಈ ಯುದ್ಧದಲ್ಲಿ ಮುಸ್ಲಿಮರು ರೋಮ್ ಸೇನೆಯ ವಿರುದ್ಧ ಗಂಭೀರ ಗೆಲುವು ಸಾಧಿಸಿದರು.***

23ನೇ ಪುಟದಿಂದ...



## ದಿಕ್ಕುತಪ್ಪಿಸಿದವರೆಲ್ಲಾ ನಾಪತ್ತೆ...

ವನ್ನು ಸೂಕ್ಷ್ಮವಾಗಿ ಅಂದಾಜಿಸಿರಲಿಲ್ಲ. ಫ್ಯಾಷಿಸ್ಟ್ ಅಜೆಂಡಾವನ್ನು ಅಷ್ಟು ಸುಲಭವಾಗಿ ಅಂದಾಜಿಸಿಕೊಳ್ಳಲು ಸಾಧ್ಯವಿಲ್ಲ.

ಗಮನಾರ್ಹ ಸಂಗತಿಯೇನೆಂದರೆ, ಅಷ್ಟೇನೂ ಶಿಕ್ಷಣ ಪಡೆದಿರದ ಅಥವಾ ಮೂಲತಃ ಗ್ರಾಮೀಣ ನಿವಾಸಿಯಾಗಿರುವ ಅಣ್ಣಾಹಝಾರೆಯಂಥವರ ಹೋರಾಟವನ್ನು ಯಾವ ರೀತಿ ಹತ್ತಿಕ್ಕಲಾಗುತ್ತದೆ ಎಂಬುದನ್ನು ಭ್ರಷ್ಟಾಚಾರದ ವಿರುದ್ಧದ ಆಂದೋಲನವು ಸ್ಪಷ್ಟಪಡಿಸಿದೆ.

ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯ ಮರುದಿನವೇ ಇನ್ನೊಂದು ಸ್ವಾತಂತ್ರ್ಯ ಸಂಗ್ರಾಮವೇ ಆರಂಭವಾಗುವ ಲಕ್ಷಣಗಳು ಗೋಚರಿಸುತ್ತಿವೆ. ಭ್ರಷ್ಟಾಚಾರದ ನಿಗ್ರಹಕ್ಕಾಗಿ ಪ್ರಬಲ ಲೋಕಪಾಲ ಮಸೂದೆಯನ್ನು ಜಾರಿಗೊಳಿಸುವಂತೆ ಆಗಸ್ಟ್ 16ರಂದು ಮತ್ತೊಮ್ಮೆ ಉಪವಾಸ ಸತ್ಯಾಗ್ರಹ ಕೈಗೊಳ್ಳುವುದಾಗಿ ಹಝಾರೆ ಘೋಷಿಸಿದ್ದಾರೆ. ಈ ಸತ್ಯಾಗ್ರಹಕ್ಕೆ ಈ ಹಿಂದಿನಂತೆ ಬೆಂಬಲ ದೊರೆಯುವುದೋ, ಕೇಂದ್ರ ಸರಕಾರವು ಯಾವ ಕ್ರಮ ತೆಗೆದುಕೊಳ್ಳುತ್ತದೋ ಎಂಬುದನ್ನು ಕಾದುನೋಡಬೇಕಾಗಿದೆ. ಇಲ್ಲಿ ಏನು ನಡೆಯುತ್ತದೋ ಅವೆಲ್ಲವನ್ನೂ ತನ್ನ ರಾಜಕೀಯ ಉದ್ದೇಶಕ್ಕಾಗಿ ಬಳಸಿಕೊಳ್ಳಲು ಕೇಸರಿ ಪಡೆಯು ಹೊಂಚು ಹಾಕಿ ಕಾಯುತ್ತಿದೆ. ಈ ಸಂದರ್ಭದಲ್ಲಿ ಹಝಾರೆಯ ಆತಂಕವೂ ಇದೇ ಆಗಿದೆ; 'ಜನರು ತನ್ನನ್ನು ಸಂಘಪರಿವಾರದೊಂದಿಗೆ ತುಲನೆ ಮಾಡದಿರಲಿ'' ಎಂಬುದು.

ಭ್ರಷ್ಟಾಚಾರದ ವಿರುದ್ಧದ ಆಂದೋಲನವನ್ನು ದಿಕ್ಕುತಪ್ಪಿಸಿದವರು ತಮ್ಮ ನಿಜಬಣ್ಣ ಬಯಲಾದ ನಂತರ ನಾಪತ್ತೆಯಾಗಿದ್ದಾರೆ. ಅವರು ಯಾವುದೇ ಸಮಯದಲ್ಲಿ ಜನಪರ ಆಂದೋಲನದಲ್ಲಿ ಬೇರೆ ಬೇರೆ ವೇಷದೊಂದಿಗೆ ಪ್ರವೇಶಿಸಬಹುದು. ಈ ಕುರಿತು ಸದಾ ಜಾಗೃತರಾಗಿರುವುದು ಒಳ್ಳೆಯದು.

ಅಣ್ಣಾ ಹಝಾರೆಯನ್ನು ಸಂಘಪರಿವಾರದೊಂದಿಗೆ ತುಲನೆ ಮಾಡಿ ತೇಜೋವಧೆ ಮಾಡುವ ಸಂದರ್ಭ ಮತ್ತೊಮ್ಮೆ ಎದುರಾಗದಿರಲಿ ಎಂದು ಹಾರೈಸೋಣ. ಈ ದೇಶವು ಭ್ರಷ್ಟಾಚಾರ ಮುಕ್ತಗೊಳ್ಳಲಿ, ಭ್ರಷ್ಟಾ ಆಡಳಿತ ವ್ಯವಸ್ಥೆಯು ಮುಕ್ತಾಯಗೊಳ್ಳಲಿ ಎಂದು ಆಶಿಸೋಣ.

SUHANA TRAVELS

SHIFTED TO NEW LOCATION
FIND YOUR ALL TRAVEL REQUIREMENTS UNDER ONE ROOF

OUR SERVICES:

•DOMESTIC AND INTERNATIONAL AIR-TICKETING •VISA STAMPING
•PASSPORT •EMIGRATION •RECRUITMENT •CERTIFICATE ATTESTATOIN

CONTACT ANY ISTHIQDHAM OFFICE IN ALL OVER SAUDI ARABIA

OUR FREE SERVICES:

SAUDI AIR-TICKET RE-CONFIRMATION
RE-ENTRY VISA DATE CHECKING

CONTACT

HEAD OFFICE:
Shop no.25 printing house
2nd floor, behind handloom house
28 D, Police Court Lane,
Fort, Mumbai - 400 001
E-mail: suhanatravel@mail.com
Tel : 0091 22 22692680
Telefax: 0091 22 22692690
Mobile : 091 9820945999

MANGALORE OFFICE
No: 5, Ground Floor
Shivali Arcade, Falnir Tower
opp: B.P Petrole Pump, Falnir
Mangalore - 575002
Tel: 0091 824 2442020. (4lines)
Telefax: 00918244277690
Mobile: 0091 9448253825
Email:suhanamglr@yahoo.co.in

FOR OUR WAKALA



# ‘ಆಣೆ ಪ್ರಮಾಣ’ದ ರಾಜಕಾರಣ

●ಇರ್ಶಾದ್ ಬೆಂಗಳೂರು

‘ಆಣೆ ಪ್ರಮಾಣ’ ಎಂಬ ಪದ ಕೆಲವು ದಿನಗಳಿಂದ ರಾಜ್ಯದಲ್ಲಿ ಒಂದು ಹೊಸ ಸಂಚಲನವನ್ನೇ ಸೃಷ್ಟಿಸಿದೆ. ಜೊತೆಗೆ ಜಿಲ್ಲೆಯ ಧಾರ್ಮಿಕ ಕ್ಷೇತ್ರವೊಂದಕ್ಕೆ ಎಲ್ಲಿಲ್ಲದ ಪ್ರಚಾರವನ್ನೂ ಅದು ತಂದು ಕೊಟ್ಟಿದೆ. ರಾಜಕೀಯ ಘಟಾನುಘಟಿ ನಾಯಕರಿಬ್ಬರ ನಡುವಿನ ಜಂಗಿ ಕುಸ್ತಿ, ಆರೋಪ ಪ್ರತ್ಯಾರೋಪಗಳು ಧರ್ಮಸ್ಥಳದ ಮಂಜುನಾಥನ ಸನ್ನಿಧಿಗೆ ತಲುಪಿವೆ. ಒಂದು ಕಡೆ ಮನಸ್ಸಲ್ಲಿ ಏನನ್ನೋ ಇಟ್ಟುಕೊಂಡು ಇನ್ನೇನನ್ನೋ ಪ್ರಮಾಣ ಮಾಡಲು ಮುಂದಾಗುತ್ತಿರುವ ಈ ಇಬ್ಬರು ನಾಯಕರುಗಳಲ್ಲಿ ಒಂದು ರೀತಿಯ ತಳಮಳವಾದರೆ, ಇದನ್ನೆಲ್ಲವನ್ನೂ ನಿರ್ಲಕ್ಷ್ಯದಿಂದ ನೋಡುತ್ತಿರುವ ಜನಸಾಮಾನ್ಯರಿಗೆ ನಿತ್ಯ ಪುಕ್ಕಟೆ ಮನೋರಂಜನೆ.

ಬಿಜೆಪಿ ಸರ್ಕಾರ ಅಧಿಕಾರ ವಹಿಸಿದಂದಿನಿಂದ ಒಂದಲ್ಲಾ ಒಂದು ರೀತಿಯ ಹಗರಣ, ಅವ್ಯವಹಾರ, ಪ್ರಕರಣ ಮತ್ತು ಆ ಕುರಿತ ಎಲ್ಲ ಚರ್ಚೆಗಳನ್ನು ತಡೆಯುವುದಕ್ಕಾಗಿ ಸೃಷ್ಟಿಯಾಗುವ ಗಲಭೆಗಳು, ವದಂತಿಗಳು ವ್ಯವಸ್ಥಿತವಾಗಿ ನಡೆಯುತ್ತಲೇ ಇವೆ. ಯಾವ ಕ್ಷಣದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ರೈತರ ಹೆಸರಿನಲ್ಲಿ ಅಧಿಕಾರ ಸ್ವೀಕರಿಸಿದರೋ, 10 ದಿನಗಳೊಳಗಾಗಿ ಹಾವೇರಿಯಲ್ಲಿ ಗೋಲಿಬಾರ್ ಮೂಲಕ ರೈತರನ್ನು ಕೊಲ್ಲಿಸಿಯೇ ಬಿಟ್ಟರು. ತದನಂತರದ ಅವರ ಹಾಗೂ ಅವರ ಮಂತ್ರಿ ಮಂಡಲದ ಮೇಲೆ ಬರುತ್ತಿರುವ ಭ್ರಷ್ಟಾಚಾರದ ಆರೋಪಗಳು, 11 ಕಂಪೆನಿಗಳನ್ನು ಸ್ಥಾಪಿಸಿ 642 ಕೋಟಿ ಆಸ್ತಿಯ ಸರದಾರರಾಗಿದ್ದು, ರಾಜ್ಯದ ಬೊಕ್ಕಸಕ್ಕೆ 339.54 ಕೋಟಿ ತೆರಿಗೆ ವಂಚನೆ ಮಾಡಿದ್ದಾರೆ ಎಂಬ ಆರೋಪ, ಜೊತೆಗೆ ರಾಜ್ಯದ ಅಭಿವೃದ್ಧಿಯ ಹೆಸರಲ್ಲಿ ತನ್ನ ಕುಟುಂಬದ ಅಭಿವೃದ್ಧಿಗೆ ಪಣ ತೊಟ್ಟಿರುವ ಆರೋಪ, ಸ್ವಜನ ಪಕ್ಷಪಾತ.. ಹೀಗೆ ದಿನ ಬೆಳಗಾದರೆ

*ನಾನು ಯಾವತ್ತೂ ಎಚ್.ಡಿ. ಕುಮಾರಸ್ವಾಮಿಯನ್ನು ಸಂಧಾನಕ್ಕೆ ಆಹ್ವಾನಿಸಿಲ್ಲ ಎಂದು ಸಮರ್ಥಿಸಿಕೊಂಡರು. ಇನ್ನು ಇದನ್ನು ನಂಬುವ ಸ್ಥಿತಿಯಲ್ಲಿ ರಾಜ್ಯದ ಜನರಿರಲಿಲ್ಲ. ರಾಜ್ಯದ ಜನರು ಬಿಡಿ ಬಿಜೆಪಿಯಲ್ಲಿರುವ ಕೆಲವು ಮುಖಂಡರೂ ಕೂಡಾ ನಮ್ಮ ನಾಯಕರು ತಪ್ಪು ಮಾಡಿರುವ ಸಾಧ್ಯತೆ ಇದೆ ಎಂಬಂತೆ ಮಾತನಾಡಿಕೊಳ್ಳುತ್ತಿದ್ದರು. ಇನ್ನು ತನ್ನ ದೇಹಕ್ಕೆ ಆಯುರ್ವೇದಿಕ್ ಟ್ರೀಟ್‌ಮೆಂಟ್ ಪಡೆಯಲು ಕೇರಳದ ಕೋಟೆಕ್ಕಾರ್‌ಗೆ ಹೋಗಿದ್ದ ಸಿಎಂ, ತನ್ನ ಮೇಲೆ ಬಂದ ಈ ಗಂಭೀರ ಆರೋಪಕ್ಕೆ ಏನಾದರೂ ಟ್ರೀಟ್‌ಮೆಂಟ್ ಮಾಡಿಸಿಕೊಳ್ಳಬೇಕು ಎಂದು ಚಿಂತಿಸುತ್ತಿರುವಾಗ ಥಟ್ಟನೆ ಹೊಳೆದದ್ದು ಧರ್ಮಸ್ಥಳದ ಮಂಜನಾಥ!*

ಮುಖ್ಯಮಂತ್ರಿಯ ಒಂದೊಂದೇ ವಿವಾದ ಹಗರಣಗಳ ಸುದ್ದಿಗಳನ್ನು ಪತ್ರಿಕೆಗಳಲ್ಲಿ ಓದಿ, ಟಿವಿ ಪರದೆಯ ಮೇಲೆ ನೋಡಿ ಜನತೆಗೆ ಬೋರೆನಿಸತೊಡಗಿದೆ. ತನ್ನ ಮೇಲೆ ವಿರೋಧ ಪಕ್ಷದವರು ಆರೋಪ ಮಾಡಿದಾಗಲೆಲ್ಲಾ ಯಡಿಯೂರಪ್ಪ ಇದಕ್ಕೆ ದೇವರು, ದೈವ ನೋಡಿಕೊಳ್ಳಲಿ ಎಂದು ಹೇಳಿ ಜಾರಿಕೊಳ್ಳುತ್ತಿದ್ದುದೇ ಹೆಚ್ಚು. ಜವಾಬ್ದಾರಿಯುತ ಸ್ಥಾನದಲ್ಲಿರುವ ರಾಜ್ಯದ ಮುಖ್ಯಮಂತ್ರಿ ತನ್ನ ಮೇಲಿನ ಆರೋಪ ಬಂದಾಗ ಅದನ್ನು ಪಾರದರ್ಶಕವಾದ ನ್ಯಾಯಾಂಗ ತನಿಖೆಗೆ ಯಾವತ್ತೂ ಆಗ್ರಹಿಸಿದ್ದಿಲ್ಲ.

ಇದೀಗ ರಾಜ್ಯದಲ್ಲಿ ನಡೆಯುತ್ತಿರುವ ವಿದ್ಯಮಾನ ಸ್ವಲ್ಪ


ಕೃಪೆ:
ಡೆಕ್ಕನ್ ಹೆರಾಲ್ಡ್

ಡಿಫರೆಂಟ್ ಆಗಿದೆ. ಸಾಂವಿಧಾನಿಕ ವ್ಯವಸ್ಥೆಗೂ ಭಿನ್ನವಾದ ನಡೆ ಇದು. ಸಂವಿಧಾನದ ನಂಬಿಕೆಗೆ ವಿರುದ್ಧವಾದ ಕ್ರಮಕ್ಕೆ ಮುಖ್ಯಮಂತ್ರಿ ಮುನ್ನುಡಿ ಬರೆಯಲು ಹೊರಟಿದ್ದಾರೆ. ತನ್ನ ಘನತೆ, ಗೌರವ, ಸ್ಥಾನಮಾನ ಇದಾವುದರ ಬಗ್ಗೆ ತಲೆಕೆಡಿಸಿಕೊಳ್ಳದ ಮುಖ್ಯಮಂತ್ರಿ ಯಡಿಯೂರಪ್ಪ ಕ್ಷಣಕ್ಕೊಮ್ಮೆ ಧರ್ಮಸ್ಥಳದ ಮಂಜುನಾಥ, ತಿರುಪತಿ ತಿಮ್ಮಪ್ಪ ನೀನೇ ಕಾಪಾಡಪ್ಪಾ ಅಂತಾ ಊರು ಕೇರಿಯ ಒಂದು ದೇವಸ್ಥಾನವನ್ನೂ ಬಿಡದಂತೆ ಸುತ್ತಾಡಿ ಮಠಮಂದಿರ ಆಶ್ರಮಗಳಿಗೆ ಸರಕಾರದ ಹಣವನ್ನು ಮೊಗೆಮೊಗೆದು ನೀಡುತ್ತಿದ್ದಾರೆ. ತಮ್ಮ ಮೇಲೆ ಆರೋಪ ಬಂದಾಗಲೆಲ್ಲಾ ದೇವರು, ದೈವ ಅಂತ ಅದರ ಹಿಂದೇನೇ ಸುತ್ತಾಡುತ್ತಿರುವ ಮುಖ್ಯಮಂತ್ರಿಯ ಬೆಂಗಾವಲಾಗಿ ಕೆಲವು ಮಂದಿ ಮಠಾಧೀಶರು ನಿಂತಿರುವುದು ಅನ್ನ ಹಾಕಿದ ಧಣಿಯ ಋಣ ತೀರಿಸುವುದಕ್ಕಾಗಿ ಎಂಬುದು ಸತ್ಯ ಸಂಗತಿ. ಇದೀಗ ತನ್ನ ಮೇಲೆ ಬಂದ ಹೊಸ ಆರೋಪದ ವಿರುದ್ಧ ಪುನಃ ದೇವರ ಮೊರೆ ಹೋಗಿದ್ದಾರೆ.

ಇತ್ತೀಚೆಗೆ ಮಾಜಿ ಮುಖ್ಯಮಂತ್ರಿ ಎಚ್.ಡಿ ಕುಮಾರಸ್ವಾಮಿ ಸಿಡಿಸಿದ ಬಾಂಬ್ ಮುಖ್ಯಮಂತ್ರಿ ಯಡಿಯೂರಪ್ಪನವರ ನಿದ್ದೆ ಕೆಡಿಸಿದೆ. ಕೇರಳದ ಕೊಟ್ಟಕಾರ್‌ನಲ್ಲಿ ಆಯುರ್ವೇದ ಚಿಕಿತ್ಸೆಗೆಂದು ಕೆಲವು ದಿನಗಳ ಹಿಂದೆ ಮುಖ್ಯಮಂತ್ರಿ ಯಡಿಯೂರಪ್ಪ ತೆರಳಿದ್ದರು. ಈ ಸಂದರ್ಭದಲ್ಲಿ ಯಡಿಯೂರಪ್ಪ ನನ್ನನ್ನು ರಹಸ್ಯವಾಗಿ ಸಂಧಾನಕ್ಕೆ ಬರುವಂತೆ ಆಹ್ವಾನ ನೀಡಿದ್ದಾರೆ ಎಂದು ಮಾಜಿಪ್ರಧಾನಿ ದೇವೇಗೌಡರ ಪುತ್ರ ಎಚ್‌ಡಿಕೆ ಬಾಂಬ್ ಸಿಡಿಸಿದ್ದರು. ಇದು ರಾಜಕೀಯ ವಲಯದಲ್ಲಿ ಭಾರೀ ಕೋಲಾಹಲವನ್ನೇ ಉಂಟುಮಾಡಿತ್ತು. ವಿಶೇಷವೆಂದರೆ ಬಿಜೆಪಿ ವಲಯದ ಹೆಚ್ಚಿನ ಮಂದಿ ಇದನ್ನು ನಿರಾಕರಿಸುವಂತಹ ಮನೋಸ್ಥಿತಿಯಲ್ಲಿ ಇರಲಿಲ್ಲ. ಆದರೆ ಮುಖ್ಯಮಂತ್ರಿ ಯಡಿಯೂರಪ್ಪ ಮಾತ್ರ ಇದನ್ನು ಖಡಾಖಂಡಿತವಾಗಿ ನಿರಾಕರಿಸುತ್ತಲೇ ಬಂದಿದ್ದಾರೆ. ನಾನು ಯಾವತ್ತೂ ಎಚ್.ಡಿ. ಕುಮಾರಸ್ವಾಮಿಯನ್ನು ಸಂಧಾನಕ್ಕೆ ಆಹ್ವಾನಿಸಿಲ್ಲ ಎಂದು ಸಮರ್ಥಿಸಿಕೊಂಡರು. ಇನ್ನು ಇದನ್ನು ನಂಬುವ ಸ್ಥಿತಿಯಲ್ಲಿ ರಾಜ್ಯದ ಜನರಿರಲಿಲ್ಲ. ರಾಜ್ಯದ ಜನರು ಬಿಡಿ ಬಿಜೆಪಿಯಲ್ಲಿರುವ ಕೆಲವು ಮುಖಂಡರೂ ಕೂಡಾ ನಮ್ಮ ನಾಯಕರು ತಪ್ಪು ಮಾಡಿರುವ ಸಾಧ್ಯತೆ ಇದೆ ಎಂಬಂತೆ ಮಾತನಾಡಿಕೊಳ್ಳುತ್ತಿದ್ದರು. ಇನ್ನು ತನ್ನ ದೇಹಕ್ಕೆ ಆಯುರ್ವೇದಿಕ್ ಟ್ರೀಟ್‌ಮೆಂಟ್ ಪಡೆಯಲು ಕೇರಳದ ಕೋಟೆಕ್ಕಾರ್‌ಗೆ ಹೋಗಿದ್ದ ಸಿಎಂ, ತನ್ನ ಮೇಲೆ ಬಂದ ಈ ಗಂಭೀರ ಆರೋಪಕ್ಕೆ ಏನಾದರೂ ಟ್ರೀಟ್‌ಮೆಂಟ್ ಮಾಡಿಸಿಕೊಳ್ಳಬೇಕು ಎಂದು ಚಿಂತಿಸುತ್ತಿರುವಾಗ ಥಟ್ಟನೆ ಹೊಳೆದದ್ದು ಧರ್ಮಸ್ಥಳದ ಮಂಜನಾಥ!

ಇನ್ನೇನ್ನು ವಿವಾದ ತಾರಕ್ಕೇರುವ ಸಂದರ್ಭದಲ್ಲಿ ಸಿಎಂ ಆಪ್ತೆ ಕುಮಾರಿ ಶೋಬಾ ಕರಂದ್ಲಾಜೆ ನೀಡಿದ ಪ್ಲ್ಯಾನ್ 'ಆಣೆ ಟ್ರೀಟ್ಮೆಂಟ್'. ''ನಾನು ಯಾವತ್ತೂ ಕುಮಾರಸ್ವಾಮಿಯನ್ನು ಸಂಧಾನಕ್ಕೆ ಆಹ್ವಾನಿಸಿಲ್ಲ. ಈ ಬಗ್ಗೆ ನಾನು ಧರ್ಮಸ್ಥಳಕ್ಕೆ ಬಂದು ಆಣೆ ಪ್ರಮಾಣ ಮಾಡಲು ಸಿದ್ದನಿದ್ದೇನೆ'' ಎಂದು ಪತ್ರಿಕೆಗಳಲ್ಲಿ ಜಾಹಿರಾತು ನೀಡುವುದರ ಮೂಲಕ ಯಡಿಯೂರಪ್ಪ ಪಂಥಾಹ್ವಾನ ನೀಡಿಯೇ ಬಿಟ್ಟರು. ಸಿಎಂ ಪಂಥಾಹ್ವಾನವನ್ನು ಗಮನಿಸಿದ ಮಾಜಿ ಸಿಎಂ, ಇದಕ್ಕೆ ತಾನೂ ರೆಡಿ ಎಂದು ಹೇಳಿಯೇ ಬಿಟ್ಟರು. ಅಂತೂ ಈ ಇಬ್ಬರೂ ನಾಯಕರ ಜಂಗಿ ಕುಸ್ತಿಗೆ ಧರ್ಮಸ್ಥಳದ ಮಂಜುನಾಥನ ಸನ್ನಿಧಿಯಲ್ಲಿ ವೇದಿಕೆ ಸಿದ್ದವಾಯಿತು.

ಆದರೆ ಆಣೆ ಪ್ರಮಾಣ ರಾಜಕೀಯವನ್ನು ಕೈಬಿಡಬೇಕೆಂದು ಮಠಾಧೀಶರುಗಳು ಇಬ್ಬರ ಮನವೊಲಿಸಲು ಆರಂಭಿಸಿದರು. ರಾಜ್ಯದ ಪ್ರತಿನಿಧಿಗಳು ಎಂಬಂತೆ ಅಥವಾ ಆಡಳಿತ ವ್ಯವಸ್ಥೆಯ ಪ್ರಮುಖ ಆಧಾರಸ್ತಂಭ ಎಂಬ ರೀತಿಯಲ್ಲಿ ಮಠಾಧೀಶರುಗಳು ಈ ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದಂದಿನಿಂದ ಕಾರ್ಯನಿರ್ವಹಿಸುತ್ತಾ ಬಂದಿದ್ದಾರೆ. ಜೂನ್ 27 ಹತ್ತಿರಬರುತ್ತಿದ್ದಂತೆಯೇ ಮುಖ್ಯಮಂತ್ರಿಯ ವರಸೆ ಬದಲಾಗಿದೆ. ಮಠಾಧೀಶರ ಕೋರಿಕೆಗೆ ಗೌರವ ನೀಡುವ ಸಲುವಾಗಿ ಆಣೆ ಪ್ರಮಾಣ ಮಾಡುವ ನಿರ್ಧಾರದಿಂದ ಹಿಂದೆ ಸರಿದಿರುವುದಾಗಿ ಹೇಳಿಕೆ ನೀಡುವ ಮೂಲಕ ಮತ್ತೊಮ್ಮೆ ಯಡಿಯೂರಪ್ಪ ಸಂವಿಧಾನಕ್ಕೆ ಅಪಚಾರ ಎಸಗಿದ್ದಾರೆ. ಆಣೆ ಪ್ರಮಾಣ ಎಂಬುದು ಸಂವಿಧಾನ ಬಾಹಿರ ಎಂಬ ವಿಚಾರ ಮುಖ್ಯಮಂತ್ರಿಗೆ ಇದುವರೆಗೆ ಅನಿಸಿದ್ದೇ ಇಲ್ಲ. ಕೊನೆಗೂ ಮುಖ್ಯಮಂತ್ರಿ ಯಡಿಯೂರಪ್ಪ ತನ್ನ ಮತಾಂಧ ರಾಜಕೀಯ ನಿರ್ಧಾರದಿಂದ ಹಿಂದೆ ಸರಿದಿರುವುದು ಸಂವಿಧಾನಕ್ಕೆ ತಲೆಬಾಗಿ ಅಲ್ಲ, ಅವರು ತಲೆಬಾಗುವುದು, ತಲೆದೂಗುವುದು ಮಠ ಮತ್ತು ಮಠಾಧೀಶರಿಗೆ ಮಾತ್ರ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.



ಯಡಿಯೂರಪ್ಪ ಮತ್ತು ಕುಮಾರಸ್ವಾಮಿ 'ಆಣೆ ರಾಜಕೀಯ'ಕ್ಕೆ ಆಯ್ಕೆ ಮಾಡಿರುವ ಧರ್ಮಸ್ಥಳದ ಧಾರ್ಮಿಕ ಕ್ಷೇತ್ರ.

''ಮಾಜಿ ಸಿಎಂ ಕುಮಾರಸ್ವಾಮಿಯೇ ಆಣೆ ಪ್ರಮಾಣಕ್ಕೆ ಬರಲು ಸಿದ್ಧರಿಲ್ಲ, ಧರ್ಮಸ್ಥಳಕ್ಕೆ ಬರುವ ಯೋಗ್ಯತೆಯೂ ಅವರಿಗಿಲ್ಲ'' ಎಂದು ಟೀಕಿಸುತ್ತಿದ್ದ ಬಿಜೆಪಿ ನಾಯಕರಿಗೆ ಇದೀಗ ಮುಖ್ಯಮಂತ್ರಿಯ ಕೊನೆಕ್ಷಣದ ತೀರ್ಮಾನವು ಇರಿಸುಮುರಿಸು ಉಂಟು ಮಾಡಿದೆ. ಇಲ್ಲಿ ಒಂದು ಅಂಶವು ಸ್ಪಷ್ಟವಾಗುತ್ತಿದೆ. ಅದೇನೆಂದರೆ, ಯಡಿಯೂರಪ್ಪನವರಿಗೆ ದೇವರು, ದೆವ್ವ, ದೈವಿಕ ಶಿಕ್ಷೆಯಲ್ಲಿ ಅಪಾರ ನಂಬಿಕೆ ಇದೆ ಎಂಬುದು. ತಾನು ಇದುವರೆಗೆ ಜನರಿಗೆ ನೀಡುತ್ತಿದ್ದ ಪುಕ್ಕಟೆ ಭರವಸೆಯ ಶೈಲಿಯಲ್ಲಿಯೇ ಆಣೆ ಪ್ರಮಾಣದ ಜಾಹೀರಾತನ್ನೂ ನೀಡಿದ್ದರು. ಆದರೆ ಅದು ತನಗೇ ತಿರುಗ ಬಾಣವಾಗಲಿದೆ ಎಂದು ಯಡಿಯೂರಪ್ಪ ಅಂದುಕೊಂಡಿರಲಿಲ್ಲ ! ಒಂದು ವೇಳೆ ಸುಳ್ಳು ಆಣೆ ಪ್ರಮಾಣ ಮಾಡಿದರೆ ದೈವಿಕ ಶಿಕ್ಷೆ ಎದುರಾಗಬಹುದು ಎಂಬ ನಂಬಿಕೆ, ಭಯ ಯಡಿಯೂರಪ್ಪನವರನ್ನು ಆವರಿಸಿಕೊಂಡಿರುವುದಂತೂ ಸ್ಪಷ್ಟ. ಈ ಕಾರಣಕ್ಕಾಗಿ ಯಡಿಯೂರಪ್ಪನವರನ್ನು ನಾವು ಧಾರ್ಮಿಕ ನಂಬಿಕೆಯ ವ್ಯಕ್ತಿ ಎಂದು ನಿರ್ಧರಿಸಿಕೊಳ್ಳಬಹುದು. ಈ ಧರ್ಮಶ್ರದ್ಧೆ ಅವ್ಯವಹಾರ, ಹಗರಣ ನಡೆಸುವಾಗ ಇದ್ದಿದ್ದರೆ ಇಂದು ರಾಜ್ಯಕ್ಕೆ ಭ್ರಷ್ಟಾಚಾರದಲ್ಲಿ ನಂಬರ್ ವನ್ ಸ್ಥಾನ ಬರುತ್ತಿರಲಿಲ್ಲ.

ಆಣೆ ಪ್ರಮಾಣಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ದಿನಕ್ಕೊಂದು ಹೇಳಿಕೆ, ಪ್ರತಿ ಹೇಳಿಕೆ, ಧರ್ಮಸ್ಥಳದಲ್ಲಿ ನಡೆಯುತ್ತಿರುವ ಸಿದ್ಧತೆಗಳ ಸುದ್ದಿಗಳೇ ರಾರಾಜಿಸಿದವು. ಇದರ ಜೊತೆಗೆ ಧರ್ಮಸ್ಥಳದಲ್ಲಿ ರಾಜಕೀಯ ಚಟುವಟಿಕೆಯೂ ಜೋರಾಗತೊಡಗಿತು. ಇಂಧನ ಸಚಿವೆ ಶೋಬಾ ಕರಂದ್ಲಾಜೆ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ಕೆ.ಎಸ್. ಈಶ್ವರಪ್ಪ ಧರ್ಮಸ್ಥಳಕ್ಕೆ ದಿಢೀರ್ ಭೇಟಿ ನೀಡಿದರು. ಬಹುಶಃ ಮಂಜುನಾಥನಿಗೂ ಸಮ್‌ಥಿಂಗ್ ನೀಡಲು ಈಶ್ವರಪ್ಪ ಭೇಟಿ ನೀಡಿದ್ದಾರೆ ಎಂದು ಲೇವಡಿಯನ್ನೂ ಮಾಡಲಾಯಿತು. ಯಾಕೆಂದರೆ, ಬಿಜೆಪಿ ಸರಕಾರ ಇಂದು ಅಸ್ತಿತ್ವದಲ್ಲಿರುವುದು ಸಮ್‌ಥಿಂಗ್ ನೀಡುವ ಮೂಲಕ. ಕ್ಷೇತ್ರದ ಧರ್ಮಾಧ್ಯಕ್ಷ ಡಾ. ವೀರೇಂದ್ರ ಹೆಗ್ಗಡೆ ಜೊತೆ ಮಾತುಕತೆಯನ್ನೂ ನಡೆಸಿದರು. ಆದರೆ ಮಾಧ್ಯಮದ ಮುಂದೆ ''ಇದು ತನ್ನ ವೈಯಕ್ತಿಕ ಭೇಟಿಯಾಗಿದೆ, ಭೇಟಿಗೂ ಆಣೆ ಪ್ರಮಾಣಕ್ಕೂ ಯಾವುದೇ ಸಂಬಂಧ ಇಲ್ಲ'' ಎಂದು ತಮ್ಮದೇ ಆದ ರೀತಿಯಲ್ಲಿ ಸಮಜಾಯಿಷಿ ಕೊಟ್ಟರು. ಆದರೆ ಯಾವಾಗ ಮುಖ್ಯಮಂತ್ರಿ ಕೇರಳದಿಂದ ಕರ್ನಾಟಕಕ್ಕೆ ಬಂದಿಳಿದರೋ ಮಾಧ್ಯಮಗಳ ಮುಂದೆ ''ನಾನು ಕುಟುಂಬ ಸಮೇತವಾಗಿ 26 ರಂದು ರಾತ್ರಿ ಧರ್ಮಸ್ಥಳಕ್ಕೆ ಹೊರಡುತ್ತೇನೆ, ದೇವರ ಮುಂದೆ ಪ್ರಮಾಣ ಮಾಡುತ್ತೇನೆ'' ಎಂದು ಜೋರಾಗಿಯೇ ಘೋಷಿಸಿದರು. ಇತ್ತ ಕುಮಾರಸ್ವಾಮಿಯೂ



ನಾನೂ ಏಕಾಂಗಿಯಾಗಿಯೇ ಧರ್ಮಸ್ಥಳಕ್ಕೆ ತೆರಳಿ ಪ್ರಮಾಣ ಮಾಡಲು ಸಿದ್ಧನಿದ್ದೇನೆ ಎಂದು ಹೇಳಿಕೆಕೊಟ್ಟರು.

ಅಂತೂ ಹಾಲಿ ಸಿಎಂ, ಮಾಜಿ ಸಿಎಂ ನಿಜವಾಗಿಯೂ ಪ್ರಮಾಣವನ್ನು ಮಾಡುತ್ತಾರೆ ಎಂಬುದನ್ನು ನೋಡಲು ಒಂದು ಕಡೆ ಮಾಧ್ಯಮದವರೂ ಇನ್ನೊಂದು ಕಡೆ ಜನಸಾಮಾನ್ಯರು ಕಾತರದಿಂದ ಕಾಯುತ್ತಿರುವ ಹೊತ್ತಿಗೆ ಪ್ರಹಸನ ಒಂದು ಹೊಸ ತಿರುವು ಪಡೆದುಕೊಂಡಿದೆ. ಬಿಜೆಪಿ ಸರ್ಕಾರದ, ಮುಖ್ಯಮಂತ್ರಿ ಯಡಿಯೂರಪ್ಪನವರ ಹಾಗೂ ಸಂಘಪರಿವಾರದ ಹಿತ ಚಿಂತಕರಾಗಿರುವ ಪೇಜಾವರ ಸ್ವಾಮಿ, ಚಿತ್ರದುರ್ಗ ಮುರುಘಾ ಮಠದ ಡಾ.ಶಿವಮೂರ್ತಿ ಮುರುಘಾ ಶರಣರು ಹಾಗೂ ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಯವರು ಅದುವರೆಗೂ ಸುಮ್ಮನಿದ್ದರೂ ದಿನಗಣನೆ ಶುರುವಾಗುತ್ತಿದ್ದಂತೆಯೇ ಜೂನ್ 21 ರಂದು ತುಟಿ ಬಿಚ್ಚಿದರು. ರಾಜಕೀಯ ಸಂಘರ್ಷವನ್ನು ಮಠ, ದೇವಸ್ಥಾನಗಳಿಗೆ ಒಯ್ಯುವುದು ಸರಿಯಲ್ಲ ಅಂತ ಇಬ್ಬರಿಗೂ ತಿಳಿಹೇಳಿದರು. ನೀರಲ್ಲಿ ಮುಳುಗಿ ಹೋಗುವವನಿಗೆ ಸಣ್ಣ ಕಡ್ಡಿ ಸಿಕ್ಕರೂ ಅದನ್ನು ಹಿಡಿದು ಬದುಕುವ ಪ್ರಯತ್ನ ಮಾಡುತ್ತಾನೆ ಎಂಬ ಮಾತಿನಂತೆ, ಆಸ್ಥಾನ ಗುರುಗಳ ಮಾತಿಗೆ ಒಪ್ಪಿ ಮುಖ್ಯಮಂತ್ರಿ ಆಣೆ ಪ್ರಮಾಣದಿಂದ ಹಿಂಜರಿಯುವ ಯೋಚನೆ ಮಾಡಿದರು. ಇದುವರೆಗೂ ಬೇಕಾಬಿಟ್ಟಿ ಹೇಳಿಕೆ ನೀಡುತ್ತಿದ್ದ ಸಿಎಂಗೆ ಮಠಾಧೀಶರು ಕಿವಿ ಹಿಂಡಿದ್ದಂದಿನಿಂದ ತನ್ನ ಜವಾಬ್ದಾರಿ ಅರಿವಾಗಿದೆಯಂತೆ. ನನ್ನ ಕರ್ತವ್ಯ ಜವಾಬ್ದಾರಿ ಕುರಿತಂತೆ ಸ್ವಾಮೀಜಿಗಳು ಅರಿವು ಮೂಡಿಸಿದ್ದಾರೆ. ಸಂತೆಯಲ್ಲಿ ಇದ್ದ ಮೇಲೆ ಗದ್ದಲ ಇದ್ದೇ ಇದೆ. ಅದಕ್ಕೆಲ್ಲಾ ತಲೆಕೆಡಿಸಿಕೊಳ್ಳದೆ ಜವಾಬ್ದಾರಿಯಿಂದ ಕೆಲಸಮಾಡುತ್ತೇನೆ ಎಂದು 101ನೆ ಬಾರಿ ಒಂದೇ ತರಹದ ಹೇಳಿಕೆ ನೀಡುವ ಮೂಲಕ ದಾಖಲೆ ನಿರ್ಮಿಸಿದರು. ಕೆಲವು ದಿನಗಳ ಹಿಂದೆಯಷ್ಟೇ ಇನ್ನು ರಾಜ್ಯದ ಕಲ್ಯಾಣವೇ ನನ್ನ ಗುರಿ, ಅಭಿವೃದ್ಧಿಯತ್ತ ಮಾತ್ರ ಗಮನಹರಿಸುತ್ತೇನೆ ಎಂದು ಘೋಷಿಸಿದ್ದ ಯಡಿಯೂರಪ್ಪನವರಿಗೆ ಮತ್ತೆ ರಾಜ್ಯಕಲ್ಯಾಣ ನೆನಪಾಗಿದೆ. ಹಾಗೆ ನೆನಪಾದಾಗಲೆಲ್ಲ ಹಿಂದಿನ ಒಂದೊಂದೇ ಹಗರಣಗಳು ಬಯಲಾಗುತ್ತಿದ್ದು, ಮತ್ತೆ ಅದಕ್ಕೆ ಸಮರ್ಥನೆ ನೀಡುವುದರಲ್ಲೇ ಮುಖ್ಯಮಂತ್ರಿಯ ಕಲ್ಯಾಣದ ಸಮಯ ಕಳೆದುಹೋಗುತ್ತಿದೆ. ಇದು ರಾಜ್ಯಕ್ಕೆ ಒದಗಿರುವ ದುರ್ಗತಿ ಎನ್ನದೆ ಬೇರೆ ವಿಧಿಯೇ ಇಲ್ಲ.

*ಆಣೆ ಪ್ರಮಾಣ ವಿಚಾರದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ನಡೆ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಯಾವಾಗ ಸಿಎಂ ಧರ್ಮಸ್ಥಳಕ್ಕೆ ಆಣೆ ಮಾಡಲು ಮುಂದಾದರೂ ಆಗ ಅವರು ಬೇರೇನೋ ಅಂದುಕೊಂಡಿದ್ದರು. ಜನರನ್ನು ದಾರಿತಪ್ಪಿಸಲು ಹಾಗೂ ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಜನರನ್ನು ಹಾಗೂ ತನ್ನ ಸಹೋದ್ಯೋಗಿಗಳನ್ನು ನಂಬಿಸುವುದಕ್ಕಾಗಿ ಸಿಎಂ ಆಣೆ ನಿರ್ಧಾರಕ್ಕೆ ಬಂದಿದ್ದರು. ಆದರೆ ಯಾವಾಗ ಕುಮಾರಸ್ವಾಮಿ ಕೂಡಾ ಆಣೆಗೆ ತಯಾರಾದರೋ ಮತ್ತು ಅಳುಕಿಲ್ಲದೆ ತನ್ನ ಆರೋಪವನ್ನು ಮತ್ತಷ್ಟು ಗಟ್ಟಿಗೊಳಿಸಿದರೋ ಆ ದಿನದಿಂದ ಯಡಿಯೂರಪ್ಪ ಚಿಂತಾಕ್ರಾಂತರಾದರು. ಇನ್ನು ಆಣೆ ಪ್ರಮಾಣದಿಂದ ತಾನಾಗಿಯೇ ಹಿಂದೆ ಸರಿದರೆ ಜನರಿಗೆ ತನ್ನ ನಿಜಬಣ್ಣ ಸ್ಪಷ್ಟವಾಗಿ ಬಯಲಾಗುತ್ತದೆ ಎಂದುಕೊಂಡು ಮಠಾಧೀಶರ ಮತ್ತು ಸ್ವಾಮೀಜಿಗಳ ಮೂಲಕ ಮನವೊಲಿಕೆಯ ತಂತ್ರ ರೂಪಿಸಿದರು.*

ಆಣೆ ಪ್ರಮಾಣ ವಿಚಾರದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ನಡೆ ಸಂಶಯಕ್ಕೆ ಎಡೆಮಾಡಿಕೊಟ್ಟಿದೆ. ಯಾವಾಗ ಸಿಎಂ ಧರ್ಮಸ್ಥಳಕ್ಕೆ ಆಣೆ ಮಾಡಲು ಮುಂದಾದರೂ ಆಗ ಅವರು ಬೇರೇನೋ ಅಂದುಕೊಂಡಿದ್ದರು. ಜನರನ್ನು ದಾರಿತಪ್ಪಿಸಲು ಹಾಗೂ ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಜನರನ್ನು ಹಾಗೂ ತನ್ನ ಸಹೋದ್ಯೋಗಿಗಳನ್ನು ನಂಬಿಸುವುದಕ್ಕಾಗಿ ಸಿಎಂ ಆಣೆ ನಿರ್ಧಾರಕ್ಕೆ ಬಂದಿದ್ದರು. ಆದರೆ ಯಾವಾಗ ಕುಮಾರಸ್ವಾಮಿ ಕೂಡಾ ಆಣೆಗೆ ತಯಾರಾದರೋ ಮತ್ತು ಅಳುಕಿಲ್ಲದೆ ತನ್ನ ಆರೋಪವನ್ನು ಮತ್ತಷ್ಟು ಗಟ್ಟಿಗೊಳಿಸಿದರೋ ಆ ದಿನದಿಂದ ಯಡಿಯೂರಪ್ಪ ಚಿಂತಾಕ್ರಾಂತರಾದರು. ಇನ್ನು ಆಣೆ ಪ್ರಮಾಣದಿಂದ ತಾನಾಗಿಯೇ ಹಿಂದೆ ಸರಿದರೆ ಜನರ ಮುಂದೆ ತನ್ನ ನಿಜಬಣ್ಣ

40ನೇ ಪುಟಕ್ಕೆ

# ಮುದುಕಿ ಮತ್ತು ಕೋಳಿ



ಒಂದು ಊರಿನಲ್ಲಿ ಒಬ್ಬಳು ಮುದುಕಿ ಇದ್ದಳು. ಆಕೆಯ ಮನೆಯಲ್ಲಿ ಇಬ್ಬರು ಕೆಲಸದಾಳುಗಳಿದ್ದರು. ಇದರ ಜೊತೆಗೆ ಮುದುಕಿ ತನ್ನ ಮನೆಯಲ್ಲಿ ಒಂದು ಕೋಳಿಯನ್ನು ಕೂಡ ಸಾಕಿದ್ದಳು. ಮುಂಜಾನೆ ಕೋಳಿ ಕೂಗಿದೊಡನೆ ಎದ್ದು ಆ ಬಳಿಕ ತನ್ನ ಇಬ್ಬರು ಕೆಲಸದಾಳುಗಳನ್ನು ಎಬ್ಬಿಸಿ ಅವರನ್ನು ಕೆಲಸಕ್ಕೆ ಹಚ್ಚುತ್ತಿದ್ದಳು.

ಆದರೆ ಬೆಳಗ್ಗೆ ಬೇಗ ಏಳುವುದು ಆ ಕೆಲಸದಾಳುಗಳಿಗೆ ಇಷ್ಟವಿರಲಿಲ್ಲ. ಮುದುಕಿ ಬೆಳಗ್ಗೆ ಬೇಗ ಎಬ್ಬಿಸುವುದರಿಂದ ತಮ್ಮ ನಿದ್ರೆಗೆ ತೊಡಕಾಗುತ್ತಿದೆ. ಈ ಸಂಕಷ್ಟದಿಂದ ಹೇಗೆ ಪಾರಾಗುವುದು ಎಂದು ಆ ಕೆಲಸದಾಳುಗಳು ಸದಾ ಚಿಂತಿಸುತ್ತಲೇ ಇದ್ದರು.

ಒಂದು ದಿನ ಒಬ್ಬ ನೌಕರ ''ನಮ್ಮ ಈ ಸಮಸ್ಯೆಯನ್ನು ಹೋಗಲಾಡಿಸಲು ಮುದುಕಿಯ ಬಳಿಯಿರುವ ಆ ಕೋಳಿಯನ್ನೇ ಕೊಂದು ಹಾಕಿದರಾಯಿತು.

ಕೋಳಿಯನ್ನು ಕೊಂದ ಮೇಲೆ ಕೋಳಿಯ ಕೂಗು ಕೇಳಿಸುವುದು ಇಲ್ಲ. ಆ ಮುದುಕಿ ಬೇಗ ಏಳುವುದು ಕೂಡ ಇಲ್ಲ. ತಾವು ಇನ್ನಷ್ಟು ಹೊತ್ತು ನೆಮ್ಮದಿಯಿಂದ ನಿದ್ರಿಸಬಹುದು.'' ಎಂದು ಸಲಹೆ ನೀಡಿದ.

ಮತ್ತೊಬ್ಬ ನೌಕರ ತನ್ನ ಸ್ನೇಹಿತನ ಈ ಸಲಹೆಗೆ ಸಮ್ಮತಿ ಸೂಚಿಸಿದ. ಆ ಬಳಿಕ ಇಬ್ಬರು ಕೆಲಸದಾಳುಗಳು ಒಟ್ಟು ಸೇರಿ ಕೋಳಿಯನ್ನು ಕೊಂದು ಹಾಕಿದರು. ಕೋಳಿಯೇ ಇಲ್ಲವಾದ ಬಳಿಕ ಕೋಳಿ ಕೂಗುವ ಸದ್ದು ಕೂಡ ಇಲ್ಲದಾಯಿತು.

ಕೋಳಿ ಕೂಗುವು ಶಬ್ದ ಕೇಳದಿದ್ದಾಗ ಮುದುಕಿಗೆ ಬೆಳಗ್ಗೆ ಸಮಯವು ತಿಳಿಯುತ್ತಿರಲಿಲ್ಲ. ಇದರಿಂದಾಗಿ ಆ ಮುದುಕಿ ಕೋಳಿ ಕೂಗುವ ಹೊತ್ತಿಗಿಂತ ಮೊದಲೇ ಎದ್ದೇಳಲು ಪ್ರಾರಂಭಿಸಿದಳು. ಜೊತೆಗೆ ತನ್ನ ಮನೆಯ ಆಳುಗಳನ್ನು ಬೇಗನೆ ಎಬ್ಬಿಸುತ್ತಿದ್ದಳು.

ಕೋಳಿ ಇದ್ದಾಗ ಕೆಲಸದಾಳುಗಳಿಗೆ ಚಿಂತೆ ಇತ್ತು. ಆದರೆ ಕೋಳಿ ಇಲ್ಲವಾದ ಮೇಲೆ ಅವರ ಚಿಂತೆ ಇನ್ನಷ್ಟು ಹೆಚ್ಚಾಯಿತು. ಬೆಳಗ್ಗೆ ಸಮಯಕ್ಕಿಂತ ಮೊದಲೇ ಅವರು ಏಳುವುದು ಅನಿವಾರ್ಯವಾಯಿತು.

ಚಿಣ್ಣರೇ,

ಇದು ನಿಮ್ಮದೇ ಅಂಗಳ. ಈ ಅಂಗಳಕ್ಕೆ ನೀವು ಕಥೆ, ಕವನ, ರಸಪ್ರಶ್ನೆ ಮೊದಲಾದವುಗಳನ್ನು ಕಳುಹಿಸಬಹುದು.

ಆಯ್ಕೆಯಾದ ಬರಹಗಳನ್ನು ಪ್ರಕಟಿಸಲಾಗುವುದು. ಇಂದೇ ಪೆನ್ನು ಕೈಗೆತ್ತಿಕೊಳ್ಳಿ. ನಿಮ್ಮ ಪ್ರತಿಭೆಯನ್ನು ಇಲ್ಲಿ ಪ್ರದರ್ಶಿಸಿರಿ.

## ಕ್ವಿಝ್ ಟೈಮ್-10 ಇತಿಹಾಸ, ಸಾಹಿತ್ಯ, ಕಲೆ, ವಿಜ್ಞಾನ, ಕ್ರೀಡಾಲೋಕ

1.ಯಾವ ಕದನ ಭಾರತದಲ್ಲಿ ಮೊಘಲ್ ಸಾಮ್ರಾಜ್ಯದ ಸ್ಥಾಪನೆಗೆಡೆ ಮಾಡಿತು?
2.ಬಂಗಾಳದ ಪ್ರಥಮ ಗವರ್ನರ್ ಯಾರು?
3.'ಡಾರ್ಕ್‌ನೆಸ್ ಆಟ್ ನೂನ್' ಬರೆದ ಪಾಶ್ಚಾತ್ಯ ಬರಹಗಾರ ಯಾರು?
4.'ಪ್ಯಾರಡೈಸ್ ಲಾಸ್ಟ್' ಬರೆದ ಆಂಗ್ಲ ಕವಿ ಯಾರು?
5.ಭಾರತದಲ್ಲಿ ಎಲ್ಲಿ ವಿವೇಕಾನಂದ ಶಿಲೆ(ಬಂಡೆ) ಸ್ಥಾಪನೆಯಾಗಿದೆ?
6.ಮೊನಾಲಿಸಾ ಚಿತ್ರ ಬರೆದ ಲಿಯೊನಾರ್ಡೊ ಡಾ ವಿಂಚಿ ಯಾವ ದೇಶದವನು?
7.ಆಹಾರ ಶಕ್ತಿಯನ್ನು ಯಾವ ಮಾನದಲ್ಲಿ ಅಳೆಯುತ್ತಾರೆ?
8.ಈಜುಗಾರರು ನೀರಿನಡಿ ಬಹುಕಾಲ ಇರಲು ಯಾವ ಆಧುನಿಕ ಸಾಧನ ಉಪಯೋಗಿಸುವರು?
9.ರೋವರ್ಸ್ ಕಪ್ ಯಾವ ಆಟದ ಕುರಿತದ್ದಾಗಿದೆ?
10.ಭಾರತದಲ್ಲಿ ಪ್ರಥಮ ರಾಷ್ಟ್ರೀಯ ಶೂಟಿಂಗ್ ಚಾಂಪಿಯನ್‌ಶಿಪ್ ಎಲ್ಲಿ ಜರಗಿತು?

ಉತ್ತರಗಳು: ಪುಟ ಸಂಖ್ಯೆ - 53ರಲ್ಲಿ

### ದುರಾಸೆ

ಅದು ಬೇರೆಯವರ ಸೊತ್ತು
ಬಯಸದಿರು ನೀ ಎಂದೂ
ಆಶಿಸಿದಲ್ಲಿ ಅದನ್ನೇ ನೀ ಮತ್ತೂ
ತಪ್ಪಿದ್ದಲ್ಲ ನಿನಗೆ ಆಪತ್ತು

ಸುಹದಾ,
ಪಾಣೆಮಂಗಳೂರು

# ಟ್ರಕ್ ಚಾಲಕ

ಟ್ರಕ್ ಚಾಲಕನೊಬ್ಬ ಮೆಂಟಲ್ ಹಾಸ್ಪಿಟಲ್ ಬಳಿ ಇರುವ ಆಳವಾದ ಚರಂಡಿಯ ಬದಿಯಲ್ಲಿ ತನ್ನ ವಾಹನವನ್ನು ಪಾರ್ಕ್ ಮಾಡಿ ಎಂದಿನಂತೆ ಸರಕನ್ನು ಖಾಲಿ ಮಾಡುತ್ತಿದ್ದನು.

ಆತ ಮೆಂಟಲ್ ಹಾಸ್ಪಿಟಲ್‌ನಿಂದ ಹಿಂದಿರುಗುವ ಸಂದರ್ಭ ತನ್ನ ವಾಹನವನ್ನು ಪರಿಶೀಲಿಸಿದಾಗ ಅದರ ಚಕ್ರವೊಂದು ಸವೆದಿರುವುದನ್ನು ಪತ್ತೆಹಚ್ಚಿದನು. ಇದರಿಂದ ಆತ ವಾಹನಕ್ಕೆ ಜಾಕ್‌ವೊಂದರ ಸಹಾಯದಿಂದ ಸವೆದಿರುವ ಚಕ್ರವನ್ನು ಕಳಚಿ ವಾಹನದೊಳಗಿದ್ದ ಹೆಚ್ಚುವರಿ ಚಕ್ರವನ್ನು ಅದಕ್ಕೆ ಜೋಡಿಸಲು ಮುಂದಾದನು. ಚಕ್ರವನ್ನು ಜೋಡಿಸುವ ಸಂದರ್ಭ ಪ್ರಮಾದವಶಾತ್ ಅದರ ನಾಲ್ಕು ಬೋಲ್ಟ್‌ಗಳು ಕೂಡ ಆಳವಾದ ಚರಂಡಿಗೆ ಬಿದ್ದವು. ಚರಂಡಿಗೆ ಬಿದ್ದ ಬೋಲ್ಟ್‌ಗಳನ್ನು ಮೇಲೆತ್ತಲು ಆತ ತುಂಬಾ ಪ್ರಯತ್ನ ಪಟ್ಟನು. ಆದರೆ ಬೋಲ್ಟ್‌ಗಳನ್ನು ಮೇಲೆತ್ತಲಾಗದೇ ಆತ ಕಂಗಾಲಾದನು.



ಸ್ವಲ್ಪ ಸಮಯದ ಬಳಿಕ ಅದೇ ದಾರಿಯಾಗಿ ರೋಗಿಯೊಬ್ಬ ಸಾಗುತ್ತಿದನು. ಟ್ರಕ್ ಚಾಲಕನನ್ನು ಕಂಡ ರೋಗಿಯು, ''ನೀನು ತೊಂದರೆಗೊಳಗಾದವನಂತೆ ಕಾಣುತ್ತಿದ್ದೀಯಾ. ಏನಾಯಿತು?'' ಎಂದು ಕೇಳಿದನು. ''ಈತನೊಬ್ಬ ಮೆಂಟಲ್ ಜೋಕರ್, ಈತನಿಂದ ಏನಾಗಬಹುದು'' ಎಂದು ತನ್ನೊಳಗೆ ತಾನು ಅಂದುಕೊಂಡನು. ಆ ಬಳಿಕ ನಡೆದ ಘಟನೆಯನ್ನು ಆ ರೋಗಿಗೆ ವಿವರಿಸುತ್ತಾ, ಅಸಹಾಯಕತೆಯ ನೋಟವನ್ನು ಬೀರಿದನು.

ರೋಗಿಯು ಜೋರಾಗಿ ಒಮ್ಮೆ ನಗುತ್ತಾ, ''ಇಷ್ಟೊಂದು ಚಿಕ್ಕ ಸಮಸ್ಯೆಯನ್ನು ಕೂಡ ನಿನ್ನಿಂದ ಪರಿಹರಿಸಲು ಸಾಧ್ಯವಿಲ್ಲವೆಂದಾದರೆ ಜೀವನಪೂರ್ತಿ ನೀನು ಟ್ರಕ್ ಡ್ರೈವರ್ ಆಗಿರಲು ಮಾತ್ರ ಸಾಧ್ಯ'' ಎಂದು ವ್ಯಂಗ್ಯವಾಡಿದನು. ರೋಗಿಯ ಮಾತುಗಳನ್ನು ಕೇಳಿ ಟ್ರಕ್ ಚಾಲಕನಿಗೆ ಆಶ್ಚರ್ಯವಾಯಿತು.

ನೀನು ಈಗ ಏನು ಮಾಡಬಹುದೆಂದರೆ, ಬಾಕಿಯುಳಿದಿರುವ ಮೂರು ಚಕ್ರಗಳಿಂದ ಒಂದೊಂದು ಬೋಲ್ಟ್‌ಗಳನ್ನು ಕಳಚಿ ಈ ಚಕ್ರವನ್ನು ಜೋಡಿಸು. ಆ ಬಳಿಕ ಹತ್ತಿರವಿರುವ ಗ್ಯಾರೇಜಿಗೆ ಹೋಗಿ ಕಳೆದು ಹೋಗಿರುವ ಬೋಲ್ಟ್‌ಗಳನ್ನು ಜೋಡಿಸು. ಇದು ತುಂಬಾ ಸುಲಭದ ಕೆಲಸ'' ಎಂದು ರೋಗಿಯು ಟ್ರಕ್ ಚಾಲಕನಿಗೆ ಸಲಹೆ ನೀಡಿದನು.

ರೋಗಿಯ ಈ ಸಲಹೆಯಿಂದ ಪ್ರಭಾವಿತನಾದ ಟ್ರಕ್ ಚಾಲಕ ''ಇಷ್ಟೊಂದು ಜಾಣ ಮತ್ತು ಬುದ್ಧಿವಂತನಾಗಿರುವ ನೀನು ಈ ಮೆಂಟಲ್ ಹಾಸ್ಪಿಟಲ್ ಹೇಗೆ ಬಂದೆ'' ಎಂದು ಕೇಳಿದನು. ''ನೀನು ತಿಳಿದುಕೊಂಡಂತೆ ನಾನು ಹುಚ್ಚನಾಗಿರಬಹುದು. ಆದರೆ ನಾನು ಮೂರ್ಖನಲ್ಲ'' ಎಂದು ರೋಗಿ ಪ್ರತಿಕ್ರಿಯಿಸಿದನು.

ಈ ಟ್ರಕ್ ಚಾಲಕನಂತೆ ಕೆಲವು ಮಂದಿ ಎಲ್ಲರನ್ನೂ ಮೂರ್ಖರೆಂದು ಭಾವಿಸಿ ರುತ್ತಾರೆ. ಸ್ನೇಹಿತರೇ, ನೀವು ತುಂಬಾ ಬುದ್ಧಿವಂತರಾಗಿರಬಹುದು. ಆದರೆ ನೀವು ಮೂರ್ಖರೆಂದು ಭಾವಿಸುವ ಕೆಲವು ಮಂದಿ ನಿಮ್ಮ ವೃತ್ತಿ ಜೀವನದಲ್ಲಿ ಅಥವಾ ನಿಮ್ಮ ಆಂತರಿಕ ಸಮಸ್ಯೆಗಳಿಗೆ ಪರಿಹಾರ ಒದಗಿಸಿ ಕೊಡಬಲ್ಲವರಾಗಿರುತ್ತಾರೆ ಮತ್ತು ನಮ್ಮ ಬುದ್ಧಿವಂತಿಕೆಯನ್ನೇ ಪ್ರಶ್ನಿಸುವ ಸಾಮರ್ಥ್ಯವನ್ನು ಹೊಂದಿರುತ್ತಾರೆ ಎಂಬುದನ್ನು ಮರೆಯಬಾರದು.

ನೀತಿ: ನಿನಗೆ ಎಲ್ಲವೂ ತಿಳಿದಿದೆ ಎಂದು ಅಂದುಕೊಳ್ಳಬೇಡ. ಒಬ್ಬನನ್ನು ಕೇವಲ ಕಣ್ಣಿನಿಂದ ಗಮನಿಸಿ ಅಥವಾ ಅವರ ವೇಷಭೂಷಣವನ್ನು ನೋಡಿ ಅವನ ಶೈಕ್ಷಣಿಕ ಹಿನ್ನೆಲೆಯನ್ನು ಗಮನಿಸಿ ತೀರ್ಪು ಕೊಡಬೇಡ.

ಫರ್ಹಾನ್, ಮಡಿಕೇರಿ

# ಗಿನ್ನೆಸ್ ದಾಖಲೆಗೆ ಸೇರ್ಪಡೆಗೊಂಡ 110 ವರ್ಷ ಪೂರೈಸಿದ ಬಲ್ಬ್

ಬಲ್ಬ್‌ನ್ನು ಆವಿಷ್ಕಾರ ಮಾಡಿದ ಜಗತ್ತಿನ ವಿಖ್ಯಾತ ವಿಜ್ಞಾನ ಥಾಮಸ್ ಆಲ್ವಾ ಎಡಿಸಲ್ ತಾನು ಕಂಡು ಹಿಡಿದ ಬಲ್ಬ್‌ವೊಂದು ನೂರು ವರ್ಷಗಳ ಕಾಲ ಬಾಳಿಕೆ ಬರಬಹುದು. ಅದು ಗಿನ್ನೆಸ್ ದಾಖಲೆಯಲ್ಲಿ ಸೇರ್ಪಡೆಗೊಳ್ಳಬಹುದು ಎಂಬ ಕಲ್ಪನೆಯನ್ನು ಅಂದು ಮಾಡಿದ್ದಿರಬಹುದು.



ಕ್ಯಾಲಿಫೋರ್ನಿಯಾದ ಲಿವೆರ್‌ಮೋರ್ ಅಗ್ನಿಶಾಮಕ ಠಾಣೆಯಲ್ಲಿ ಬಳಕೆಯಲ್ಲಿರುವ 4 ವ್ಯಾಟ್‌ನ ಬಲ್ಬ್‌ವೊಂದನ್ನು ಜಗತ್ತಿನ ಅತಿ ಹಳೆಯ ಬಲ್ಬ್ ಎಂದು ಘೋಷಿಸಲಾಗಿದೆ. ಇಷ್ಟೊಂದು ಸಮಯದಿಂದ ಉರಿಯುತ್ತಿರುವ ಈ ಬಲ್ಬ್ ಇದೀಗ ಗಿನ್ನೆಸ್ ದಾಖಲೆಯ ಪುಸ್ತಕದಲ್ಲೂ ಸ್ಥಾನ ಪಡೆದಿದೆ.

1901ರಲ್ಲಿ ಕೃಷಿಕನೊಬ್ಬ ದಾನ ಮಾಡಿದ್ದ ಈ ಬಲ್ಬ್, 1903ರಲ್ಲಿ ಕೆಲವು ದಿನಗಳ ವರೆಗೆ, 1937ರಲ್ಲಿ ಒಂದು ವಾರ, 1976ರಲ್ಲಿ ಕೆಲವು ಸಮಯದ ವರೆಗೆ ನಿಷ್ಕ್ರಿಯವಾಗಿತ್ತು. ಈ ಅಪವಾದಗಳನ್ನು ಹೊರತುಪಡಿಸಿ ಈ ಬಲ್ಬ್ ಉಳಿದೆಲ್ಲಾ ಸಮಯಗಳಲ್ಲಿ ಉರಿಯುತ್ತಲೇ ಇತ್ತು.

ಟೈಮ್ ಪತ್ರಿಕೆಯೊಂದಕ್ಕೆ ಸಂದರ್ಶನ ನೀಡಿರುವ ನಗರದ ಲೈಟ್ ಬಲ್ಬ್ ಸಮಿತಿಯ ಅಧ್ಯಕ್ಷ ಲೆಯನ್ ಓವೆನ್ಸ್, ವಿಜ್ಞಾನ ಲೋಕವು ಈ ಬಲ್ಬ್ ಇಷ್ಟು ಸಮಯ ಉರಿಯುತ್ತಿರ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ.

ಈ ಬಲ್ಬ್ 60 ವಾಲ್ಟ್‌ನದ್ದಾಗಿದ್ದು, 4 ವಾಲ್ಟ್‌ನ ಬಲ್ಬ್‌ನಂತೆ ಬೆಳಕನ್ನು ನೀಡುತ್ತಿದೆ. ಇದು ಹೇಗೆ ಸಂಭವ ಎಂದು ಯಾರಿಗೂ ತಿಳಿದಿಲ್ಲ ಎಂದು ಅವರು ಹೇಳಿದ್ದಾರೆ.

ಬಲ್ಬ್ ಇಷ್ಟು ಸಮಯಗಳಿಂದ ಹೇಗೆ ಉರಿಯುತ್ತಿದೆ ಎಂಬುದು ಎಲ್ಲರನ್ನೂ ಆಶ್ಚರ್ಯಚಕಿತಗೊಳಿಸಿದೆ. ಓವೆನ್ಸ್‌ರ ಹೇಳಿಕೆಯ ಪ್ರಕಾರ, ದೇಶದ ಹಲವು ವಿಜ್ಞಾನಿಗಳು ಇದರ ರಹಸ್ಯವನ್ನು ತಿಳಿದುಕೊಳ್ಳಲು ಪ್ರಯತ್ನಿಸಿದ್ದಾರಾದರೂ ಇದನ್ನು ಇನ್ನೂ ಕೂಡ ಭೇದಿಸಲಾಗಿಲ್ಲ. ಈ ಬಲ್ಬ್ ಸಂಶೋಧಕರ ಆಕರ್ಷಣಾ ಕೇಂದ್ರವಾಗಿ ಮಾರ್ಪಟ್ಟಿದ್ದು, ಇದರ ವೀಕ್ಷಣೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ ಎಂದು ಹೇಳಿದ್ದಾರೆ.

ಗೋರಿಯೊಳಗಿರುವ ಥಾಮಸ್ ಎಡಿಸನ್ ಆಲ್ವಾ ಈ ಮಾತಿನಿಂದ ಹೆಮ್ಮೆ ಪಡುತ್ತಿರಬಹುದು ಅಥವಾ ದೃಷ್ಟಿಕೋನವನ್ನು ಬದಲಿಸುತ್ತಿರಬಹುದು ಎಂಬ ಮಾತನ್ನು ವಿಶ್ವಾಸಪೂರ್ವಕವಾಗಿ ಹೇಳಲಾಗುವುದಿಲ್ಲ ಎಂದು ಹೇಳಿರುವ ಅವರು, ಯಾವುದೇ ವ್ಯಕ್ತಿ ಬಾಗಿಲಿನಿಂದ ಹೊರಬರುವ ಸಂದರ್ಭ ಈ ಬಲ್ಬ್‌ನ ಸ್ವಿಚ್ ಆಫ್ ಮಾಡದಿರಲಿ ಎಂದು ಹಾರೈಸೋಣ ಎಂದಿದ್ದಾರೆ.

ಈ ಬಲ್ಬ್‌ನ್ನು ಅದರ ಮೂಲರೂಪದಿಂದ ಅಡಾಲ್ಫ್ ಚೈಲೆ ಎಂಬಾತ ತಯಾರಿಸಿದ್ದ. ಈ ನಗರಕ್ಕೆ ಉತ್ತಮವಾದ ಬಲ್ಬ್ ಯಾರು ನೀಡುವರು ಎಂಬ ವಿಷಯದಲ್ಲೂ ಎಡಿಸನ್ ಮತ್ತು ಚೈಲ್ ಮಧ್ಯೆ ಸ್ಪರ್ಧೆ ಏರ್ಪಟ್ಟಿತ್ತು ಎಂಬುದನ್ನು ವಿವರಿಸಿದ್ದಾರೆ.

ಅಂತೂ 110 ವರ್ಷಗಳನ್ನು ಪೂರೈಸಿದ ಈ ಬಲ್ಬ್ ವಿಜ್ಞಾನಲೋಕವನ್ನು ಆಶ್ಚರ್ಯಚಕಿತಗೊಳಿಸಿರುವುದಂತೂ ಸತ್ಯ.

# ಪರಿಹಾರದತ್ತ ಮುಖ ಮಾಡಬೇಕಾಗಿದೆ

● ರೇಶ್ಮಾ, ಬಂದರ್ ಮಂಗಳೂರು

‘‘ಹೆಣ್ಣು ಹೆಣ್ಣೆಂದೇಕೆ ಬೀಳುಗಳೆವರು, ಕಣ್ಣು ಕಾಣದ ಗಾವಿಲರು’’- ಎಂದು ಶತಮಾನದ ಹಿಂದೆಯೇ ಕನ್ನಡದ ಕವಿಯಿತ್ರಿ ಹೊನ್ನಮ್ಮ ಈ ಸಮಾಜವನ್ನು ಪ್ರಶ್ನಿಸಿದ್ದರು.

ಇಂದಿಗೂ ಈ ಪ್ರಶ್ನೆಗೆ ನಮ್ಮೀ ಸಮಾಜ ಸಮರ್ಪಕ ಉತ್ತರ ನೀಡಿಲ್ಲ. ಈ ಪ್ರಶ್ನೆ ಇಂದಿಗೂ ಪ್ರಸ್ತುತವೆನಿಸುತ್ತಿದೆ. ‘ಹೆಣ್ಣು ಸಮಾಜದ ಕಣ್ಣು’ ಎಂಬ ಮಾತನ್ನು ಈ ಸಮಾಜ, ಜನರು ಮರೆತಂತಿದೆ. ಮಹಿಳೆ ಸಬಲೀಕರಣಗೊಳ್ಳಬೇಕೆಂದು ಇಚ್ಛಿಸಿ, ಕಾರ್ಯಕ್ಷೇತ್ರಕ್ಕಿಳಿಯುವ ಪ್ರತಿಯೊಂದು ಕ್ಷೇತ್ರದಲ್ಲೂ ಹೆಣ್ಣಿನ ಶೋಷಣೆ ನಿರಂತರವಾಗಿ ವ್ಯವಸ್ಥಿತವಾಗಿ ನಡೆಯುತ್ತಲೇ ಇದೆ. ಹೆಣ್ಣಿಗೆ ಸಹನಶೀಲೆ, ಕ್ಷಮಾಶೀಲೆ ಎಂದೆಲ್ಲ ಬಿರುದು ಕೊಟ್ಟು ಶೋಷಣೆಯ ವಿರುದ್ಧ ದನಿಯೆತ್ತದಂತೆ, ಪ್ರತಿಕ್ರಿಯಿಸಿದಂತೆ ಬಾಯಿಮುಚ್ಚಿಸಲಾಗಿದೆ.




ಮಗಳಾಗಿ, ಪತ್ನಿಯಾಗಿ, ಮಮತೆಯ ತಾಯಿಯಾಗಿ ತನ್ನ ಸಂಸಾರದ ನೌಕೆಯನ್ನು ಸಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸುವ ಹೆಣ್ಣು, ಸಂಸಾರದ ಎಲ್ಲ ಸುಖಃದುಖಗಳಲ್ಲಿ ಸಮನಾಗಿ ಭಾಗಿಯಾಗುತ್ತಾಳೆ. ಪತಿಗೆ ಸ್ಫೂರ್ತಿಯ ಚಿಲುಮೆಯಾಗಿ, ಮಕ್ಕಳಿಗೆ ಮಮತೆಯ ತಾಯಿಯಾಗಿ, ತಂದೆತಾಯಿಯ ಮುದ್ದಿನ ಮಗಳಾಗಿ, ಸಮಾಜಕ್ಕೆ ಮಾದರಿಯಾಗಿ ಹೆಣ್ಣು ಬಾಳು ನಡೆಸುತ್ತಾಳೆ.

ಪ್ರತಿಯೊಬ್ಬ ಸಾಧಕನ ಹಿಂದೆ ಹೆಣ್ಣಿನ ಪಾತ್ರ ಇದ್ದೇ ಇರುತ್ತದೆ ಎಂಬ ಮಾತಿದೆ. ಅದು ಸುಳ್ಳಲ್ಲ. ನಮ್ಮ

ಕವಿಗಳು ಹೆಣ್ಣಿನ ಸೌಂದರ್ಯದ, ಆಕೆಯ ಸಾಹಸದ ಬಗ್ಗೆ ವಿಧವಿಧವಾಗಿ ವರ್ಣಿಸಿದ್ದಾರೆ. ಒಂದು ಕವನದ ಸ್ಫೂರ್ತಿ ಹೆಣ್ಣು, ಕಥೆಯ ಜೀವನಾಡಿ ಹೆಣ್ಣು, ಚಲನಚಿತ್ರದ ಕಥಾವಸ್ತು ಹೆಣ್ಣು , ಅಷ್ಟೇ ಅಲ್ಲ ದೇಶದಲ್ಲಿ ಹರಿಯುತ್ತಿರುವ ನದಿಗಳಿಗೂ ಹೆಣ್ಣಿನ ಹೆಸರುಗಳಿವೆ! ಹೀಗಿದ್ದೂ ಹೆಣ್ಣು ಮತ್ತೆ ಮತ್ತೆ ಶೋಷಣೆಗೊಳಪಡುತ್ತಿರುವುದು ಏಕೆ? ಕಾರಣವೇನು?

ಮೊನ್ನೆಯಷ್ಟೇ ಕೇರಳದಲ್ಲಿ ನಡೆದ ಘಟನೆಯೊಂದು ಭಾರೀ ಚರ್ಚೆಯ ವಸ್ತುವಾಗಿದೆ. ಓರ್ವ ಬಾಲಕಿಯ ಮೇಲೆ ನೂರಕ್ಕೂ ಅಧಿಕ ಮಂದಿ ಅತ್ಯಾಚಾರವೆಸಗಿದ್ದಾರೆ. ಕೇವಲ 16ರ ಹರೆಯದ ಆ ಬಾಲಕಿ ಸ್ವತಹ ತಂದೆಯಿಂದಲೇ ಅತ್ಯಾಚಾರಕ್ಕೊಳಗಾಗಿದ್ದಾಳೆ. ಹಾಗಾದರೆ ಈ ದೇಶದಲ್ಲಿ ಇತರ ಬಾಲಕಿಯರ, ಮಹಿಳೆಯರ ಪಾಡು ಏನಾಗಿರಬಹುದು. ಇತ್ತೀಚೆಗೆ ಹೊರಬಿದ್ದಿರುವ ಸಮೀಕ್ಷೆಯೊಂದರ ಪ್ರಕಾರ, ಮಹಿಳಾ ದೌರ್ಜನ್ಯದಲ್ಲಿ ಭಾರತವು ನಾಲ್ಕನೆ ಸ್ಥಾನದಲ್ಲಿದೆ ! ವಿಶ್ವದಲ್ಲಿ ಅತಿಹೆಚ್ಚು ಮಹಿಳಾ ದೌರ್ಜನ್ಯ ಪ್ರಕರಣ ದಾಖಲಾಗಿರುವುದು ಭಾರತದಲ್ಲಿ ಎಂಬುದು ದುರಂತ.

> ಪ್ರತಿಯೊಂದು ಹೆಣ್ಣು ಮಗುವಿಗೂ ಶಿಕ್ಷಣ ದೊರೆಯಬೇಕು. ಯಾರೂ ಶಿಕ್ಷಣ ವಂಚಿತರಾಗಬಾರದು. ತಮ್ಮ ಪರಿಸ್ಥಿತಿ, ಸಮಾಜದಲ್ಲಿ ತನ್ನ ಪಾತ್ರ, ಸಾಮರ್ಥ್ಯ, ಬದುಕುವ ದಾರಿ ಇವಿತ್ಯಾದಿ ಅಂಶಗಳುಳ್ಳ ಕನಿಷ್ಠ ಶಿಕ್ಷಣವನ್ನಾದರೂ ಹೆಣ್ಣು ಮಕ್ಕಳು ಗಳಿಸಿಕೊಂಡಿರಬೇಕು. ಅಂತಹ ಶಿಕ್ಷಣದೊಂದಿಗೆ ಹೋರಾಟದ ಮನೋಸ್ಥಿತಿಯು ಬೆಳೆದಿರಬೇಕು. ಪ್ರತಿಯೊಬ್ಬಳೂ ಸಾಮಾಜಿಕ ಕಾರ್ಯಕರ್ತೆಯಾಗಿ ರೂಪುಗೊಂಡರೆ ಮಾತ್ರ ತಮಗೆದುರಾಗುವ ಸಂಕಷ್ಟಗಳ ಪರಿಹಾರಕ್ಕೆ ಇತರರನ್ನು ಕಾದುಕುಳಿತಬೇಕಾಗಿಲ್ಲ.

ಹೆಣ್ಣಿಗೆ ವಿಶೇಷ ಸ್ಥಾನಮಾನ ಕಲ್ಪಿಸಲಾಗಿದೆ ಎಂದು ಸಂಸ್ಕೃತಿ, ಆಚಾರದ ಬಗ್ಗೆ ಹಲವರು ಹೇಳಿಕೊಳ್ಳುತ್ತಿದ್ದಾರೆ. ಆದರೆ ಇದೆಲ್ಲ ಸುಳ್ಳು ಎಂಬುದನ್ನು ಪ್ರತಿನಿತ್ಯ ಪ್ರಕಟವಾಗುತ್ತಿರುವ ವರದಿಗಳು ತಿಳಿಸುತ್ತಿವೆ. ವರದಕ್ಷಿಣೆ ಕಿರುಕುಳ ವರದಿಯಾಗದ ದಿನಗಳೇ ಇಲ್ಲ. ಅದೊಂದು ಪೆಡಂಭೂತವಾಗಿ ಹೆಣ್ಣು ಮಕ್ಕಳನ್ನು ಇಂದಿಗೂ ಕಾಡುತ್ತಿದೆ. ಅಮಾಯಕ ಹೆಣ್ಣು ಜೀವಗಳು ವರದಕ್ಷಿಣೆಗೆ ಬಲಿಯಾಗುತ್ತಿವೆ. ಭ್ರೂಣ ಹತ್ಯೆ, ಮರ್ಯಾದಾ ಹತ್ಯೆ ನಿತ್ಯದ ಸುದ್ದಿಗಳಾಗಿವೆ. ಹೆರಿಗೆ ಪೂರ್ವ ಭ್ರೂಣ ಲಿಂಗ ಪತ್ತೆ ಎಂಬುದು ಅಪರಾಧ ಕೃತ್ಯವಾಗಿದ್ದು, ಸರಕಾರಿ ಆಸ್ಪತ್ರೆಗಳಲ್ಲೂ ಇಂತಹ ಕೃತ್ಯಗಳು ಸದ್ದಿಲ್ಲದೆ ನಡೆಯುತ್ತಿಲ್ಲವೇ? ಭ್ರೂಣ ಹತ್ಯೆ ಮಾಡಿದ ಎಷ್ಟು ಮಂದಿಗೆ ಇದುವರೆಗೆ ಶಿಕ್ಷೆಯಾಗಿದೆ?

ಇಂತಹ ಅಪರಾಧಗಳಿಗೆ ಕೊನೆಯೆಂದು? ಇಂತಹ ಅನಿಷ್ಟಗಳು ನಮ್ಮ ಸಮಾಜದಿಂದ ಸಂಪೂರ್ಣವಾಗಿ ನಿರ್ಮೂಲನೆಗೊಳ್ಳುವುದು ಯಾವಾಗ? ಎಂಬ ಪ್ರಶ್ನೆಯು ಇಂದು ಬಹುತೇಕ ಹೆಣ್ಣು ಮಕ್ಕಳನ್ನು ಕಾಡುತ್ತಿದೆ. ಗಣ್ಯರೆನಿಸಿಕೊಂಡವರು ಸಭೆಯ ಮುಂದೆ ಬಿಗಿಯುವ ಭಾಷಣಗಳು ಖಂಡಿತವಾಗಿಯೂ ಇದಕ್ಕೆಲ್ಲ ಪರಿಹಾರವಲ್ಲ.

ಪ್ರತಿಯೊಂದು ಹೆಣ್ಣು ಮಗುವಿಗೂ ಶಿಕ್ಷಣ ದೊರೆಯಬೇಕು. ಯಾರೂ ಶಿಕ್ಷಣ ವಂಚಿತರಾಗಬಾರದು. ತಮ್ಮ ಪರಿಸ್ಥಿತಿ, ಸಮಾಜದಲ್ಲಿ ತನ್ನ ಪಾತ್ರ, ಸಾಮರ್ಥ್ಯ, ಬದುಕುವ ದಾರಿ ಇತ್ಯಾದಿ ಅಂಶಗಳುಳ್ಳ ಕನಿಷ್ಠ ಶಿಕ್ಷಣವನ್ನಾದರೂ ಹೆಣ್ಣು ಮಕ್ಕಳು ಗಳಿಸಿಕೊಂಡಿರಬೇಕು. ಅಂತಹ ಶಿಕ್ಷಣದೊಂದಿಗೆ ಹೋರಾಟದ ಮನೋಸ್ಥಿತಿಯು ಬೆಳೆದಿರಬೇಕು. ಪ್ರತಿಯೊಬ್ಬಳೂ ಸಾಮಾಜಿಕ ಕಾರ್ಯಕರ್ತೆಯಾಗಿ ರೂಪುಗೊಂಡರೆ ಮಾತ್ರ ತಮಗೆದುರಾಗುವ ಸಂಕಷ್ಟಗಳ ಪರಿಹಾರಕ್ಕೆ ಇತರರನ್ನು ಕಾದುಕುಳಿತಬೇಕಾಗಿಲ್ಲ.



'ತೊಟ್ಟಿಲು ತೂಗುವ ಕೈಗಳು

ದೇಶವನ್ನು ಆಳಲು ಸಮರ್ಥ' ಎಂಬ ಮಾತು ಈಗಾಗಲೇ ಸಾಬೀತಾಗಿದೆ. ಇಂದಿರಾಗಾಂಧಿ, ಕಿರಣ್ ಬೇಡಿ, ಮಾನವ ಹಕ್ಕುಗಳ ಹೋರಾಟಗಾರ್ತಿ ಮೇದಾ ಪಾಟ್ಕರ್, ಟೀಸ್ಟಾ ಸೆಟಲ್ವಾಡ್, ಅರುಂಧತಿ ರಾಯ್ ಮುಂತಾದವರು ಹೆಣ್ಣಲ್ಲವೇ?

ಕೇವಲ ಶ್ರೀಮಂತ ಕುಟುಂಬದ ಹೆಣ್ಣು ಮಕ್ಕಳು ಸಬಲೀಕರಣಗೊಂಡಿರುವುದನ್ನು, ಸುಭದ್ರರಾಗಿರುವುದನ್ನು ಮಾನದಂಡವಾಗಿಟ್ಟುಕೊಂಡು ಇಡೀ ಮಹಿಳಾ ಸಮಾಜವೇ ಸಬಲೀಕರಣಗೊಂಡಿದೆ ಎಂದು ಬಿಂಬಿಸುವುದು ಸರಿಯಲ್ಲ. ಇಂದು ಪ್ರಸಾರವಾಗುವ ಬಹುತೇಕ ಧಾರಾವಾಹಿಗಳು ಮಹಿಳೆಯರಿಗೆ ಸಂಬಂಧಿಸಿದ್ದೇ ಆಗಿದೆ. ಜನಪ್ರಿಯವಾಗಿರುವ ಬಹುತೇಕ ಸೀರಿಯಲ್‌ಗಳಲ್ಲಿ ನಾವು ಒಂದು ಅಂಶವನ್ನು ಗಮನಿಸಬಹುದಾಗಿದೆ, ಅದೇನೆಂದರೆ, ಆ ಸೀರಿಯಲ್‌ಗಳಲ್ಲಿ ಮಹಿಳೆಯೇ ಕಥಾ ನಾಯಕಿ, ಮಹಿಳೆಯೇ ಖಳ ನಾಯಕಿ. ಧಾರವಾಹಿಯ ಪ್ರಮುಖ ಪಾತ್ರಗಳೆಲ್ಲ ಮಹಿಳೆಯನ್ನೇ ಕೇಂದ್ರೀಕರಿಸಿಕೊಂಡಿರುತ್ತದೆ. ನೂರು, ಐನೂರು ಕಂತುಗಳನ್ನು ಪೂರೈಸುವುದಕ್ಕಾಗಿಯೇ ಧಾರವಾಹಿಯ ಕಥೆಯನ್ನು ಎಳೆದುಕೊಂಡು ಹೋಗಲಾಗುತ್ತದೆ. ಆದರೆ ಇದರಲ್ಲಿ ಮಹಿಳೆಯರು ಜಾಗೃತಗೊಳ್ಳಬಹುದಾದ ಯಾವುದೇ ಅಂಶಗಳು ಅಡಕಗೊಂಡಿರುವುದಿಲ್ಲ. ಮಹಿಳೆಗೆ ಪ್ರೇರಣೆ ನೀಡುವ ಅಂಶಗಳೂ ಇರುವುದಿಲ್ಲ. ಇವೆಲ್ಲವೂ ಭಾವನಾತ್ಮಕವಾಗಿ ಮನೋರಂಜನೆ ನೀಡುವ ಧಾರವಾಹಿಗಳು. ಇಂತಹ ಧಾರವಾಹಿಗಳ ಬದಲಾಗಿ ಮಹಿಳಾ ಸಾಧಕರ ಬಗ್ಗೆ ಇರುವ ಪುಸ್ತಕಗಳನ್ನು, ಅವರ ಹೋರಾಟದ ಕಥೆಗಳನ್ನು ಓದಿದರೆ ಒಳ್ಳೆಯದು.

ಒಟ್ಟನಲ್ಲಿ ಮಹಿಳೆಯರಲ್ಲಿ ಜಾಗೃತಿ ಮೂಡಬೇಕಾಗಿದೆ. ಈ ದೇಶದಲ್ಲಿ ಮಹಿಳಾ ಮಸೂದೆಯನ್ನು ಜಾರಿಗೊಳಿಸಿರುವ ಹೊರತಾಗಿಯೂ ದೌರ್ಜನ್ಯಗಳು ಕಡಿಮೆಯಾಗಿಲ್ಲ ಎಂಬ ವಾಸ್ತವಾಂಶವನ್ನು ಮಹಿಳೆಯರು ಅರ್ಥ ಮಾಡಿಕೊಳ್ಳ ಬೇಕಾಗಿದೆ. ವೈಯಕ್ತಿಕ ನೆಲೆಯಲ್ಲಿ ಪ್ರತಿಯೊಬ್ಬರೂ ಪರಿಹಾರ ದತ್ತ ದಿಟ್ಟ ಹೆಜ್ಜೆಯಿಟ್ಟರೆ ಇಡೀ ಮಹಿಳಾ ಸಮುದಾಯವೇ ಪರಿಹಾರದತ್ತ ಮುಖ ಮಾಡಿದಂತಾಗುತ್ತದೆ.

---

15ನೇ ಪುಟದಿಂದ

## ಫಾರ್ಬಸ್‌ಗಂಜ್ ಗೋಲಿಬಾರ್...

ಡಿಸೆಂಬರ್ 20, 2010ರಂದು ಫಾರ್ಬಸ್‌ಗಂಜ್‌ಗೆ 17 ಕಿ.ಮೀ ದೂರದಲ್ಲಿರುವ ಬಟ್ರಾಹ ಗ್ರಾಮವು ಖಾಕಿ ಧಾರಿಗಳ ಪೈಶಾಚಿಕ ಕೃತ್ಯಕ್ಕೆ ಸಾಕ್ಷಿಯಾಗಿತ್ತು. ಆ ದುರದೃಷ್ಟ ದಿನದಂದು ನಾಲ್ವರು ಮುಸ್ಲಿಮರು ಎಸ್.ಎಸ್.ಬಿ ಜವಾನರಿಂದ ಕೊಲ್ಲಲ್ಪಟ್ಟಿದ್ದರು. ಜವಾನರು ಮಹಿಳೆಯರೊಂದಿಗೆ ಅನುಚಿತ ವರ್ತನೆಯನ್ನು ತೋರಿಸಿರುವುದನ್ನು ಪ್ರಶ್ನಿಸುವುದಕ್ಕಾಗಿ ಗ್ರಾಮಸ್ಥರು ಜವಾನರ ಕ್ಯಾಂಪ್‌ಗೆ ಹೋಗಿದ್ದರು. ನ್ಯಾಯಕ್ಕಾಗಿ ಹೋಗಿದ್ದ ಜನರಿಗೆ ಪ್ರತಿಕ್ರಿಯೆ ಬಂದೂಕಿನ ಗುಂಡಾಗಿತ್ತು.

2010ರಲ್ಲಿ ಚುನಾವಣಾ ಪ್ರಚಾರದಲ್ಲಿ ಮೋದಿ ಪಾಲ್ಗೊಳ್ಳುವುದನ್ನು ನಿತೀಶ್ ತಡೆದಿದ್ದರು. ಗುಜರಾತ್‌ನ ಪತ್ರಿಕೆಗಳಲ್ಲಿ ಮೋದಿ ಪ್ರಕಟಿಸಿದ ಜಾಹಿರಾತಿನ ವಿರುದ್ಧ ಅವರು ಸಿಡಿ ಮಿಡಿಯಾಗಿದ್ದರು ಮತ್ತು ದೊಡ್ಡ ರಾದ್ಧಾಂತವೇ ಆಗಿತ್ತು. ನಿತೀಶ್‌ರನ್ನು ನಂಬಿ ಅಲ್ಪಸಂಖ್ಯಾತರು ಓಟು ಹಾಕಿದ್ದರು ಮತ್ತು ಎನ್‌ಡಿಎ ಅಧಿಕಾರಕ್ಕೆ ಬರಲು ಕಾರಣವಾದರು. ಆದರೆ ಈಗ ನಿತೀಶ್ ವರ್ತನೆ ಕಾಣುವಾಗ ಬಿಹಾರಕ್ಕೆ ಮೋದಿ ಬರುವ ಅಗತ್ಯವಿಲ್ಲ. ಖಂಡಿತವಾಗಿಯೂ ನಿತೀಶ್, ಮೋದಿಯ ಉದ್ದೇಶಗಳನ್ನು ಈಡೇರಿಸುವಂತೆ ಕಾಣುತ್ತಿದೆ. ನಿತೀಶ್ ಸರಕಾರ ಅಧಿಕಾರಕ್ಕೆ ಬಂದ ನಂತರ ಬಿಹಾರದಲ್ಲಿ ಸಂಘಪರಿವಾರದ ಮುಸ್ಲಿಮ್ ವಿರೋಧಿ ಚಟುವಟಿಕೆ ಹೆಚ್ಚಾಗುತ್ತಿದೆ ಮತ್ತು ಅದರ ವಿಷ ಬೀಜವು ಬೇಗನೆ ಪಸರಿಸುತ್ತಿದೆ. ಇದು ಭಾಗಲ್ಪುರ ಗಲಭೆಯ ಮರುಕಳಿಕೆಯ ವಾಸನೆಯಂತೆಯೂ ಕಾಣುತ್ತಿದೆ.

ಬಿಹಾರದಲ್ಲಿ ಈ ಎಲ್ಲಾ ಪೊಲೀಸ್ ದೌರ್ಜನ್ಯವು ನಡೆಯುತ್ತಿರುವಾಗ ಮುಖ್ಯವಾಹಿನಿಯಲ್ಲಿರುವ ಮಾಧ್ಯಮಗಳು ಈ ಘಟನೆಯ ಬಗ್ಗೆ ತಲೆಕೆಡಿಸಿರಲಿಲ್ಲ. ಅವು ಸಣ್ಣ ವರದಿಯನ್ನಷ್ಟೇ ನೀಡಿದ್ದವು ಮತ್ತು ವಾಹನಗಳಿಗೆ ಬೆಂಕಿಯಿಟ್ಟಿದ್ದಾರೆ ಎನ್ನುವ ಮೂಲಕ ಘಟನೆಗೆ ಗ್ರಾಮಸ್ಥರನ್ನೇ ಆಕ್ಷೇಪಿಸಿದ್ದರು. ಮಾಧ್ಯಮವು ದಿಲ್ಲಿಯಲ್ಲಿ ರಾಮ್‌ದೇವ್‌ನ ನಾಟಕವನ್ನು ಪ್ರದರ್ಶಿಸಲು ಸಿದ್ಧವಾಗಿತ್ತು. ರಾಮ್‌ದೇವ್‌ನ ಕ್ಯಾಂಪ್‌ಗೆ ಪೊಲೀಸರು ದಾಳಿ ನಡೆಸಿದ ಮತ್ತು ಈ ಸಂದರ್ಭದಲ್ಲಿ ಆತ ಚೂಡಿದಾರ್ ಹಾಕಿ ಪರಾರಿಯಾಗುವಂತೆ ಮಾಡಿದ ಸರಕಾರದ 'ದೌರ್ಜನ್ಯ'ವನ್ನು ಪ್ರಶ್ನಿಸುವುದರಲ್ಲಿ ತೊಡಗಿತ್ತು.

ದೇಶದಲ್ಲಿ ಪೊಲೀಸ್ ದೌರ್ಜನ್ಯವೆಂಬುದು ಸರ್ವೇ ಸಾಮಾನ್ಯವಾಗಿದೆ. ಪೊಲೀಸ್ ವ್ಯವಸ್ಥೆಯನ್ನು ಸರಿಪಡಿಸುವ ಮತ್ತು ಅವರು ಸಂವಿಧಾನವನ್ನು ಕಾಯುವವರಾಗಿ ಪರಿವರ್ತಿಸುವ ಕಾರ್ಯವನ್ನು ಸರಕಾರ ಮಾಡಬೇಕಾಗಿದೆ. ಬಿಹಾರದ ಜನತೆ ನ್ಯಾಯವು ದೊರೆಯುವವರೆಗೂ ಈ ಅನ್ಯಾಯದ ವಿರುದ್ಧ ಹೋರಾಟವನ್ನು ಮಾಡಬೇಕಾಗಿದೆ.

33ನೇ ಪುಟದಿಂದ

## 'ಆಣೆ ಪ್ರಮಾಣದ' ರಾಜಕೀಯ...

***ನಮ್ಮ ರಾಜ್ಯದ ಸ್ಥಿತಿಗತಿಯನ್ನು ನೋಡಿದರೆ ಒಂದು ಧರ್ಮ ರಾಜ್ಯದ ರಾಜ ಧರ್ಮವಾಗಿ ಮಾರ್ಪಟ್ಟಿದೆ. ಇದನ್ನು ಪ್ರತಿನಿಧಿಸುವ ಮಠಾಧೀಶರುಗಳು ರಾಜ ಗುರುಗಳಾಗಿದ್ದಾರೆ, ಜನರಿಂದ ಆಯ್ಕೆಯಾಗಿ ಬಂದ ರಾಜನಿಗೆ(ಮುಖ್ಯಮಂತ್ರಿಗೆ) ಜನರ ಮಾತಿಗಿಂತ ರಾಜಗುರುಗಳ ಮಾತೇ ಅಂತಿಮವಾಗಿದೆ ಅದರಂತೆಯೇ ಅವರು ನಡೆದುಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ನಿಜಕ್ಕೂ ಅವಲೋಕಿಸಿದರೆ ತಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ, ಸಂವಿಧಾನಕ್ಕೆ ಯಾವುದೇ ಬೆಲೆ ಇಲ್ಲ ಎನ್ನುವಂತಿದೆ. ಆಡಳಿತ ಪಕ್ಷದ ದುರಾಡಳಿತದ ಬಗ್ಗೆ ಪ್ರತಿಪಕ್ಷಗಳು ಆರೋಪ ಮಾಡುತ್ತಿರುವುದು ಸಾಮಾನ್ಯ. ಇವನ್ನು ಸವಾಲಾಗಿ ಸ್ವೀಕರಿಸಿ ಸಂವಿಧಾನ ಬದ್ಧವಾದ ಮಾರ್ಗದಲ್ಲಿ ತನಿಖೆಗೆ ಮುಂದಾಗುವುದನ್ನು ಬಿಟ್ಟು ದೇವರು, ದೈವ, ಮಾಠ, ಮಂತ್ರ ಅಂತಾನೇ 3 ವರ್ಷ ಅಭಿವೃದ್ಧಿಯ ಪರ ಆಡಳಿತ ಕೊಟ್ಟಿದ್ದೇನೆಂದು ಹೇಳಿಕೆಕೊಡುತ್ತಿರುವ ಸಿಎಂ ಅದ್ಹೇಗೆ ಆಣೆ ಪ್ರಮಾಣಕ್ಕೆ ಸಿದ್ಧರಾದರು ಎಂಬುದು ವಿಚಿತ್ರ!***

ಸ್ಪಷ್ಟವಾಗಿ ಬಯಲಾಗುತ್ತದೆ ಎಂದುಕೊಂಡು ಮಠಾಧೀಶರ ಮತ್ತು ಸ್ವಾಮೀಜಿಗಳ ಮೂಲಕ ಮನವೊಲಿಕೆಯ ತಂತ್ರ ರೂಪಿಸಿದರು. ಈ ಹಿನ್ನೆಲೆಯಲ್ಲಿ ಧರ್ಮಸ್ಥಳದ ಧರ್ಮಾಧಿಕಾರಿ ವಿರೇಂದ್ರ ಹೆಗ್ಗಡೆ ಮೂಲಕ ಆಣೆ ಪ್ರಮಾಣವನ್ನು ತಡೆಹಿಡಿಯುವ ಯತ್ನ ಕೂಡಾ ಮಾಡಲಾಗಿದೆ ಎನ್ನಲಾಗುತ್ತಿದೆ. ಸದಾ ಮಠಾಧೀಶರ ಮಾತನ್ನೇ ವೇದವಾಕ್ಯವೆಂದು ಪಾಲಿಸಿಕೊಂಡು ಬಂದಿರುವ ಸಿಎಂಗೆ ಇದು ಸಂದರ್ಭೋಚಿತ ಮಾತಾಗಿದೆ. ಇದನ್ನೇ ಅಸ್ತ್ರವಾಗಿಟ್ಟುಕೊಂಡು ಮಠಾಧೀಶರ ಮಾತಿಗೆ ಬೆಲೆಕೊಟ್ಟು ಆಣೆ ಪ್ರಮಾಣ ಬೇಡ ಅಂತಿದ್ದಾರೆ. ಇದೆಲ್ಲಾ ರಾಜ್ಯದ ಜನರ ಕಣ್ಣಿಗೆ ಮಂಕುಬೂದಿ ಎರೆಚುವ ತಂತ್ರ ಎಂಬುವುದು ಸತ್ಯ.

ಅಬ್ಬಾ ಇದೆಲ್ಲವನ್ನೂ ನೋಡಿದರೆ ಎತ್ತ ಸಾಗುತ್ತಿದೆ ನಮ್ಮ ರಾಜಕೀಯ ಎಂದು ಪ್ರತಿಯೊಬ್ಬರಿಗೂ ಅನಿಸಿರಬಹುದು. ರಾಜ್ಯದ ಸಂವಿಧಾನಬದ್ಧವಾದ ಸ್ಥಾನದಲ್ಲಿರುವ ಮುಖ್ಯಮಂತ್ರಿಯವರಿಗೆ ಸಂವಿಧಾನವೇ ಪ್ರಮುಖ ಗ್ರಂಥವಾಗಿದೆ. ಏನೇ ಆರೋಪ, ದೂರುಗಳಿದ್ದರೂ ಪರಿಹರಿಸಲು ನ್ಯಾಯಾಲಯ ಇದೆ. ಇವೆಲ್ಲವನ್ನೂ ಬಿಟ್ಟು ಇಡೀ ಪ್ರಜಾತಂತ್ರ ವ್ಯವಸ್ಥೆಯನ್ನು ಕೋಳಿ ಅಂಕವನ್ನಾಗಿ ಪರಿವರ್ತಿಸಿರುವ ಬಿಜೆಪಿ ಮತ್ತು ಅದರ ಪರಿವಾರ ಅಧಿಕಾರದಲ್ಲಿ ಇರುವವರೆಗೂ ಇಂತಹ ಹೊಲಸು ರಾಜಕೀಯವೇ ಜನತೆಗೆ ಗತಿ. ಅಭಿವೃದ್ಧಿ ಎಂಬುದು ಪಾತಾಕ್ಕಿಳಿದಿದೆ. ಭ್ರಷ್ಟಾಚಾರ ಉತ್ತುಂಗಕ್ಕೇರಿದೆ. ಇದನ್ನು ಕಂಡು ಸ್ವತಹ ಹೈಕೋರ್ಟ್‌ನ ನ್ಯಾಯಾಧೀಶ ಖೆಹರ್‌ರವರೇ ರೋಸಿ ಹೋಗಿದ್ದಾರೆ. ರಾಜ್ಯದ ಪರಿಸ್ಥಿತಿಯನ್ನು ಕಂಡು ಬೇಸತ್ತು ರಜೆಯಲ್ಲಿ ತೆರಳುವುದಾಗಿ ಯಾವುದೇ ನ್ಯಾಯಾಧೀಶರು ಇದುವರೆಗೆ ಹೇಳಿದ್ದಿಲ್ಲ. ಇಂತಹ ಕುಖ್ಯಾತಿ ದಾಖಲೆಗಳ ಇತಿಹಾಸ ನಿರ್ಮಿಸುತ್ತಿರುವ ಬಿಜೆಪಿ ಸರಕಾರ, ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಏನೇನು ಮಾಡಲಿದೆಯೋ ಕಾದು ನೋಡಬೇಕಾಗಿದೆ.

ಭಾರತ ಪ್ರಜಾಪ್ರಭುತ್ವ ರಾಷ್ಟ್ರ. ಇಲ್ಲಿ ಹಿಂದು, ಮುಸ್ಲಿಂ, ಕ್ರೈಸ್ತ, ಸಿಖ್, ಪಾರ್ಸಿ, ಮುಂತಾದ ಅನೇಕ ಧರ್ಮಗಳಿವೆ, ಪಂಗಡಗಳಿವೆ. ಜೊತೆಗೆ ನಾಸ್ತಿಕರೂ ಇದ್ದಾರೆ. ಇವರು ತಮ್ಮ ಆಚಾರ ವಿಚಾರ, ಸಂಸ್ಕೃತಿಯನ್ನು ನೆಚ್ಚಿ ಬದುಕುತ್ತಿದ್ದಾರೆ. ಈ ಎಲ್ಲ ಧರ್ಮಗಳನ್ನು ಆಚರಿಸುವ ವೈಯಕ್ತಿಕ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನ ನೀಡಿದೆ. ಆದರೆ ಇವುಗಳಲ್ಲಿ ಯಾವುದಾದರೂ ಧರ್ಮ,ಸಂಸ್ಕೃತಿ ಅಥವಾ ದೇವರನ್ನು ದೇಶದ ಆಡಳಿತ ಭಾಗವನ್ನಾಗಿ ತರುವುದು ಸರಿಯಲ್ಲ. ಆದರೆ ನಮ್ಮ ರಾಜ್ಯದ ಸ್ಥಿತಿಗತಿಯನ್ನು ನೋಡಿದರೆ ಒಂದು ಧರ್ಮ ರಾಜ್ಯದ ರಾಜ ಧರ್ಮವಾಗಿ ಮಾರ್ಪಟ್ಟಿದೆ. ಇದನ್ನು ಪ್ರತಿನಿಧಿಸುವ ಮಠಾಧೀಶರುಗಳು ರಾಜ ಗುರುಗಳಾಗಿದ್ದಾರೆ, ಜನರಿಂದ ಆಯ್ಕೆಯಾಗಿ ಬಂದ ರಾಜನಿಗೆ(ಮುಖ್ಯಮಂತ್ರಿಗೆ) ಜನರ ಮಾತಿಗಿಂತ ರಾಜಗುರುಗಳ ಮಾತೇ ಅಂತಿಮವಾಗಿದೆ ಅದರಂತೆಯೇ ಅವರು ನಡೆದುಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ನಿಜಕ್ಕೂ ಅವಲೋಕಿಸಿದರೆ ತಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವಕ್ಕೆ, ಸಂವಿಧಾನಕ್ಕೆ ಯಾವುದೇ ಬೆಲೆ ಇಲ್ಲ ಎನ್ನುವಂತಿದೆ. ಆಡಳಿತ ಪಕ್ಷದ ದುರಾಡಳಿತದ ಬಗ್ಗೆ ಪ್ರತಿಪಕ್ಷಗಳು ಆರೋಪಮಾಡುತ್ತಿರುವುದು ಸಾಮಾನ್ಯ. ಇವನ್ನು ಸವಾಲಾಗಿ ಸ್ವೀಕರಿಸಿ ಸಂವಿಧಾನ ಬದ್ಧವಾದ ಮಾರ್ಗದಲ್ಲಿ ತನಿಖೆಗೆ ಮುಂದಾಗುವುದನ್ನು ಬಿಟ್ಟು ದೇವರು, ದೈವ, ಮಾಠ, ಮಂತ್ರ ಅಂತಾನೇ 3 ವರ್ಷ ಅಭಿವೃದ್ಧಿಯ ಪರ ಆಡಳಿತ ಕೊಟ್ಟಿದ್ದೇನೆಂದು ಹೇಳಿಕೆಕೊಡುತ್ತಿರುವ ಸಿಎಂ ಅದ್ಹೇಗೆ ಆಣೆ ಪ್ರಮಾಣಕ್ಕೆ ಸಿದ್ಧರಾದರು ಎಂಬುದು ವಿಚಿತ್ರ!

### ಏನಿದು ಆಣೆ ಪ್ರಮಾಣ. ಆಣೆ ಪ್ರಮಾಣದಿಂದ ಸತ್ಯ ಹೊರಬರಲು ಸಾಧ್ಯವೇ?

ಇದೊಂದು ಹಿಂದು ಧರ್ಮದಲ್ಲಿರುವ ನಂಬಿಕೆಯಷ್ಟೇ. ಆಣೆ ಪ್ರಮಾಣ ಎಂದರೆ ಕರಾವಳಿಯ ಜನರಿಗೆ ಸಹಜವಾಗಿ ಗೊತ್ತಿರುವಂಥದ್ದೇ. ಹಿಂದು ಸಂಪ್ರದಾಯದಲ್ಲಿ ಆಣೆಗೆ ಹೆಚ್ಚಿನ



ಮಹತ್ವ ಹಿಂದಿನಕಾಲದಲ್ಲಿತ್ತು. ಅಣ್ಣ ತಮ್ಮಂದಿನ ನಡುವೆ ಅಥವಾ ನೆರೆಹೊರೆಯವರ ನಡುವೆ ತಂಟೆ ತಕರಾರು ಬರುವುದು ಸಾಮಾನ್ಯ, ಆದರೆ ಇವು ತಾರಕಕ್ಕೇರಿದಾಗ ಅದು ಆಣೆ ಪ್ರಮಾಣದವರೆಗೂ ಮುಟ್ಟುತ್ತದೆ. ಹಿಂದಿನ ಕಾಲದಲ್ಲಿ ಯಾವುದೇ ವ್ಯಾಜ್ಯದ ಸತ್ಯಾಸತ್ಯತೆಯನ್ನು ಪರೀಕ್ಷಿಸಲು ಹೀಗೆ ಆಣೆ ಮಾಡುತ್ತಿದ್ದರು. ಅದು ಧರ್ಮಸ್ಥಳದ ಮಂಜುನಾಥನ ಮೇಲಿರಬಹುದು ಅಥವಾ ಇನ್ನಾವುದೇ ದೈವದ ಮೇಲಿರಬಹುದು. ಆದರೆ ಆಣೆ ಪ್ರಮಾಣಕ್ಕೆ ಧರ್ಮಸ್ಥಳದ ಮಂಜುನಾಥನ ಸನ್ನಿಧಿ ಪ್ರಸಿದ್ಧಿ ಪಡೆದಿದೆ. ಮಂಜುನಾಥನನ್ನು ಮಾತು ಬಿಡ ಮಂಜುನಾಥ ಅಂತಾನೇ ಕರೆಯಲಾಗುತ್ತದೆ. ಒಮ್ಮೆ ಇಲ್ಲಿ ಮಾತು ಕೊಟ್ಟರೆ ಅದನ್ನು ಮೀರಿ ನಡೆಯುವಂತಿಲ್ಲ. ಒಂದು ವೇಳೆ ಇಲ್ಲಿ ಸುಳ್ಳು ಹೇಳಿದರೆ ಆತನಿಗೆ ಮುಂದಿನ ಪೀಳಿಗೆಗೆ ತಕ್ಕ ಶಿಕ್ಷೆಯಾಗುತ್ತದೆ ಎಂಬ ನಂಬಿಕೆ ಇಲ್ಲಿದೆ. ಆದರೆ ಇಲ್ಲಿ ನ್ಯಾಯ ಇತ್ಯರ್ಥವಾಗಬೇಕಾದರೆ 100 ವರ್ಷ ಕಾಯಬೇಕು. ನಂತರ ಕುಟುಂಬದ ಯಾರಿಗಾದರೂ ದೋಷ ಕಂಡುಬಂದಲ್ಲಿ ಪುನಃ ಇಲ್ಲಿಗೆ ಬಂದು ತಪ್ಪು ಕಾಣಿಕೆ ಹಾಕುವುದರ ಮೂಲಕ ದೋಷ ಪರಿಹಾರ ಮಾಡಿಕೊಳ್ಳಬಹುದು ಎಂಬ ನಂಬಿಕೆ ಈ ಕ್ಷೇತ್ರದಲ್ಲಿದೆ. ಆದರೆ ಯಾವತ್ತು ಹಾಲಿ ಸಿಎಂ ಮತ್ತು ಮಾಜಿ ಸಿಎಂ ಆಣೆ ಪ್ರಮಾಣಕ್ಕೆ ಮುಂದಾದರೋ ಇದೀಗ ಈ ಕ್ಷೇತ್ರಕ್ಕೆ ಆಣೆ ಪ್ರಮಾಣಕ್ಕೆಂದು ಬರುವ ಭಕ್ತರ ಸಂಖ್ಯೆ ಕೂಡಾ ಹೆಚ್ಚಾಗುತ್ತಿದೆಯಂತೆ. ಇನ್ನು ರಾಜಕಾರಣಿಗಳು ಈ ರೀತಿಯ ಆಣೆ ಪ್ರಮಾಣಕ್ಕೆ ಮುಂದಾಗಿರುವುದು ಇದೇ ಮೊದಲ ಬಾರಿಯಲ್ಲ. ಈ ಹಿಂದೆಯೂ ಕೆಲವೊಂದು ರಾಜಕೀಯ ನಾಯಕರುಗಳು ಆಣೆ ಪ್ರಮಾಣಕ್ಕೆ ಮುಂದಾಗಿದ್ದರು.

**ಆಣೆ ಪ್ರಮಾಣದ ರಾಜಕೀಯ ಪರಂಪರೆ**

1983 ರಲ್ಲಿ ಅಧಿಕಾರದಲ್ಲಿದ್ದ ರಾಮಕೃಷ್ಣ ಹೆಗಡೆ ಸರ್ಕಾರವನ್ನು ಉರುಳಿಸಲು ಆಗಿನ ವಿಪಕ್ಷ ನಾಯಕರಾದ ಈಗಿನ ಕೇಂದ್ರ ಕಾನೂನು ಸಚಿವ ವೀರಪ್ಪ ಮೊಯ್ಲಿ 2 ಲಕ್ಷ ಆಮಿಷ ಒಡ್ಡಿದ್ದಾರೆ ಎಂದು ಪಕ್ಷೇತರ ಶಾಸಕ ಭೈರೇಗೌಡ ಆರೋಪ ಮಾಡಿದ್ದರು. ಆರೋಪದಿಂದ ನೊಂದ ವೀರಪ್ಪ ಮೊಯ್ಲಿ ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡಿ ಎಂದು ಸವಾಲು ಹಾಕಿದ್ದರು. 2009 ರ ಲೋಕಸಭಾ ಚುನಾವಣೆಯಲ್ಲಿ ತನ್ನ ಗೆಲುವಿಗೆ ದಕ್ಷಿಣ ಕನ್ನಡ ಕಾಂಗ್ರೆಸ್ ಜಿಲ್ಲಾಧ್ಯಕ್ಷ ರಮಾನಾಥ ರೈ ಪರೋಕ್ಷವಾಗಿ ನನಗೆ ಸಹಕಾರ ನೀಡಿದ್ದರು ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಬಾಂಬ್ ಸಿಡಿಸಿದ್ದರು. ಆರೋಪದಿಂದ ರೊಚ್ಚಿಗೆದ್ದ ಶಾಸಕ ರೈ ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡುವಂತೆ ಸವಾಲು ಹಾಕಿದ್ದರು. ಇನ್ನು 2010 ರಲ್ಲಿ ಈಗಿನ ಇಂಧನ ಸಚಿವೆ ಶೋಭಾ ಕರಂದ್ಲಾಜೆ ಅಕ್ರಮ ಆಸ್ತಿ ಹೊಂದಿದ್ದಾರೆ ಎಂದು ಕುಮಾರಸ್ವಾಮಿಯ ಆರೋಪದ ಹಿನ್ನೆಲೆಯಲ್ಲಿ ಧರ್ಮಸ್ಥಳಕ್ಕೆ ಪ್ರಮಾಣಕ್ಕೆಂದು ಆಹ್ವಾನ ನೀಡಿದ್ದರು. ಆದರೆ ಇದಾವುದು ಅಷ್ಟೊಂದು ಗಂಭೀರವಾಗಿ ಪರಿಗಣಿಸಲ್ಪಟ್ಟಿರಲಿಲ್ಲ. ಆದರೆ ಹಾಲಿ ಸಿಎಂ ಹಾಗೂ ಮಾಜಿ ಸಿಎಂ ಆಣೆ ಪ್ರಮಾಣ ಮಾತ್ರ ಸದ್ಯ ರಾಜ್ಯದಲ್ಲಿ ಬಿಸಿ ಬಿಸಿ ಚರ್ಚೆಗೆ ಗ್ರಾಸವಾಗಿದೆ.

ಅಂತೂ ನರಿಯು ಹೊಟ್ಟೆ ತುಂಬಾ ತುಪ್ಪ ತಿಂದು ಕೋತಿಯ ಮೂತಿಗೆ ಅದನ್ನು ಒರೆಸಿದಂತೆ ಯಡಿಯೂರಪ್ಪ ಭ್ರಷ್ಟಾಚಾರ ದಲ್ಲೇ ಮುಳುಗಿ ಇದೀಗ ಅವೆಲ್ಲವನ್ನೂ ಮಂಜುನಾಥನ ಸನ್ನಿಧಿಯ ಮುಂದಿಟ್ಟು ಕಳಂಕ ಕಳೆದುಕೊಳ್ಳಲು ತಂತ್ರ ರೂಪಿಸಿಕೊಂಡಿದ್ದಾರೆ. ಆದರೆ ಅದು ಅಂದುಕೊಂಡಷ್ಟು ಸುಲಭವಲ್ಲ ಎಂಬುದು ಮುಂದಿನ ದಿನಗಳಲ್ಲೇ ಮುಖ್ಯಮಂತ್ರಿಗೆ ಗೊತ್ತಾಗಲಿದೆ.

2nd Floor,
Saibeen Complex,
Lalbagh, **Mangalore-4**
**Ph : 0824-2452998**

casual wear
the menz shoppe

B.J.M.Complex,
**Moodbidri**
**Cell : 9916820707**

email : cwear_1999@hotmail.com

# ಮನಪಾದಿಂದ ಬೀದಿ ವ್ಯಾಪಾರಿಗಳ ಬೇಟೆ

ಮಂಗಳೂರು ಮಹಾನಗರ ಪಾಲಿಕೆಯ ಆಡಳಿತ ವರ್ಗದ ಅಟ್ಟಹಾಸದಿಂದ ಬೀದಿ ವ್ಯಾಪಾರಸ್ಥರು ಬೀದಿಗೆ ಬಿದ್ದಿದ್ದಾರೆ. ನಗರದ ಸೌಂದರ್ಯವನ್ನು ಕಾಪಾಡುವುದಕ್ಕಾಗಿ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಲಾಗುತ್ತಿದೆ ಎಂಬ ಸಮರ್ಥನೆಯನ್ನು ಮನಪಾ ಆಡಳಿತವು ನೀಡುತ್ತಿದೆ. ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಮನಪಾ ಹೊಸತೊಂದು ತಂತ್ರವನ್ನೂ ರೂಪಿಸಿದೆ. ಅದೇ 'ಟೈಗರ್ ಕಾರ್ಯಾಚರಣೆ'. ಬೀದಿಬದಿಯಲ್ಲಿ ವ್ಯಾಪಾರ ಮಾಡುತ್ತಿರುವಾಗ ಯಾವುದೇ ಮುನ್ಸೂಚನೆ ನೀಡದೆ ಮಿಂಚಿನ ದಾಳಿ ನಡೆಸಿ ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಲಾಗುತ್ತದೆ.

ಪಾಲಿಕೆಯ ಈ ಕಾರ್ಯಾಚರಣೆಯನ್ನು ಒಂದರ್ಥದಲ್ಲಿ ಆಕ್ರಮಣ, ದಾಳಿ ಅಥವಾ ಹಗಲು ದರೋಡೆ ಎಂದರೂ ಅಡ್ಡಿಯಿಲ್ಲ. ಏಕೆಂದರೆ ಈ ಟೈಗರ್ ಕಾರ್ಯಾಚರಣೆ ನಡೆಸಿದ ಸಂದರ್ಭ ವಶಪಡಿಸಿಕೊಂಡ ಯಾವುದೇ ಸಾಮಗ್ರಿಗಳನ್ನು ಬೀದಿ ವ್ಯಾಪಾರಸ್ಥರಿಗೆ ಹಿಂದಿರುಗಿಸುವುದೇ ಇಲ್ಲ. ಸಾಲಸೋಲ ಮಾಡಿ ತಂದಿಟ್ಟ ವ್ಯಾಪಾರದ ಸರಕನ್ನು ಮನಪಾ ಅಧಿಕಾರಿಗಳು ಸಂಹಾರ ಮಾಡಿ ಬಿಡುತ್ತಾರೆ. ಇದು ಪಾಲಿಕೆ ಆಡಳಿತವು ಬೀದಿ ವ್ಯಾಪಾರಿಗಳ ವಿರುದ್ಧ ನಡೆಸುತ್ತಿರುವ ಅಮಾನವೀಯ ಕಾರ್ಯಾಚರಣೆಗೆ ಸಾಕ್ಷಿಯಾಗಿದೆ.

ಹಣ್ಣು ಹಂಪಲು, ತರಕಾರಿ, ಚಪ್ಪಲಿ, ವಾಚ್, ಪರ್ಸ್, ಮನೆಬಳಕೆಯ ಸಾಮಗ್ರಿಗಳು ಹೀಗೆ ಮುಂತಾದ ಅವಶ್ಯ ವಸ್ತುಗಳ ವ್ಯಾಪಾರ ನಡೆಸುತ್ತಿರುವ ಬೀದಿ ಬದಿ ವ್ಯಾಪಾರಿಗಳಿಗೆ ನಗರದ ಲೇಡಿಗೋಷನ್ ಆಸ್ಪತ್ರೆ ಬಳಿ, ಹಂಪನಕಟ್ಟೆಯ ಹಳೆ ಬಸ್ ನಿಲ್ದಾಣವೇ ವ್ಯಾಪಾರದ ಆಶ್ರಯ ತಾಣಗಳು. ಈ ವ್ಯಾಪಾರದಿಂದ ಬರುವ ಆದಾಯವೇ ಇವರ ದಿನದ ಊಟ, ಜೀವನಾವಶ್ಯಕತೆಗಳಿಗೆ ಆಧಾರವಾಗಿರುತ್ತದೆ. ಆದರೆ ಟೈಗರ್ ಕಾರ್ಯಾಚರಣೆ ನಡೆಸಿ ಮನಪಾ ಆಡಳಿತವು ಬೀದಿ ವ್ಯಾಪಾರಸ್ಥರ ಬದುಕಿನೊಂದಿಗೆ ಚೆಲ್ಲಾಟವಾಡುತ್ತಿದೆ. ಇತ್ತ ಪರ್ಯಾಯ ವ್ಯವಸ್ಥೆಯನ್ನೂ ಕಲ್ಪಿಸದೆ ಕೆಲವೊಂದು ಪ್ರದೇಶಗಳನ್ನು ಬೀದಿ ವ್ಯಾಪಾರದ ನಿಷೇಧಿತ ವಲಯವೆಂದು ಘೋಷಿಸಿ ಬೀದಿ ವ್ಯಾಪಾರಿಗಳ ವಿರುದ್ಧದ ಕಾರ್ಯಾಚರಣೆಯನ್ನು ತೀವ್ರಗೊಳಿಸಿದೆ.

ಬೀದಿ ವ್ಯಾಪಾರ ಕೇವಲ ಬೀದಿ ವ್ಯಾಪಾರಸ್ಥರಿಗೆ ಮಾತ್ರ ಲಾಭ ತಂದುಕೊಡುತ್ತಿಲ್ಲ. ಬದಲಾಗಿ ಕೂಲಿ ಕಾರ್ಮಿಕರು, ಜನಸಾಮಾನ್ಯರು, ಮಧ್ಯಮ ವರ್ಗದವರು ಈ ಬೀದಿ ವ್ಯಾಪಾರದ ಗ್ರಾಹಕರಾಗಿದ್ದಾರೆ. ಸಮಯದ ಉಳಿತಾಯ, ಕಡಿಮೆ ಬೆಲೆಯಲ್ಲಿ ಹಾಗೂ ಇತಿಮಿತಿಯಲ್ಲಿ ಸಾಮಗ್ರಿಗಳನ್ನು ಖರೀದಿಸುವ ಅವಕಾಶವಿರುವುದರಿಂದ ಬಡಜನರಿಗೆ ಈ ಬೀದಿ ವ್ಯಾಪಾರವೇ ಹೆಚ್ಚು ಲಾಭ ತಂದುಕೊಡುತ್ತದೆ.



ಫೈಲ್ ಚಿತ್ರ

***ಮಂಗಳೂರು ಮಹಾನಗರ ಪಾಲಿಕೆಯು ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸುತ್ತಿರುವ ಬಗ್ಗೆ ಬೀದಿ ಬದಿ ವ್ಯಾಪಾರಿ ಮೆಹರಾಜ್‌ರನ್ನು ಮಾತನಾಡಿಸಿದಾಗ ಅವರು ಪಾಲಿಕೆಯ ಆಡಳಿತದಿಂದ ತಮಗಾಗುತ್ತಿರುವ ಕಿರುಕುಳವನ್ನು ಬಿಚ್ಚಿಟ್ಟರು.***

***ನಾನು ಸುಮಾರು 7-8 ವರ್ಷಗಳಿಂದ ಲೇಡಿಗೋಷನ್ ಸಮೀಪದಲ್ಲಿ ಬೀದಿಬದಿ ವ್ಯಾಪಾರ ನಡೆಸುತ್ತಿದ್ದೇನೆ. ನಾನು ಬಾಡಿಗೆ ಮನೆಯೊಂದರಲ್ಲಿ ವಾಸಿಸುತ್ತಿದ್ದು, ಈ ಬೀದಿಬದಿ ವ್ಯಾಪಾರ ನಡೆಸಿಯೇ ತನ್ನ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದೇನೆ. ಆದರೆ ಕಳೆದೊಂದು ವರ್ಷದಿಂದ ಪಾಲಿಕೆಯ ಆಡಳಿತವು ಬೀದಿಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆಯಲ್ಲಿ ತೊಡಗಿದ್ದು, ಇದೀಗ ನಡೆಯುತ್ತಿರುವ ಟೈಗರ್ ಕಾರ್ಯಾಚರಣೆಯಿಂದಾಗಿ ನಮ್ಮ ವ್ಯಾಪಾರ ಸಾಮಗ್ರಿಗಳು ಲೂಟಿಯಾಗುತ್ತಿವೆ.***

***ಈ ಟೈಗರ್ ಕಾರ್ಯಾಚರಣೆಯನ್ನು ಯಾವುದೇ ಮುನ್ಸೂಚನೆ ನೀಡದೆ ಮಾಡಲಾಗುತ್ತದೆ. ಈ ಸಂದರ್ಭ ವ್ಯಾಪಾರಕ್ಕಿಟ್ಟ ಎಲ್ಲಾ ವಸ್ತುಗಳನ್ನು ಲಾರಿಯಲ್ಲಿ ತುಂಬಿಸಿಕೊಂಡು ಹೋಗುತ್ತಾರೆ. ಆದರೆ ಅದನ್ನು ಹಿಂದಿರುಗಿಸುವುದೇ ಇಲ್ಲ. ಆ ಬಗ್ಗೆ ಪಾಲಿಕೆಯ ಅಧಿಕಾರಿಗಳಲ್ಲಿ ಕೇಳಿದರೆ ಉಡಾಫೆಯ ಉತ್ತರ ನೀಡುತ್ತಾರೆ ಎಂದು ಅಲವತ್ತುಕೊಂಡಿದ್ದಾರೆ.***

## ರಾಜಕೀಯಗೊಂಡಿರುವ ಹೋರಾಟ!

*ಬೀದಿ ವ್ಯಾಪಾರಸ್ಥರ ಹೋರಾಟ ಸಂಪೂರ್ಣ ರಾಜಕೀಯಮಯವಾದಂತೆ ಕಂಡುಬರುತ್ತಿದೆ. ಕಳೆದ ಕೆಲವು ಸಮಯಗಳ ಹಿಂದೆ ಬೀದಿಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆಯನ್ನು ವಿರೋಧಿಸಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗದಲ್ಲಿ ನಡೆದಿದ್ದ ಪ್ರತಿಭಟನೆಯಲ್ಲಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ, ಕಾರ್ಯದರ್ಶಿ ಸಲೀಂ ಗುರುವಾಯನಕೆರೆ ಮತ್ತು ರಿಯಾಝ್ ಪರಂಗಿಪೇಟೆ ಧ್ವನಿ ಎತ್ತಿದ್ದರು.*

*ಆದರೆ ಕಳೆದ ಕೆಲವು ದಿನಗಳಿಂದ ಮಹಾನಗರ ಪಾಲಿಕೆಯ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯಿಂದ ಎಸ್‌ಡಿಪಿಐಯನ್ನು ದೂರವಿರಿಸಲಾಗಿದೆ. ಮಾತ್ರವಲ್ಲ ಮಹಾನಗರ ಪಾಲಿಕೆಯ ಕಚೇರಿಯ ಮುಂದೆ ನಡೆದ ಪ್ರತಿಭಟನೆಯಲ್ಲಿ ಹಲವು ಸಂಘಟನೆ, ಪಕ್ಷಗಳ ಹೆಸರು ಕಂಡು ಬಂದಿತ್ತು. ಆದರೆ ಎಸ್‌ಡಿಪಿಐ ಹೆಸರನ್ನು ಮಾತ್ರ ಮರೆ ಮಾಚಲಾಗಿತ್ತು. ಈ ಮೊದಲು ಹೋರಾಟವನ್ನು ಬೆಂಬಲಿಸಿದ್ದ ಪಕ್ಷವನ್ನೇ ಈದೀಗ ದೂರವಿರಿಸಿರುವುದನ್ನು* ಗಮನಿಸಿದರೆ ಪ್ರತಿಭಟನೆಯ ಒಳಗಿನ ರಾಜಕೀಯವನ್ನು ಅರ್ಥಮಾಡಿಕೊಳ್ಳಬಹುದು.

ಬೀದಿ ಬದಿ ವ್ಯಾಪಾರಿಗಳ ಹೋರಾಟ ರಾಜಕೀಯ ರಹಿತವಾಗಿ ನಡೆಯಬೇಕಾಗಿತ್ತು. ಒಂದು ವೇಳೆ ರಾಜಕೀಯ ಪಕ್ಷಗಳು ಹೋರಾಟಕ್ಕೆ ಬೆಂಬಲ ಸೂಚಿಸಿದರೂ ಅವು ತಮ್ಮ ಸ್ವಹಿತಾಸಕ್ತಿಯನ್ನು ಬದಿಗಿಟ್ಟು ಹೋರಾಟ ನಡೆಸಬೇಕಾಗಿತ್ತು. ಆದರೆ ಇಲ್ಲಿ ನಡೆಯುತ್ತಿರುವ ಹೋರಾಟವನ್ನು ಕಮ್ಯುನಿಸ್ಟ್, ಕಾಂಗ್ರೆಸ್, ಜೆಡಿಎಸ್ ಪಕ್ಷಗಳು ತಾವು ಮಾಡುತ್ತಿರುವ ಹೋರಾಟವೆಂದು ಬಿಂಬಿಸಲು ತೀವ್ರ ಪೈಪೋಟಿ ನಡೆಸುತ್ತಿವೆ.

ಅಲ್ಲದೇ ತಾವು ಬೀದಿ ವ್ಯಾಪಾರಿಗಳ ಪರ ಎಂದು ಬಿಂಬಿಸಲು ಕಾಂಗ್ರೆಸ್ ಮುಖಂಡರು ಹಾಗೂ ಮಾಜಿ ಶಾಸಕರು ಹೋರಾಟಕ್ಕೆ ನೇತೃತ್ವ ನೀಡುತ್ತಿದ್ದಾರೆ. ಆದರೆ ಮನಪಾದಲ್ಲಿ ಈ ಹಿಂದೆ ಕಾಂಗ್ರೆಸ್ ಆಡಳಿತವಿದ್ದಾಗಲೂ ಬೀದಿ ಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆ ನಡೆದಿತ್ತು. ಆ ಸಂದರ್ಭದಲ್ಲಿ ಮಾತೆತ್ತದ ಮಾಜಿ ಶಾಸಕರು ಈ ಸಂದರ್ಭದಲ್ಲಿ ಹೋರಾಟಕ್ಕೆ ನೇತೃತ್ವ ನೀಡುತ್ತಿರುವುದು ಅವರ ಓಲೈಕೆಯ ರಾಜಕೀಯವನ್ನು ಬಹಿರಂಗಪಡಿಸುತ್ತದೆ.

ಆದರೂ ಸಂಪೂರ್ಣ ರಾಜಕೀಯ ಹೊಗೆಯಾಡುತ್ತಿರುವ ಈ ಹೋರಾಟದಲ್ಲಿ ಬೀದಿ ವ್ಯಾಪಾರಿಗಳು ಬಲಿಪಶುವಾಗದಿರಲಿ ಮತ್ತು ಬೀದಿ ವ್ಯಾಪಾರಿಗಳ ಬೇಡಿಕೆಗಳು ಈಡೇರಬೇಕು ಹಾಗೂ ಅವರಿಗೆ ನ್ಯಾಯ ದೊರೆಯಬೇಕು ಎಂದು ಎಸ್‌ಡಿಪಿಐ ಆಶಿಸಿದೆ. ಸ್ವಹಿತಾಸಕ್ತಿ ಮತ್ತು ಸ್ವಾರ್ಥ ರಹಿತ ಹೋರಾಟವನ್ನು ಪಕ್ಷವು ಬೆಂಬಲಿಸುತ್ತದೆ ಎಂದು ಎಸ್‌ಡಿಪಿಐ ತನ್ನ ನಿಲುವು ವ್ಯಕ್ತಪಡಿಸಿದೆ.

---

ಈಗಾಗಲೇ ಮಂಗಳೂರಿನಲ್ಲಿ 1000ಕ್ಕೂ ಹೆಚ್ಚು ಮಂದಿ ಬೀದಿ ವ್ಯಾಪಾರಿಗಳಿದ್ದಾರೆ. ಆದರೆ ಯಾವುದೇ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸದೇ ತೆರವುಗೊಳಿಸುತ್ತಿರುವುದರಿಂದ ಕುಟುಂಬ ನಿರ್ವಹಣೆಗೆ ಯಾವುದೇ ದಾರಿ ಕಾಣದಾಗಿದೆ. ಕೇಂದ್ರ ಸರಕಾರ 2009ರಲ್ಲಿ ಬೀದಿಬದಿ ವ್ಯಾಪಾರಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ನೀತಿಯನ್ನು ಕೂಡ ರೂಪಿಸಿದೆ. ಇದರ ಪ್ರಕಾರ, ಬೀದಿ ವ್ಯಾಪಾರಿಗಳ ಸಮೀಕ್ಷೆ ನಡೆಸಿ ಅವರಿಗೆ ವ್ಯಾಪಾರಕ್ಕೆ ಅನುಕೂಲ ಕಲ್ಪಿಸಿಕೊಡಬೇಕಾಗುತ್ತದೆ. ಅಲ್ಲದೇ ಈ ನೀತಿಯನ್ನನುಸರಿಸಿ ಕಾನೂನು ರೂಪಿಸಲು ರಾಜ್ಯ ಸರಕಾರಗಳು, ಸ್ಥಳೀಯಾಡಳಿತ ಸಂಸ್ಥೆಗಳು ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸುವುದಕ್ಕಿಂತ ಮುಂಚೆ ಅವರಿಗೆ ಸಮರ್ಪಕವಾಗಿ ಪರ್ಯಾಯ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಆದರೆ ಮನಪಾದ ಆಡಳಿತವು ಮಂಗಳೂರು ನಗರದಲ್ಲಿ ಬೀದಿ ವ್ಯಾಪಾರಿಗಳೇ ಇಲ್ಲ ಎನ್ನುವ ವರದಿಯನ್ನು ಸಿದ್ಧಪಡಿಸಿ ಸುಪ್ರೀಂಕೋರ್ಟ್‌ಗೆ ಕಳುಹಿಸುವ ಇರಾದೆಯನ್ನು ಹೊಂದಿರುವಂತೆ ಕಾಣುತ್ತಿದೆ. ನಗರದಲ್ಲಿ ಕಾರ್ಪೋರೇಟ್‌ಗಳ ಪ್ರಭಾವ ಹೆಚ್ಚಾಗಿದೆ. ಇಲ್ಲಿಯೂ ಕೂಡ ಪರೋಕ್ಷವಾಗಿ ಕಪ್ಪ ಸಲ್ಲಿಕೆಯಾಗುತ್ತದೆ. ಈ ಕಾರಣಕ್ಕಾಗಿಯೇ ಬೀದಿವ್ಯಾಪಾರಿಗಳನ್ನು ಬೀದಿಪಾಲು ಮಾಡಿ ಕಾರ್ಪೋರೇಟ್ ವಲಯಗಳಿಗೆ, ಶ್ರೀಮಂತ ಉದ್ಯಮಿಗಳಿಗೆ ಮನಪಾ ಆಡಳಿತವು ಈ ನಗರದಲ್ಲಿ ನಡೆಯುತ್ತಿರುವ ವ್ಯಾಪಾರ ವಹಿವಾಟನ್ನು ಧಾರೆ ಎರೆದುಕೊಡುವ ಕಾರ್ಯತಂತ್ರವನ್ನು ರೂಪಿಸಿರುವುದು ಬಹಳ ಸ್ಪಷ್ಟವಾಗಿದೆ.

ಮಂಗಳೂರು ಮಹಾನಗರ ಪಾಲಿಕೆಯು ಬಿಜೆಪಿಯ ತೆಕ್ಕೆಯಲ್ಲಿದೆ. ಈ ಪಾಲಿಕೆಯ ತೆರವು ಕಾರ್ಯಾಚರಣೆಯು ಹೆಚ್ಚಾಗಿ ಅಲ್ಪಸಂಖ್ಯಾತ ವ್ಯಾಪಾರಿಗಳ ವಿರುದ್ಧವೇ ಆಗಿದೆ. ಕಂಕನಾಡಿ, ಪಂಪ್‌ವೆಲ್ ಪ್ರದೇಶಗಳು ಕೂಡ ಈ ನಗರದ ವ್ಯಾಪ್ತಿಗೊಳಪಡುತ್ತವೆ. ಆದರೆ ಈ ಪ್ರದೇಶಗಳಲ್ಲಿ ಹೆಚ್ಚಾಗಿ ಬಹುಸಂಖ್ಯಾತ ವರ್ಗದವರೇ ವ್ಯಾಪಾರ ನಡೆಸುತ್ತಿದ್ದಾರೆ. ಆದರೆ ಲೇಡಿಗೋಷನ್, ಸೆಂಟ್ರಲ್ ಮಾರ್ಕೆಟ್ ಬಳಿ ಹೆಚ್ಚಾಗಿ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರು ಬೀದಿಬದಿ ವ್ಯಾಪಾರ ವಹಿವಾಟು ನಡೆತ್ತಾರೆ. ಆದರೆ ಪಾಲಿಕೆಯ ಕಾರ್ಯಾಚರಣೆಯು ಕೇವಲ ಅಲ್ಪಸಂಖ್ಯಾತರು ವ್ಯಾಪಾರ ನಡೆಸುತ್ತಿರುವ ಪ್ರದೇಶಗಳಿಗೆ ಸೀಮಿತವಾಗಿದೆ. ಈ ಅಂಶವನ್ನು ಗಮನಿಸಿದರೆ ಈ ಕಾರ್ಯಾಚರಣೆಯಲ್ಲಿ ಅಲ್ಪಸಂಖ್ಯಾತರೇ ಹೆಚ್ಚು

45ನೇ ಪುಟಕ್ಕೆ

# ಹುಣಸೂರು ಪ್ರಕರಣ:
# ಪಾಪ್ಯುಲರ್ ಫ್ರಂಟ್ ರಾಜ್ಯಾಧ್ಯಕ್ಷರೊಂದಿಗೆ ಸಂದರ್ಶನ

*ಹುಣಸೂರು ಪ್ರಕರಣದಲ್ಲಿ ಪ್ರಮುಖವಾಗಿ ಕೇಳಿಬರುತ್ತಿರುವ ಕೆಎಫ್‌ಡಿ ಸಂಘಟನೆ ನಿಷೇಧದ ಕುರಿತಂತೆ ಪಾಪ್ಯುಲರ್ ಫ್ರಂಟ್‌ನ ರಾಜ್ಯಾಧ್ಯಕ್ಷ ಇಲ್ಯಾಸ್ ಮುಹಮ್ಮದ್‌ರೊಂದಿಗೆ ಪ್ರಸ್ತುತ ಪಾಕ್ಷಿಕ ನಡೆಸಿದ ಸಂದರ್ಶನವನ್ನು ಇಲ್ಲಿ ನೀಡಲಾಗಿದೆ.*



**ಪ್ರಸ್ತುತ: ಹುಣಸೂರಿನಲ್ಲಿ ನಡೆದ ವಿದ್ಯಾರ್ಥಿಗಳಿಬ್ಬರ ಅಪಹರಣ ಹಾಗೂ ಹತ್ಯೆ ಘಟನೆಯಲ್ಲಿ ಕೆಎಫ್‌ಡಿಯ ಕೈವಾಡವಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಈ ಬಗ್ಗೆ ತಾವೇನು ಹೇಳುತ್ತೀರಿ.**

ಇಲ್ಯಾಸ್: ಹುಣಸೂರಿನ ಇಬ್ಬರು ವಿದ್ಯಾರ್ಥಿಗಳ ಅಪಹರಣ-ಹತ್ಯೆ ಘಟನೆಯನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಠಿಣ ಶಬ್ದಗಳಲ್ಲಿ ಖಂಡಿಸುತ್ತದೆ. ಇದೊಂದು ಬರ್ಬರ-ಘನಘೋರ ಘಟನೆಯಾಗಿದೆ. ಈ ಕೃತ್ಯವನ್ನು ನಡೆಸಿದ ಅಪರಾಧಿಗಳು ಯಾರೇ ಆಗಿದ್ದರೂ ಅವರಿಗೆ ಕಠಿಣ ಶಿಕ್ಷೆ ನೀಡಲೇಬೇಕು. ಈ ಕೃತ್ಯದ ಹಿಂದೆ ಕೆಎಫ್‌ಡಿ ಸಂಘಟನೆ ಇದೆ ಎನ್ನುವ ಆರೋಪವೂ ಅತ್ಯಂತ ಖಂಡನೀಯ. ವಾಸ್ತವದಲ್ಲಿ ಕೆಎಫ್‌ಡಿ (ಕರ್ನಾಟಕದಲ್ಲಿ ಫೋರಂ ಫಾರ್ ಡಿಗ್ನಿಟಿ) ಈಗ ಅಸ್ತಿತ್ವದಲ್ಲಿಲ್ಲ. 2007ರಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದೊಂದಿಗೆ ಕೆಎಫ್‌ಡಿ ಸಂಘಟನೆ ವಿಲೀನಗೊಂಡಿದೆ. 2009ರ ಕ್ಯಾಲಿಕಟ್ ಸಮಾವೇಶದಲ್ಲಿ ಇದನ್ನು ಮತ್ತೊಮ್ಮೆ ಘೋಷಿಸಿ ಎಂಟು ರಾಜ್ಯಗಳ ಅಧ್ಯಕ್ಷರನ್ನು ವೇದಿಕೆಯಲ್ಲಿ ಆಮಂತ್ರಿಸಲಾಗಿತ್ತು. ಹುಣಸೂರಿನ ಹತ್ಯೆ ಘಟನೆಗೂ ಕೆಎಫ್‌ಡಿ ಅಥವಾ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗೂ ಯಾವುದೇ ಸಂಬಂಧವಿಲ್ಲ. ಇಂತಹ ಸಮಾಜ ವಿರೋಧಿ ಘಟನೆಗಳನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಖಂಡಿಸುತ್ತದೆಯಲ್ಲದೆ ಕ್ರಿಮಿನಲ್ ಕೃತ್ಯಗಳಿಂದ ಹಾಗೂ ಸಾಮಾಜಿಕ ಅನಿಷ್ಟಗಳಿಂದ ದೂರವಿರುವಂತೆ ಯುವಜನತೆಯಲ್ಲಿ ಪಾಪ್ಯುಲರ್ ಫ್ರಂಟ್ ಸದಾ ಪ್ರಜ್ಞಾವಂತಿಕೆಯನ್ನು ಮೂಡಿಸುತ್ತದೆ.

**ಪ್ರಸ್ತುತ: ಹಾಗಿದ್ದರೆ ಆ ಘಟನೆಯಲ್ಲಿ ಕೆಎಫ್‌ಡಿ ಹೆಸರನ್ನು ಎಳೆದು ತರಲು ಕಾರಣವೇನು?**

ಇಲ್ಯಾಸ್: ಕರ್ನಾಟಕ ರಾಜ್ಯದಲ್ಲಿ ಇಂದಿನ ತನಕ ಎಷ್ಟೋ ಕೊಲೆಗಳು ನಡೆದಿವೆ. ಆ ಕೊಲೆಗಳಲ್ಲಿ ಭಾಗಿಯಾಗಿದ್ದವರು ಬೇರೆ ಬೇರೆ ಸಂಘಟನೆಗಳಿಗೆ ಸೇರಿದ್ದವರಿರಬಹುದು. ಆದರೆ ಇದುವರೆಗೂ ಕೊಲೆಗಡುಕರು ಮತ್ತು ಸಂಘಟನೆಗಳಿಗೂ ಸಂಬಂಧ ಕಲ್ಪಿಸುವ ಹಾಗೂ ಸಂಘಟನೆಯನ್ನು ನಿಷೇಧ ಮಾಡಬೇಕೆಂದು ಯಾವುದೇ ಮಂತ್ರಿಗಳಾಗಲೀ, ಪೊಲೀಸರಾಗಲೀ ಹೇಳಿದ್ದಿಲ್ಲ. ಆದರೆ ಹುಣಸೂರು ಪ್ರಕರಣಕ್ಕೆ ಸಂಬಂಧಿಸಿ ಸ್ವತಃ ಗೃಹಮಂತ್ರಿ ಆರ್.ಅಶೋಕ್‌ರವರೇ ಪತ್ರಿಕಾಗೋಷ್ಠಿಯನ್ನು ಕರೆದು ಈ ಪ್ರಕರಣದಲ್ಲಿ ಸಂಘಟನೆಯನ್ನು ಎಳೆದು ತರುವ ಉದ್ದೇಶವೇ ಸಂಶಯಕ್ಕೆ ಎಡೆ ಮಾಡುತ್ತಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯು ಕೋಮುವಾದ, ಭಯೋತ್ಪಾದನೆ, ಫ್ಯಾಶಿಸಂ ವಿರುದ್ಧ ಹೋರಾಟ ನಡೆಸುವ ಸಂಘಟನೆಯಾಗಿದೆ. ಮಾನವಹಕ್ಕುಗಳಿಗಾಗಿ, ಸಮಾಜದ ಎಲ್ಲಾ ಹಿಂದುಳಿದ ವರ್ಗಗಳ ಹಕ್ಕುಗಳಿಗಾಗಿ ನಿರಂತರ ಹೋರಾಟ ನಡೆಸುತ್ತಿದೆ. ಹಾಗಾಗಿ ನಮ್ಮ ದೇಶಕ್ಕೆ ಅತ್ಯಂತ ಮಾರಕವಾಗಿರುವ ಕೋಮುವಾದಿ ಫ್ಯಾಶಿಸ್ಟ್ ಶಕ್ತಿಗಳಿಗೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಒಂದು ವಿರೋಧಿ ಶಕ್ತಿಯಾಗಿ ಕಾಣಿಸುತ್ತಿದೆ. ಮುಸ್ಲಿಮರು ಸಂಘಟಿತರಾಗುತ್ತಾ ತಮ್ಮ ಹಕ್ಕುಗಳಿಗಾಗಿ, ನ್ಯಾಯಕ್ಕಾಗಿ ಹಾಗೂ ಸಬಲೀಕರಣಕ್ಕಾಗಿ ಹೋರಾಟ ನಡೆಸುವುದು ಕೆಲ ಸ್ಥಾಪಿತ

ಹಿತಾಸಕ್ತಿಗಳಿಗೆ ತೊಡಕಾಗಿವೆ. ಹಾಗಾಗಿ ಪಾಪ್ಯುಲರ್ ಫ್ರಂಟ್ಆಫ್ ಇಂಡಿಯಾದ ಮೇಲೆ ನಿರಂತರ ಅಪಪ್ರಚಾರದ ಷಡ್ಯಂತ್ರಗಳು ನಡೆಯುತ್ತಲೇ ಇರುತ್ತದೆ.

**ಪ್ರಸ್ತುತ: ಹುಣಸೂರು ಹತ್ಯಾ ಪ್ರಕರಣವನ್ನು ರಾಜಕೀಯಗೊಳಿಸಲಾಗಿದೆ ಎಂಬ ಮಾತು ಕೇಳಿ ಬರುತ್ತಿದೆಯಲ್ಲವೇ?**

ಇಲ್ಯಾಸ್:ರಾಜ್ಯದಲ್ಲಿರುವ ಸರಕಾರ ಭ್ರಷ್ಟಾಚಾರ ಶಿಖರಾಗ್ರದಲ್ಲಿದೆ. ಇತ್ತೀಚೆಗೆ ಮುಖ್ಯಮಂತ್ರಿಯವರು ಆಣೆ ಪ್ರಮಾಣಕ್ಕೆ ಕರೆದು ಇದೀಗ ಅದನ್ನು ಹಿಂದೆಗೆಯುವುದು ಹೇಗೆ ಎಂಬ ಸಂದಿಗ್ಧತೆಯಲ್ಲಿದ್ದಾರೆ. ರಾಜ್ಯಾದ್ಯಂತ ಜನರೂ ಮಾಧ್ಯಮಗಳೂ ಇವೆಲ್ಲವನ್ನೂ ಚರ್ಚಿಸುತ್ತಿರುವಾಗ ಜನರ ಚಿಂತನೆಯ ದಿಕ್ಕು ತಪ್ಪಿಸುವ ಪ್ರಯತ್ನ ಇದಾಗಿದೆ ಎಂದು ಭಾವಿಸುತ್ತೇವೆ.

**ಪ್ರಸ್ತುತ: ಪಾಪ್ಯುಲರ್ ಫ್ರಂಟ್‌ನ ಕಾರ್ಯಚಟುವಟಿಕೆಗಳೇನು?**

ಇಲ್ಯಾಸ್:ಮುಸ್ಲಿಂ, ದಲಿತ, ಹಿಂದುಳಿದ ವರ್ಗಗಳ ಸಬಲೀಕರಣಕ್ಕಾಗಿ ಶೈಕ್ಷಣಿಕ ಜಾಗೃತಿ/ನೆರವು ಪ್ರೋತ್ಸಾಹ, ಸಾಮಾಜಿಕ ಸೇವೆ-ಅಭಿವೃದ್ಧಿ, ಅಪಘಾತ-ಪ್ರಾಕೃತಿಕ ದುರಂತಗಳ ಸನ್ನಿವೇಶದಲ್ಲಿ ನೆರವು-ರಕ್ಷಣೆ, ಸಣ್ಣ ಪ್ರಮಾಣದ ಸ್ವಉದ್ಯೋಗ ಯೋಜನೆ, ಪುನರ್ವಸತಿ, ಬಡ ರೋಗಿಗಳಿಗೆ ನೆರವು, ವಸತಿ ನಿರ್ಮಾಣ, ರಕ್ತದಾನ ಶಿಬಿರ ಇತ್ಯಾದಿ ಚಟುವಟಿಗಳನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ನಡೆಸುತ್ತಿದೆ.

**ಪ್ರಸ್ತುತ:ರಾಜ್ಯ ಸರಕಾರ ಕೆಎಫ್‌ಡಿಯನ್ನು ನಿಷೇಧಿಸಬೇಕೆಂದಿದೆಯಲ್ಲಾ?**

ಇಲ್ಯಾಸ್: ಕೆಎಫ್‌ಡಿ ಎಂಬ ಸಂಘಟನೆ ಅಸ್ತಿತ್ವದಲ್ಲಿಲ್ಲ. ಅದನ್ನು ನಿಷೇಧಿಸುವ ಮಾತು ಎಲ್ಲಿಂದ ಬರುತ್ತದೆ. ಜನಪರವಾಗಿರುವ, ಸಾಮಾಜಿಕ ಸಾಮರಸ್ಯಕ್ಕಾಗಿ ಶ್ರಮಿಸುವ ಹಾಗೂ ಸಬಲೀಕರಣಕ್ಕಾಗಿ ದುಡಿಯುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದಂತಹ ಸಂಘಟನೆಗಳನ್ನು ಏಕೆ ನಿಷೇಧಿಸಬೇಕು? ಬಾಬರಿ ಮಸ್ಜಿದ್ ಧ್ವಂಸಗೊಳಿಸಿದ, ಗುಜರಾತ್ ಹತ್ಯಾಕಾಂಡಗಳನ್ನು ನಡೆಸಿದ, ಮುಂಬೈನಲ್ಲಿ ನರಮೇಧ ನಡೆಸಿದ, ಹಾಜಬ್ಬ ಹಸನಬ್ಬರನ್ನು ಬೆತ್ತಲೆಗೊಳಿಸಿದ, ಚರ್ಚ್‌ಗಳನ್ನು ಧ್ವಂಸಗೈದ, ಕ್ರೈಸ್ತರ ಮೇಲೆ ಆಕ್ರಮಣಗಳನ್ನು ಮಾಡಿದ, ಜಾನುವಾರು ಸಾಗಾಟ ಮತ್ತು ನೈತಿಕ ಪೊಲೀಸ್ ಹೆಸರಲ್ಲಿ ಹಲ್ಲೆ-ದರೋಡೆ-ಕೊಲೆಗಳನ್ನು ನಡೆಸಿದ, ಕಗ್ಗೊಲೆಗಳನ್ನು ಮಾಡಿದ, ಕೋಮುವೈಷಮ್ಯಗಳನ್ನು ಹುಟ್ಟಿಸುತ್ತಿರುವ ಸಂಘಟನೆಗಳ ಪರಿವಾರವನ್ನೇ ನಿಷೇಧಿಸಬೇಕಾಗಿದೆ.

**ಪ್ರಸ್ತುತ: ಪ್ರೀತಿ-ಸ್ನೇಹ-ಸಾಮರಸ್ಯವಿರುವ ನೆಮ್ಮದಿಯ ಸಮಾಜವನ್ನು ನಿರ್ಮಿಸಬೇಕಾಗಿದೆ. ಈ ಬಗ್ಗೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಯಾವ ಪಾತ್ರ ವಹಿಸುತ್ತದೆ.**

ಇಲ್ಯಾಸ್: ಸಮಾಜದಲ್ಲಿ ಹಿಂದು-ಮುಸ್ಲಿಮ್-ಕ್ರೈಸ್ತ ಇತ್ಯಾದಿ ಧರ್ಮಗಳ ಜನರು ಸೌಹಾರ್ದತೆ, ಸಹಬಾಳ್ವೆ, ಸ್ನೇಹ-ವಿಶ್ವಾಸದಿಂದ ಇರಬೇಕು. ಅದುವೇ ಜಾತ್ಯತೀತ ತತ್ವ. ಆದರೆ ಈ ವ್ಯವಸ್ಥೆಯನ್ನು ಬುಡಮೇಲುಗೊಳಿಸುವ ಕೆಲ ಸ್ಥಾಪಿತ ಹಿತಾಸಕ್ತಿಗಳ ವ್ಯವಸ್ಥಿತ ಪ್ರಯತ್ನಗಳನ್ನು ತಡೆಯದೇ ಇದ್ದರೆ ಈ ದೇಶದ ನೆಮ್ಮದಿಯಂತ ಸಮಾಜದ ಪರಿಕಲ್ಪನೆಯೇ ಇಲ್ಲದಂತಾಗಿ ಹೋಗುತ್ತದೆ. ಹಾಗಾಗಿ ಈ ರೀತಿ ಸಮಾಜವನ್ನು ಕಲುಷಿತಗೊಳಿಸುವ ಶಕ್ತಿಗಳ ವಿರುದ್ಧ ಎಲ್ಲಾ ಧರ್ಮದ ಜನರು ಒಂದಾಗಿ ಸಂಘಟಿತ ಹೋರಾಟ ನಡೆಸಿದರೆ ಪ್ರೀತಿ, ಸ್ನೇಹ, ಸಾಮರಸ್ಯವಿರುವ ನೆಮ್ಮದಿಯ ಸಮಾಜ ನಿರ್ಮಾಣ ಸಾಧ್ಯ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಅದಕ್ಕಾಗಿ ಕಟಿಬದ್ಧವಾಗಿದೆ.

---

43ನೇ ಪುಟದಿಂದ

## ಬೀದಿ ವ್ಯಾಪಾರಿಗಳ ಬೇಟೆ...

ಹೊಡೆತ ತಿನ್ನುತ್ತಿದ್ದಾರೆ ಎಂಬುದನ್ನು ಗಮನಿಸಬೇಕಾಗುತ್ತದೆ.

ಮಂಗಳೂರು ನಗರದಲ್ಲಿ ಕಾರ್ಪೊರೇಟ್ ಉದ್ಯಮಗಳು ಬೆಳೆಯುತ್ತಲೇ ಇವೆ. ದೊಡ್ಡ ದೊಡ್ಡ ಶ್ರೀಮಂತ ಕುಳಗಳು ನಡೆಸುವ ಶಾಪಿಂಗ್ ಮಾಲ್‌ಗಳಿಗೆ ಮನಪಾದ ಯಾವುದೇ ನೀತಿ ನಿಮಯಗಳು ಅನ್ವಯವಾಗುವುದೇ ಇಲ್ಲ. ಫುಟ್‌ಪಾತ್‌ಗಳನ್ನು ಆಕ್ರಮಿಸಿ ಮಾಲ್‌ಗಳನ್ನು ಕಟ್ಟಲಾಗುತ್ತದೆ. ನಗರದ ಪಿವಿಎಸ್, ಸರ್ವಿಸ್ ಬಸ್ ನಿಲ್ದಾಣದ ಸುತ್ತಮುತ್ತ ತಲೆ ಎತ್ತಿ ನಿಂತಿರುವ ಅನಧಿಕೃತ ಕಟ್ಟಡಗಳಿವೆ. ಆದರೆ ಮನಪಾ ಆಡಳಿತದ ಕಣ್ಣಿಗೆ ಇವುಗಳು ಅನಧಿಕೃತವೆಂದು ಯಾವತ್ತೂ ಕಂಡಿಲ್ಲ. ಇವುಗಳ ತೆರವಿಗೆ ಯಾವುದೇ ಕಾರ್ಯಾಚರಣೆಯನ್ನು ನಡೆಸಿಲ್ಲ. ಇದರಿಂದ ಒಂದು ಮಾತಂತೂ ಸ್ಪಷ್ಟವಾಗುತ್ತಿದೆ. ಏನೆಂದರೆ ನಗರದ ಸೌಂದರ್ಯವನ್ನು ಕಾಪಾಡಲು ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸುತ್ತಿಲ್ಲ. ಬದಲಾಗಿ ಮನಪಾ ಬೀದಿಬದಿ ವ್ಯಾಪಾರಿಗಳ ಗೋರಿಯ ಮೇಲೆ ಕಾರ್ಪೊರೇಟ್ ಉದ್ಯಮವನ್ನು ಬೆಳೆಸಲು ಯೋಜನೆ ರೂಪಿಸುತ್ತಿದೆ.

ಬೀದಿ ಬದಿ ವ್ಯಾಪಾರವೆಂಬುದು ಕೇವಲ ಮಂಗಳೂರಿನಲ್ಲಿ ಮಾತ್ರ ನಡೆಯುತ್ತಿಲ್ಲ. ಬದಲಾಗಿ ದೇಶದ ದೇಶದ ಒಟ್ಟು ಜನಸಂಖ್ಯೆಯ ಎರಡೂವರೆ ಶೇಕಡಾದಷ್ಟು ಮಂದಿ ಬೀದಿಬದಿ ವ್ಯಾಪಾರವನ್ನು ಅವಲಂಬಿಸಿ ಜೀವನ ನಿರ್ವಹಣೆ ಮಾಡುತ್ತಿದ್ದಾರೆ. ಕೇಂದ್ರ ಸರಕಾರದ ರಾಷ್ಟ್ರೀಯ ನೀತಿಯನ್ನು ಜಾರಿಗೆ ಅನುಷ್ಠಾನಗೊಳಿಸಿ ಮನಪಾ ಆಡಳಿತವು ಈಗಾಗಲೇ ಅತಂತ್ರರಾಗಿರುವ ಬೀದಿಬದಿ ವ್ಯಾಪಾರಿಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿಕೊಡಬೇಕು. ಅದೇ ರೀತಿ ಬೀದಿಬದಿ ವ್ಯಾಪಾರಿಗಳ ಹಿತರಕ್ಷಣೆಗಾಗಿ ಕ್ರಮಕೈಗೊಳ್ಳಲು ಕೇಂದ್ರವು ಕೂಡ ಕಟ್ಟುನಿಟ್ಟಿನಿಟ್ಟಿನ ಆದೇಶ ಹೊರಡಿಸಬೇಕು.

# ಆನೆ ದಾಳಿ

● ಶೌಕತ್ ಅಲಿ, ಎಸ್.



ರಾಜ್ಯದ ಜನತೆ ಬಿಜೆಪಿಯ ಆಡಳಿತದಿಂದ ರೋಸಿ ಹೋಗಿದ್ದಾರೆ. ಆಪರೇಷನ್ ಕಮಲ ನಡೆಸಿ, ಅಕ್ರಮವಾಗಿ ಚುನಾವಣೆಯನ್ನು ಗೆದ್ದುಕೊಂಡರೂ ನೆಮ್ಮದಿಯಿಂದ ಆಡಳಿತ ನಡೆಸಲು ಅದಕ್ಕೆ ಸಾಧ್ಯವಾಗುತ್ತಿಲ್ಲ. ಎಲ್ಲೆಂದರಲ್ಲಿ ಭಿನ್ನಮತೀಯರು, ಕೋರ್ಟು, ವಕೀಲರು, ಮಾಧ್ಯಮದವರ ಹಿಂಸೆಯಿಂದ ಕರ್ನಾಟಕದ ಮುಖ್ಯಮಂತ್ರಿ ಯಡಿಯೂರಪ್ಪ ರೋಸಿಹೋಗಿದ್ದರು. ಇದರ ಜೊತೆಗೇ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಒಂದೊಂದಾಗಿ ಬಯಲು ಮಾಡುತ್ತಿರುವ ತನ್ನ ಭ್ರಷ್ಟಾಚಾರದ ಕರ್ಮಕಾಂಡ. ಹೀಗೆ ಯಡಿಯೂರಪ್ಪರ ತಲೆಯಂತೂ ಗಂಟೆಗೆ 180 ಕಿ.ಮೀ. ವೇಗದಲ್ಲಿ ಸುತ್ತುತ್ತಿತ್ತು. ಕುಳಿತಲ್ಲಿಂದ ಎದ್ದೇಳಲಾಗದೆ, ಎದ್ದರೆ ಮಲಗಲಾಗದೇ ಮಾನಸಿಕವಾಗಿ ತೊಳಲಾಡುತಿದ್ದರು.

ಈಗ ಭಿನ್ನಮತೀಯರ ಕಾಟವಿಲ್ಲ. ಮಾಧ್ಯಮದವರಿಗೂ ಒಂದಿಷ್ಟು ಜಾಹೀರಾತು ಕೊಟ್ಟು ಜನರ ಕಣ್ಣೀರನ್ನು ಒರೆಸಿದರಾಯಿತು. ಆದರೆ ಈ ಕುಮಾರಸ್ವಾಮಿ ಲೌಡ್‌ಸ್ಪೀಕರ್‌ನಲ್ಲಿ ತನ್ನ ಜಾಯಮಾನವನ್ನು ಜಾಲಾಡುತ್ತಿದ್ದಾನಲ್ಲಾ ಎಂದು ಮುಖ್ಯಮಂತ್ರಿ ಚಿಂತಾಕ್ರಾಂತರಾಗಿ ವಿಲವಿಲನೆ ಒದ್ದಾಡುತ್ತಿದ್ದರು. ಹೇಗಾದರೂ ಮಾಡಿ ಈ ಕುಮಾರಸ್ವಾಮಿಯ ಬಾಯಿಯನ್ನು ಮುಚ್ಚಿಸಲೇಬೇಕು ಎಂದು ಯಡಿಯೂರಪ್ಪ ದೃಢ ನಿರ್ಧಾರ ಮಾಡಿಯೇ ಬಿಟ್ಟರು.

ಒಂದು ಸಲ ಕೇಶವ ಕೃಪಾಕ್ಕೆ ಹೋದರೆ ಅಲ್ಲಿಂದ ಸೀದಾ 'ಕೃಷ್ಣಾ'ಗೃಹಕ್ಕೆ ಬರುತ್ತಿದ್ದರು. ಆದರೂ ಯಾವುದೇ ಉಪಾಯಗಳು ಅವರ ಬೋಳು ತಲೆಗೆ ಹೊಳೆಯುತ್ತಿರಲಿಲ್ಲ. ತುಸು ಬಿಸಿಲಲ್ಲೇ ಓಡಾಡಿದ್ದರಿಂದ ಯಡಿಯೂರಪ್ಪರ ತಲೆಯಿಂದ ಬೆವರು ಆವಿಯಾಗಿ ಹೊಗೆಯಾಗಿ ಮೇಲಕ್ಕೆ ಹೋಗುತ್ತಿತ್ತು. ಈ ಸಂದರ್ಭ ಅವರ ಆಪ್ತ ಕಾರ್ಯದರ್ಶಿ ಕಾಗದವೊಂದನ್ನು ತಂದು ಅವರ ಕೈಗಿತ್ತ. ಮೊದಲೇ ತಲೆ ಇಡೀ ಕುಮಾರಸ್ವಾಮಿ ಓಡಾಡುತ್ತಿದ್ದಾರೆ. ಆ ಕಾಗದವನ್ನು ತೆರೆದು ನೋಡುವುದಾದರೂ ಹೇಗೆ ಎಂದು ತನ್ನ ಕಾರ್ಯದರ್ಶಿಗೇ ಹಿಂದಿರುಗಿಸಿದರು. ಆತ ಆ ಕಾಗದವನ್ನು ಬಿಡಿಸಿ ನೋಡಿದರೆ ಮೊದಲ ಪುಟದಲ್ಲಿ 'ಆನೆ'ಯ ಚಿತ್ರವೊಂದನ್ನು ದೊಡ್ಡದಾಗಿ ಅಂಟಿಸಲಾಗಿತ್ತು.

ಆಪ್ತ ಕಾರ್ಯದರ್ಶಿ ಆನೆ ಸಾರ್ ಆನೆ ಎಂದು ಯಡಿಯೂರಪ್ಪರೊಂದಿಗೆ ಹೇಳಿದ. ಮೈಸೂರಿಗೆ ಬಂದು ಕಾವಲುಗಾರನನ್ನು ಬಲಿ ತೆಗೆದುಕೊಂಡಿದ್ದ ಕಾಡಾನೆ ಇಲ್ಲಿಗೂ ಬಂದಿದಿಯೋ ಎಂದು ಯಡಿಯೂರಪ್ಪ ಭಯಭೀತರಾಗಿ ಬೆವರುತ್ತಿದ್ದ ಸಂದರ್ಭದಲ್ಲಿ ಕಾರ್ಯದರ್ಶಿ, ಸಾರ್ ಅದೇ ಮೊನ್ನೆ ಮೈಸೂರಿನಲ್ಲಿ ಬಂದ ಆನೆಯ ಫೋಟೊ ಎಂದ. ಹುಣಸೂರಿಗೆ ದಾಳಿ ನಡೆಸಿದ ಆನೆ ಒಬ್ಬನನ್ನು ಕೊಂದು ಹಾಕಿದೆ. ಅದಕ್ಕೆ ಆತನ

***ಯಡಿಯೂರಪ್ಪ ಕುಟುಂಬಕ್ಕೆ ಹಾಗೂ ಆಪ್ತರಿಗೆ ಅಪಾರ ಪ್ರಮಾಣದಲ್ಲಿ ಭೂಮಿಯನ್ನು ಹಂಚಿದ್ದಾರೆ. ಯಡಿಯೂರಪ್ಪ ನಡೆಸಿರುವ ಭ್ರಷ್ಟಾಚಾರ, ಸ್ವಜನಪಕ್ಷಪಾತ ಎಲ್ಲವನ್ನೂ ಈಗಾಗಲೇ ಮಾಧ್ಯಮಗಳು ವರದಿ ಮಾಡಿವೆ. ಜೊತೆಗೆ ಇಬ್ಬರು ನ್ಯಾಯವಾದಿಗಳು ಕೂಡ ಯಡಿಯೂರಪ್ಪ ವಿರುದ್ಧ ಮೊಕದ್ದಮೆ ದಾಖಲಿಸಲು ಹೈಕೋರ್ಟ್‌ಗೂ ಮನವಿ ಸಲ್ಲಿಸಿದ್ದರು. ಅಂದರೆ ಈಗಾಗಲೇ ಮುಖ್ಯಮಂತ್ರಿಯ ಭ್ರಷ್ಟಾಚಾರ ಸಾರ್ವಜನಿಕವಾಗಿ ಬಹಿರಂಗವಾಗಿದೆ. ಅದೂ ಅಲ್ಲದೆ ಮೊನ್ನೆ ಮೊನ್ನೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜೆ.ಎಸ್.ಖೇಹರ್ ಕೂಡ ಕರ್ನಾಟಕ ದೇಶದಲ್ಲಿ ನಂ.1 ಭ್ರಷ್ಟ ರಾಜ್ಯ ಎಂದು ಛೀಮಾರಿ ಹಾಕಿದ್ದಾರೆ.***

ಕುಟುಂಬಕ್ಕೆ ಪರಿಹಾರ ನೀಡಬೇಕಂತೆ ಎಂದು ಬರೆದಿದೆ ಸಾರ್ ಎಂಬ ಮಾತು ಕೇಳುವಷ್ಟರಲ್ಲಿ ಯಡಿಯೂರಪ್ಪರ ಮನಸ್ಸಿನೊಳಗೆ ಏನೋ ಒಂದು ಸಮಾಧಾನ ಎದ್ದು ಕಾಣುತ್ತಿತ್ತು. ಜೊತೆಗೆ ಮನಸ್ಸು ಸ್ವಲ್ಪ ಹಗುರವಾದಂತೆ ಕಂಡು ಬಂತು.

ಆನೆಯ ಫೋಟೋವನ್ನೊಮ್ಮೆ ಮನಸಾರೆ ನೋಡಿದ ಯಡಿಯೂರಪ್ಪ ಆ ಕಾಗದವನ್ನು ಕಸದ ಬುಟ್ಟಿಗೆ ಹಾಕುತ್ತಾ ತನ್ನ ಕಚೇರಿಯತ್ತ ನಡೆದರು. ತಕ್ಷಣ ಪತ್ರಿಕಾಗೋಷ್ಠಿಯನ್ನೂ ಕರೆದರು. ಈ ಪತ್ರಿಕಾಗೋಷ್ಠಿ ಇಡೀ ಕುಮಾರಸ್ವಾಮಿಯವರ ವಿರುದ್ಧವಾಗಿತ್ತು. ಕೊನೆಗೆ ತಾನು ಭ್ರಷ್ಟಾಚಾರ ನಡೆಸಿಲ್ಲ. ಅಂಥದ್ದೊಂದು ಇದ್ದರೆ ಕುಮಾರಸ್ವಾಮಿ ಧರ್ಮಸ್ಥಳಕ್ಕೆ ಬಂದು ಹೇಳಲಿ ಎಂದು ಕುಮಾರಸ್ವಾಮಿಯವರನ್ನು ಆಹ್ವಾನಿಸಿದರು. ಜೊತೆಗೆ ಪತ್ರಿಕೆಯೊಂದರಲ್ಲಿ ಜಾಹೀರಾತು ನೀಡಿ ಧರ್ಮಸ್ಥಳದ ಮಂಜುನಾಥನ ಸನ್ನಿಧಿಗೆ ಬಂದು ಆಣೆ ಮಾಡಲಿ ಎಂದು ಪಂಥಾಹ್ವಾನ ನೀಡಿದರು.

ಆ ಬಳಿಕ ಯಡಿಯೂರಪ್ಪ ತನ್ನ ಪಕ್ಷದ ಶಾಸಕರನ್ನು ಕರೆದು ಇನ್ನೇನಿದ್ದರೂ ನಾವು ಸಂವಿಧಾನ, ನ್ಯಾಯಾಂಗಕ್ಕೆ ಭಯಪಡಬೇಕಾಗಿಲ್ಲ. ತಾವು ತಪ್ಪೆಸಗಿದರೆ ಅದರಿಂದ ತಪ್ಪಿಸಿಕೊಳ್ಳಲು ನಾನೊಂದು ಹೊಸ ತಂತ್ರಜ್ಞಾನವನ್ನು ಕಂಡು ಹಿಡಿದಿದ್ದೇನೆ. ಅದೇ 'ದೇವರ ಮೇಲೆ ಆಣೆ' ಮಾಡುವುದು. ನಾವು ಯಾವ ಧಾರ್ಮಿಕ ಕ್ಷೇತ್ರದಲ್ಲಿ ಆಣೆ ಮಾಡುತ್ತೇವೆ ಎಂದು ಹೇಳುತ್ತೇವೆಯೋ ಅಲ್ಲಿಗೆ ಹೊಸ ತಂತ್ರಜ್ಞಾನ ವಿಗ್ರಹವನ್ನು ಕೊಂಡೊಯ್ಯುವುದು. ಈಗ ಉದಾಹರಣೆಗೆ ಧರ್ಮಸ್ಥಳಕ್ಕೆ ಹೋಗಿ ಆಣೆ ಮಾಡುವುದು ಅಂತ ಇಟ್ಟುಕೊಳ್ಳಿ. ಅಲ್ಲಿ ಮಂಜುನಾಥನಿದ್ದಾನೆ. ನೂತನ ತಂತ್ರಜ್ಞಾನವನ್ನು ಅಳವಡಿಸಿರುವ ಮಂಜುನಾಥನ ವಿಗ್ರಹವನ್ನು ಅಲ್ಲಿಗೆ ಕೊಂಡೊಯ್ಯುವುದು. ನಾವು ತಪ್ಪೆಸಗಿದ್ದರೂ ದೇವರ ಮೇಲೆ ಆಣೆ ಮಾಡಿ ನಾವು ತಪ್ಪೇ ಮಾಡಿಲ್ಲ ಎಂದು ಹೇಳುವುದು. ನಮ್ಮ ತಂತ್ರಜ್ಞಾನದಿಂದ ಕೂಡಿದ ವಿಗ್ರಹ ಇವರು ನಿರಪರಾಧಿಗಳು ಎಂದು ತಿಳಿಸಿ ನಮಗೆ ಆಶೀರ್ವದಿಸುತ್ತದೆ. ಇದರಿಂದಾಗಿ ಜನ ನಮ್ಮನ್ನು ತಪ್ಪಿತಸ್ಥರೆಂದು ಭಾವಿಸುವುದಿಲ್ಲ ಎಂದು ತನ್ನ ನೂತನ ತಂತ್ರವನ್ನು ಸಭೆಯ ಮುಂದಿರಿಸಿದರು.

ಇತ್ತ ಆಣೆ ರಾಜಕೀಯಕ್ಕೆ ಇನ್ನಿಲ್ಲದ ಪ್ರಚಾರ ದೊರೆಯಿತು. ಇನ್ನೇನಿದ್ದರೂ ಯಡಿಯೂರಪ್ಪ ಧರ್ಮಸ್ಥಳಕ್ಕೆ ಹೋಗುವುದು ಖಚಿತವಾಯಿತು. ಮಾಧ್ಯಮಗಳಲ್ಲಿ ಆಣೆ ರಾಜಕೀಯಕ್ಕೆ ಸಂಬಂಧಿಸಿದ ವಿಷಯಗಳ ಬಿಸಿ ಬಿಸಿ ಸುದ್ದಿಗಳು ಬಿತ್ತರವಾಗತೊಡಗಿದಂತೆ ವೀರೇಂದ್ರ ಹೆಗ್ಗಡೆ ಹೌಹಾರಿದರು. ಭ್ರಷ್ಟಾಚಾರ ಕಳಂಕದಿಂದ ಮುಕ್ತರಾಗಲು ಯಡಿಯೂರಪ್ಪ ಧರ್ಮಸ್ಥಳಕ್ಕೆ ಆಗಮಿಸುವುದೇ? ಈಗಾಗಲೇ ಮುಖ್ಯಮಂತ್ರಿಯಡಿಯೂರಪ್ಪ ನಡೆಸಿರುವ ಹಗರಣಗಳೆಲ್ಲಾ ಮಾಧ್ಯಮಗಳಲ್ಲಿ ಪ್ರಕಟವಾಗಿ ಬಟಾಬಯಲಾಗಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಈ ಮೊದಲೇ ಡಿನೋಫಿಕೇಶನ್ ಮಾಡಿ ಬೆಂಗಳೂರು, ಶಿವಮೊಗ್ಗ ಇತರೆಡೆಗಳಲ್ಲಿ ಅಕ್ರಮವಾಗಿ ಭೂಮಿಯನ್ನು ನುಂಗಿ ಹಾಕಿದ್ದಾರೆ. ತನ್ನ ಮಗ ಬಿ.ಎಸ್.ರಾಘವೇಂದ್ರ ಮತ್ತು ಪುತ್ರಿ ಅರುಣಾದೇವಿ ಭೂ ಹಗರಣ ಪ್ರಕರಣದಲ್ಲಿ ಸಿಲುಕಿದ್ದಾರೆ.

ಹೀಗೆ ಯಡಿಯೂರಪ್ಪ ಕುಟುಂಬಕ್ಕೆ ಹಾಗೂ ಆಪ್ತರಿಗೆ ಅಪಾರ ಪ್ರಮಾಣದಲ್ಲಿ ಭೂಮಿಯನ್ನು ಹಂಚಿದ್ದಾರೆ. ಯಡಿಯೂರಪ್ಪ ನಡೆಸಿರುವ ಭ್ರಷ್ಟಾಚಾರ, ಸ್ವಜನಪಕ್ಷಪಾತ ಎಲ್ಲವನ್ನೂ ಈಗಾಗಲೇ ಮಾಧ್ಯಮಗಳು ವರದಿ ಮಾಡಿವೆ. ಜೊತೆಗೆ ಜೊತೆಗೆ ಇಬ್ಬರು ನ್ಯಾಯವಾದಿಗಳು ಕೂಡ ಯಡಿಯೂರಪ್ಪ ವಿರುದ್ಧ ಮೊಕದ್ದಮೆ ದಾಖಲಿಸಲು ಹೈಕೋರ್ಟ್‌ಗೂ ಮನವಿ ಸಲ್ಲಿಸಿದ್ದರು. ಅಂದರೆ ಈಗಾಗಲೇ ಮುಖ್ಯಮಂತ್ರಿಯ ಭ್ರಷ್ಟಾಚಾರ ಸಾರ್ವಜನಿಕವಾಗಿ ಬಹಿರಂಗವಾಗಿದೆ. ಅದೂ ಅಲ್ಲದೆ ಮೊನ್ನೆ ಮೊನ್ನೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಜೆ.ಎಸ್.ಖೇಹರ್ ಕೂಡ ಕರ್ನಾಟಕ ದೇಶದಲ್ಲಿ ನಂ.1 ಭ್ರಷ್ಟ ರಾಜ್ಯ ಎಂದು ಛೀಮಾರಿ ಹಾಕಿದ್ದಾರೆ. ಇಷ್ಟೊಂದು ಕಳಂಕ ಮೈ ಅಂಟಿಸಿಕೊಂಡಿರುವ ಯಡಿಯೂರಪ್ಪ ಇನ್ನು ಧರ್ಮಸ್ಥಳಕ್ಕೆ ಬಂದು ಮಂಜುನಾಥನ ಮರ್ಯಾದೆ ತೆಗೆಯಬಹುದು ಎಂದು ವೀರೇಂದ್ರ ಹೆಗ್ಗಡೆ ಪರೋಕ್ಷವಾಗಿ ವಿರೋಧ ವ್ಯಕ್ತಪಡಿಸತೊಡಗಿದರು.

ಯಡಿಯೂರಪ್ಪ ತನ್ನ ಮನೆಯ ಕಿಟಕಿ ಬಾಗಿಲುಗಳನ್ನು ತೆರೆದರೆ ಪ್ರತಿಭಟನಕಾರರೇ ಕಾಣಿಸುತ್ತಿದ್ದರು. ಆಣೆ ಪ್ರಹಸನಕ್ಕೆ ಸಂಬಂಧಿಸಿ ಸ್ವತಃ ಬಿಜೆಪಿಯವರೇ ವಿರೋಧಿಸಿದರು. ಅಲ್ಲಲ್ಲಿ ಪ್ರತಿಭಟನೆಗಳು ನಡೆದವು. ಕೆಲವು ಕಡೆಗಳಲ್ಲಿ ನಾಗರಿಕರು ತಾವು ಇಂತಹ ಹೀನ

ಮನೋಸ್ಥಿತಿಯ ರಾಜಕಾರಣಿಗಳನ್ನು ಆರಿಸಿ ಕಳುಹಿಸಿಕ್ಕಾಗಿ ತಪ್ಪು ಕಾಣಿಕೆ ಸಂಗ್ರಹ ಮತ್ತು ಪ್ರಾಯಶ್ಚಿತ ಮೆರವಣಿಗೆ ನಡೆಸಿದರು. ಹೀಗೆ ಎಲ್ಲಾ ಕಡೆಗಳಿಂದಲೂ ವಿರೋಧ ವ್ಯಕ್ತವಾದಾಗ ಯಡಿಯೂರಪ್ಪ ಪೇಚಿಗೆ ಸಿಲುಕಿದರು. ತಾನು ಈ ಹಿಂದೆ ಮಾಡಿದ ಪಂಥಾಹ್ವಾನ ಹಿಂಪಡೆದರೆ ಮಾನ ಮರ್ಯಾದೆ ಹೋಗುತ್ತದೆ ಎಂದು ಮನಸ್ಸಿನೊಳಗೆ ಚಿಂತಿಸುತ್ತಿದ್ದ ಯಡಿಯೂರಪ್ಪ ಈ ಆಣೆ ಪ್ರಕರಣವನ್ನು ಹೇಗಾದರೂ ಇತ್ಯರ್ಥಗೊಳಿಸಿ ಬಿಡಬೇಕೆಂದು ತಲೆ ಕೆರೆದುಕೊಳ್ಳುತ್ತಾ ಹೊಸ ಐಡಿಯಾಗಳನ್ನು ಹುಡುಕುತ್ತಿದ್ದರು.

ಅಷ್ಟರಲ್ಲಿ ಆಸ್ತಾ ಟಿವಿ ಚಾನೆಲ್‌ನಲ್ಲಿ ರಾಮ್‌ದೇವ್ ಪ್ರತ್ಯಕ್ಷವಾಗಿ ಜನರಿಗೆ ಬಿಟ್ಟಿ ಉಪದೇಶಗಳನ್ನು ನೀಡುತ್ತಿದ್ದ. ಥಟ್ಟನೆ ಯಡಿಯೂರಪ್ಪರಿಗೆ ತಂತ್ರ ಹೊಳೆಯಿತು. ಭ್ರಷ್ಟಾಚಾರದ ವಿರುದ್ಧ ಹೋರಾಟ ಎಂದು ಜನರನ್ನು ಮರಳು ಮಾಡಿ ಸಂವಿಧಾನ ವಿರೋಧಿ ಹೇಳಿಕೆಗಳನ್ನು ನೀಡುತ್ತಾ ಸರಕಾರಕ್ಕೆ ಬೆದರಿಕೆಯೊಡ್ಡಿದ್ದ ಬಾಬಾ ರಾಮ್‌ದೇವ್, ತನ್ನ ಉಪವಾಸ ಸತ್ಯಾಗ್ರಹ ತಾನಾಗಿಯೇ ಹಿಂಪಡೆದುಕೊಂಡರೆ ತನ್ನ ಇಮೇಜಿಗೆ ಕುತ್ತು ಎಂದು ಶ್ರೀ ಶ್ರೀ ರವಿಶಂಕರ್ ಸಲಹೆಯ ಮೇರೆ ತಾನು ಉಪವಾಸ ಸತ್ಯಾಗ್ರಹವನ್ನು ಕೊನೆಗೊಳಿಸುತ್ತಿದ್ದೇನೆ ಎಂದು ರವಿಶಂಕರ್ ಕೈಯಿಂದ ಜ್ಯೂಸ್ ಕುಡಿದು ಹೋರಾಟಕ್ಕೆ ಇತಿಶ್ರೀ ಹಾಡಿದ್ದ ಎಂಬುದನ್ನು ನೆನಪಿಸಿಕೊಂಡರು.

ತನ್ನ ಆಣೆ ರಾಜಕೀಯ ಮುಕ್ತಾಯಗೊಳಿಸಲು ಇದೇ ಒಳ್ಳೆಯ ತಂತ್ರ ಎಂದು ಯಡಿಯೂರಪ್ಪ ಮುಂದಿನ ಕಾರ್ಯಯೋಜನೆಗೆ ಸಿದ್ಧರಾದರು. ಪೇಜಾವರ ಶ್ರೀಗಳೊಂದಿಗೆ ತಮ್ಮ ಆರ್ತನಾದವನ್ನು ತೋಡಿಕೊಂಡರು. ಮಠ ಮಾನ್ಯಗಳಿಗೆ ಬೇಕಾಬಿಟ್ಟಿ ಅನುದಾನವನ್ನು ನೀಡುವ ಇಂತಹವರನ್ನು ಕೈಬಿಡುವುದು ಉಚಿತವಲ್ಲ ಎಂದುಕೊಂಡ ಪೇಜಾವರ ಸ್ವಾಮಿ ಆಣೆ ರಾಜಕೀಯದ ರಂಗಕ್ಕೆ ಧುಮುಕಿದರು. ಪೇಜಾವರ ಸ್ವಾಮೀಜಿ ಯಡಿಯೂರಪ್ಪರಿಗೆ ಕೆಲವೊಂದು ಉಪದೇಶಗಳನ್ನೂ, ಸಲಹೆಗಳನ್ನು ನೀಡಿದರು. ಧರ್ಮಸ್ಥಳಕ್ಕೆ ಹೋಗಿ ಆಣೆ ಮಾಡುವ ಪ್ರಹಸನವನ್ನು ಬದಲಿಸಲು ತನ್ನ ರಾಜಗುರು ತನಗೆ ಸಲಹೆ ನೀಡಿದ್ದಾರೆ. ಅವರ ಮಾತನ್ನು ಯಾವತ್ತೂ ಮೀರುವುದಿಲ್ಲ. ಅವರ ಮಾತಿಗೆ ಬೆಲೆ ಕೊಡುತ್ತೇನೆ ಎಂದು ತನ್ನ ಆಣೆ ರಾಜಕೀಯವನ್ನು ಉಪಸಂಹಾರ ಮಾಡುವ ಸೂಚನೆಯನ್ನು ನೀಡಿದರು.



19ನೇ ಪುಟದಿಂದ



## ತರ್ಕಕ್ಕೆ ನಿಲುಕದ ಮಾದರಿ ಟರ್ಕಿ

ಟರ್ಕಿಯ ಜನತೆಯ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗೋಪಾಯಗಳು ಉರ್ದುಗಾನ್‌ರ ಚಿಂತನಧಾರೆಯಲ್ಲಿತ್ತೇ ವಿನಹ ಅತಾತುರ್ಕ್‌ರ ಪಾಶ್ಚಿಮಾತ್ಯ ಪ್ರೇರೇಪಿತ ಜಾತ್ಯತೀತತೆಯಲ್ಲಿ ಅಲ್ಲ.

ಪಾಶ್ಚಿಮಾತ್ಯರ ಏಜೆಂಟ್ ಆಗಿದ್ದ ಅತಾತುರ್ಕ್‌ರ ಇಸ್ಲಾಮೀ ವಿರೋಧಿ ನೀತಿಯಿಂದಾಗಿ ಟರ್ಕಿಯು ಜಾಗತಿಕ ಮುಸ್ಲಿಮ್ ಸಮುದಾಯದಿಂದ ದೂರವಾಗಿತ್ತು. ಆದರೆ ಆಧುನಿಕ ಟರ್ಕಿಯ ನಿರ್ಮಾಪಕ ದಿ.ನಝ್ಮುದ್ದೀನ್ ಅರ್ಬಕಾನ್ ಟರ್ಕಿಯನ್ನು ಮುಸ್ಲಿಮ್ ಜಗತ್ತಿಗೆ ಹತ್ತಿರ ತಂದರು. ಅರ್ಬಕಾನ್ ಶಿಷ್ಯರಾದ AKP ಪಕ್ಷದ ತಯ್ಯಿಬ್ ಉರ್ದುಗಾನ್‌ರವರು ಟರ್ಕಿಯನ್ನು ಸಂಪೂರ್ಣವಾಗಿ ಮುಸ್ಲಿಮ್ ರಾಷ್ಟ್ರಗಳ ಸಾಲಿಗೆ ಬರುವಂತೆ ಮಾಡುತ್ತಿದ್ದಾರೆ.

ಇತಿಹಾಸ

1923ರಲ್ಲಿ ಟರ್ಕಿಯ ಉಸ್ಮಾನಿಯ ಖಿಲಾಫತ್‌ನ ಕೊನೆಯ ಸುಲ್ತಾನ್ ಅಬ್ದುಲ್ ವಹೀದ್ ಖಾನ್ ಟರ್ಕಿಯನ್ನು ಬಿಟ್ಟು ಬ್ರಿಟಿಷರ ಹಡಗಿನಲ್ಲಿ ಮಾಲ್ಟಾಕ್ಕೆ ಹೋದರು. ಆ ತನಕ ಬಹುತೇಕ ಮುಸ್ಲಿಮ್ ರಾಜರುಗಳು, ಅರಬ್ ಆಡಳಿತಾಧಿಕಾರಿಗಳೆಲ್ಲರೂ ಟರ್ಕಿಯನ್ನು ಜಾಗತಿಕ ಮುಸ್ಲಿಮ್ ಸಮುದಾಯ ಖಿಲಾಫತ್ ಕೇಂದ್ರವೆಂದು ಒಪ್ಪಿದ್ದರು. ಇಂದು ಅದೇ ರಾಷ್ಟ್ರ ಹರಿದುಹಂಚಾಗಿ ಒಟ್ಟು 56 ಸ್ವತಂತ್ರ ಮುಸ್ಲಿಮ್ ರಾಷ್ಟ್ರಗಳಾಗಿ ವಿಭಜನೆಗೊಂಡಿವೆ. 19ನೇ ಶತಮಾನದಲ್ಲಿ ಜಾಗತಿಕ ಯುದ್ಧದ ಅವಧಿಯಲ್ಲಿ ಟರ್ಕಿಯ ಖಿಲಾಫತ್ ದುರ್ಬಲವಾಗುತ್ತಿದ್ದವು.

ಪಾಶ್ಚಿಮಾತ್ಯರ ಏಜೆಂಟ್ ಮತ್ತು ಪಕ್ಕಾ ಇಸ್ಲಾಮ್ ವಿರೋಧಿ ಮುಸ್ತಫಾ ಕಮಾಲ್ ಅತಾತುರ್ಕ್ ನೇತೃತ್ವದಲ್ಲಿ 1919ರಿಂದ 1924ರ ತನಕ ಟರ್ಕಿ ರಾಷ್ಟ್ರೀಯ ಚಳವಳಿಗಳು ನಡೆದವು. ಕೊನೆಗೆ 1924ರಲ್ಲಿ ಟರ್ಕಿಯ ಅಧಿಕಾರ ಅತಾತುರ್ಕ್‌ರ ಕೈವಶವಾಯಿತು. ಜಾಗತಿಕ ಮುಸ್ಲಿಮ್ ಸಮುದಾಯ ಮತ್ತು ಇಸ್ಲಾಮ್ ಧರ್ಮದಿಂದ ಟರ್ಕಿಯನ್ನು ಸಂಪೂರ್ಣವಾಗಿ ಬದಲಿಸಿದ ಅಪಕೀರ್ತಿ ಅತಾತುರ್ಕ್‌ಗೆ ಸಲ್ಲುತ್ತದೆ. ಅತಾತುರ್ಕ್ ಅವಧಿಯಲ್ಲಿ ಸಾವಿರಾರು ಮುಸ್ಲಿಮ್ ಧಾರ್ಮಿಕ ನಾಯಕರನ್ನು ಕೊಲೆ ಮಾಡಲಾಯಿತು. ಸಾರ್ವಜನಿಕವಾಗಿ ಅಝಾನ್ ಕರೆ ನೀಡುವಂತಿರಲಿಲ್ಲ. ಪರ್ದಾ ಮಾತ್ರವಲ್ಲ ಮುಸ್ಲಿಮ್ ಮಹಿಳೆಯರು ತಲೆಗೆ ಸ್ಕಾರ್ಫ್ ಧರಿಸುವುದಕ್ಕೂ ನಿಷೇಧ. ಇದರ ಪರಿಣಾಮವಾಗಿ ಟರ್ಕಿಯಲ್ಲಿ ಇಸ್ಲಾಮ್ ಮತ್ತು ಮುಸ್ಲಿಮ್ ಸಮಾಜದ ಯಾವುದೇ ಗಂಧಗಾಳಿ ಇಲ್ಲದ ಹೊಸ ಪೀಳಿಗೆ ಬೆಳೆದು ಬಂತು.

ಟರ್ಕಿಯಲ್ಲಿ ಖಿಲಾಫತ್ ಅಥವಾ ಇಸ್ಲಾಮೀ ಆಡಳಿತ ಪುನಃ ಸ್ಥಾಪಿಸಲು ಅಲ್ಲಲ್ಲಿ ಸಣ್ಣ ಪುಟ್ಟ ಪ್ರಯತ್ನಗಳು ನಡೆಯುತ್ತಿದ್ದವು. ಭಾರತದಲ್ಲಿಯೂ ಅಲೀ ಸಹೋದರರು ಮತ್ತು ಧಾರ್ಮಿಕ ಪಂಡಿತರು ಸೇರಿ ಖಿಲಾಫತ್ ಚಳವಳಿ 1920ರಲ್ಲಿಯೇ ಆರಂಭಿಸಿದ್ದರು. ಅಂದಿನ ಮಹಾತ್ಮ ಗಾಂಧೀಜಿಯ ನೇತೃತ್ವದ ಕಾಂಗ್ರೆಸ್ ಪಕ್ಷವೂ ಖಿಲಾಫತ್ ಚಳವಳಿಗೆ ಬೆಂಬಲ ವ್ಯಕ್ತಪಡಿಸಿತ್ತು. ಸ್ವರಾಜ್ಯ ಮತ್ತು ಖಿಲಾಫತ್ ಚಳವಳಿಗಳು ಒಂದಾಗಿ ನಡೆದಿದ್ದವು. ಇದು ಭಾರತದ ಸ್ವಾತಂತ್ರ್ಯ ಸಂಗ್ರಾಮವನ್ನು ಮತ್ತಷ್ಟು ಬಲಗೊಳಿಸಿತ್ತು. ಕ್ರಮೇಣ ಹಿಂದೂ-ಮುಸ್ಲಿಮ್ ಬಾಂಧವರ ಮಧ್ಯೆ ಅಪನಂಬಿಕೆ ತರುವಲ್ಲಿ ಬ್ರಿಟಿಷರು ಯಶಸ್ವಿಯಾದರು. ಇದರೊಂದಿಗೆ ಖಿಲಾಫತ್ ಚಳವಳಿ ವಿಫಲವಾಯಿತು.

**ನಝ್ಮುದ್ದೀನ್ ಅರ್ಬಕಾನ್:** ನಝ್ಮುದ್ದೀನ್ ಅರ್ಬಕಾನ್‌ರವರು ಟರ್ಕಿಯ ಸುಧಾರಣೆ ಮತ್ತು ಟರ್ಕಿಯ ಗತ ಇಸ್ಲಾಮೀ ವೈಭವವನ್ನು ಮತ್ತೆ ಸ್ಥಾಪಿಸಲು ಯತ್ನಿಸಿದ ಖಿಲಾಫತ್ ಹೋರಾಟಗಾರ.

1960ರಲ್ಲಿ ಅರ್ಬಕಾನ್ ಹೋರಾಟದ ರಂಗಕ್ಕಿಳಿದರು. ಉಸ್ಮಾನಿಯಾ ಖಿಲಾಫತ್ ಅವಧಿಯಲ್ಲಿ ನ್ಯಾಯಾಲಯದ ಖಾಝಿಯವರ ಪುತ್ರರಾಗಿ ಅರ್ಬಕಾನ್ ಜನಿಸಿದರು. ಮೆಕ್ಯಾನಿಕಲ್ ಇಂಜಿನಿಯರ್ ಶಿಕ್ಷಣ ಪಡೆದು ಅನಂತರ ಪಿಎಚ್‌ಡಿಯನ್ನೂ ಪಡೆದರು. ಸ್ವತಃ ಒಂದು ಮೆಕ್ಯಾನಿಕ್ ಕಾರ್ಖಾನೆ ಸ್ಥಾಪಿಸಿ ಯಶಸ್ಸು ಕಂಡರು. ಉದ್ಯಮ ರಂಗದಲ್ಲಿ ಬೆಳೆದು ನಿಂತ ಅರ್ಬಕಾನ್, ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷರಾಗಿ ಆಯ್ಕೆಯಾದರು.

ಅತಾತುರ್ಕ್‌ರ ಪಾಶ್ಚಾತ್ಯ ಶೈಲಿಯ ಆಡಳಿತದಿಂದ ಮುಕ್ತಿಗೊಳಿಸಿ ಟರ್ಕಿಯಲ್ಲಿ ಗತವೈಭವವನ್ನು ಮರುಸ್ಥಾಪಿಸುವ ಪ್ರಕ್ರಿಯೆಗೆ ಚಾಲನೆ ನೀಡುವ ಸಲುವಾಗಿ ಅರ್ಬಕಾನ್, 'ಮಿಲ್ಲಿ ಮಿಶನ್' ಎಂಬ ಪತ್ರಿಕೆ ಆರಂಭಿಸಿದರು. ಅದು ಆಧುನಿಕ ಟರ್ಕಿಯ ಸಮಸ್ಯೆಗಳಿಗೆ ಇಸ್ಲಾಮೀ ನೆಲೆಗಟ್ಟಿನ ಪರಿಹಾರವೇನು ಎಂಬುದನ್ನು ಪ್ರಚುರಪಡಿಸಿತು. ಈ ಪತ್ರಿಕೆಯ ಓದುಗರನ್ನೆಲ್ಲ ಸಂಘಟಿಸಿ ವೈಚಾರಿಕ ತಳಹದಿಯ ಒಂದು ರಾಜಕೀಯ ಶಕ್ತಿ ಕಟ್ಟಲು ಅರ್ಬಕಾನ್ ಶ್ರಮಿಸಿದರು.

1970ರಲ್ಲಿ ಮೊದಲ ಬಾರಿಗೆ ಟರ್ಕಿಯಲ್ಲಿ ಅರ್ಬಕಾನ್ ಮಿಲ್ಲಿ ನಿಝಾಮಿ ಪಕ್ಷವನ್ನು ಸ್ಥಾಪಿಸಿ ಚುನಾವಣೆಗೆ ಸ್ಪರ್ಧಿಸಿದರು. ಈ ಪಕ್ಷ ಸ್ವಲ್ಪ ಮಟ್ಟಿಗೆ ಮತಗಳನ್ನು ಗಳಿಸಿತ್ತಾದರೂ ಮುಂದೆ ಈ ಪಕ್ಷವನ್ನು ಇಸ್ಲಾಮೀ ಮೂಲಭೂತವಾದವನ್ನು ಬೆಂಬಲಿಸುತ್ತದೆ ಎಂಬ ಆರೋಪ ಹೊರಿಸಿ ನಿಷೇಧಿಸಲಾಯಿತು.

ಬಳಿಕ ಅರ್ಬಕಾನ್ ಮಿಲ್ಲಿ ಸಲಾಮತ್ ಪಕ್ಷ ಕಟ್ಟಿದರು. 1974ರ ಸಾರ್ವತ್ರಿಕ ಚುನಾವಣೆಯಲ್ಲಿ ಈ ಪಕ್ಷಕ್ಕೆ ಶೇ.12ರಷ್ಟು ಮತ ಲಭಿಸಿ 48 ಮಂದಿ ಸಂಸದರು ಆಯ್ಕೆಯಾದರು. ಸಮ್ಮಿಶ್ರ ಸರಕಾರದಲ್ಲಿ ಅರ್ಬಕಾನ್‌ರಿಗೆ ಉಪಪ್ರಧಾನಿ ಪಟ್ಟ ದೊರೆಯಿತು. ಇಲ್ಲಿಂದ ಟರ್ಕಿಯ ಸುಧಾರಣೆ ಆರಂಭಗೊಂಡಿತು.

ಉಪಪ್ರಧಾನಿಯಾಗಿ ಅರ್ಬಕಾನ್ ದೇಶವನ್ನು ಆರ್ಥಿಕ ಸ್ವಾವಲಂಬನೆಯತ್ತ ಕೊಂಡೊಯ್ದರು. ದೇಶಕ್ಕೆ ಅತ್ಯುತ್ತಮ ಆಡಳಿತ ನೀಡುವುದರೊಂದಿಗೆ ಜಾತ್ಯತೀತ ಸೋಗಿನ ಪಕ್ಷವು ದುರ್ಬಲಗೊಳ್ಳತೊಡಗಿತು. ಅಧಿಕಾರ ಮತ್ತು ಒಟ್ಟು ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತಿದ್ದ ಪಟ್ಟಭದ್ರರನ್ನು ಅರ್ಬಕಾನ್ ಹದ್ದುಬಸ್ತಿನಲ್ಲಿಟ್ಟರು. ಮಧ್ಯಮವರ್ಗದ ವ್ಯಾಪಾರಿಗಳಿಗೆ ಪ್ರೋತ್ಸಾಹ ನೀಡಿದರು. ಬಂಡವಾಳಶಾಹಿಗಳಿಗೆ ಅರ್ಬಕಾನ್ ತಲೆನೋವಾಗಿ ಪರಿಣಮಿಸಿದರು. ಕೇವಲ ಒಂದೇ ವರ್ಷದಲ್ಲಿ ಅರ್ಬಕಾನ್ ಜನಪ್ರಿಯ ನಾಯಕರಾಗಿ ಬೆಳೆದುಬಿಟ್ಟಿದ್ದರು. ಇದರ ವಿರುದ್ಧ ಷಡ್ಯಂತ್ರ ನಡೆಸಿದ ಪಾಶ್ಚಿಮಾತ್ಯ ಶಕ್ತಿಗಳು ಅರ್ಬಕಾನ್‌ರನ್ನು ಪದಚ್ಯುತಗೊಳಿಸಿದರು.

1983ರಲ್ಲಿ ಅರ್ಬಕಾನ್ ರಫಾ ಅಥವಾ ವೆಲ್ಫೇರ್ ಪಕ್ಷವನ್ನು ಸ್ಥಾಪಿಸಿದರು. 1996ರ ಟರ್ಕಿಯ ಚುನಾವಣೆಯಲ್ಲಿ ಒಟ್ಟು 550 ಸಂಸದರ ಪೈಕಿ 181 ಮಂದಿ ರಫಾ ಪಕ್ಷದಿಂದ ಚುನಾಯಿತರಾದರು. ಅಲ್ಲಿ ಮತ್ತೆ ಸಮ್ಮಿಶ್ರ ಸರಕಾರ ಅನಿವಾರ್ಯವಾಯಿತು. ನಜ್ಮುದ್ದೀನ್ ಅರ್ಬಕಾನ್‌ರವರಿಗೆ ಪ್ರಧಾನಿ ಹುದ್ದೆ ದೊರೆಯಿತು. ಈ ಅವಧಿಯಲ್ಲಿ ಅವರು ಮುಸ್ಲಿಮ್ ಮತ್ತು ಅರಬ್ ರಾಷ್ಟ್ರಗಳೊಂದಿಗೆ ಸಂಬಂಧ ಬೆಳೆಸಿ ಡಿ-8 ಎಂಬ ಆಯ್ದ ಮುಸ್ಲಿಮ್ ರಾಷ್ಟ್ರಗಳ ಒಕ್ಕೂಟ ರಚಿಸುವಲ್ಲಿ ಯಶಸ್ವಿಯಾದರು. ಆದರೆ ಪಾಶ್ಚಿಮಾತ್ಯ ಪ್ರೇರಿತ ಷಡ್ಯಂತ್ರಗಳು ನಡೆಯುತ್ತಲೇ ಇದ್ದವು. ಅರ್ಬಕಾನ್‌ರನ್ನು ಮಟ್ಟ ಹಾಕುವುದಕ್ಕಾಗಿ ಟರ್ಕಿಯ ಸೇನಾ ನ್ಯಾಯಾಲಯವು ರಫಾ ಪಕ್ಷ ಪಕ್ಷದ ಮೇಲೆ ನಿಷೇಧ ಹೇರಿತು. ಆದರೆ ತಮ್ಮ ಪ್ರಯತ್ನವನ್ನು ಮುಂದುವರಿಸಿದ ಅರ್ಬಕಾನ್ 1997ರಲ್ಲಿ ಫಝೀಲತಿ ಪಕ್ಷ ಸ್ಥಾಪಿಸಿದರು. 2001ರಲ್ಲಿ ಈ ಪಕ್ಷದ ಮೇಲೂ ನಿಷೇಧ ಹೇರಲಾಯಿತು. 2003ರಲ್ಲಿ ಸಾದತ್ ಪಕ್ಷ ಸ್ಥಾಪಿಸಿದರು.

ಈ ರೀತಿ ಹಲವು ಅಡೆತಡೆಗಳನ್ನು ಎದುರಿಸಿದ ಹೊರತಾಗಿಯೂ ರಾಜಕೀಯ ಹೋರಾಟವನ್ನು ನಡೆಸಿದ ಅರ್ಬಕಾನ್ 2011ರ ಫೆಬ್ರವರಿಯಲ್ಲಿ ನಿಧನ ಹೊಂದಿದರು.

ಈಗ ಅಧಿಕಾರದಲ್ಲಿರುವ ಎ.ಕೆ.ಪಿ. ಪಕ್ಷವು ಅರ್ಬಕಾನ್‌ರ ಸಿದ್ಧಾಂತವನ್ನು ಪ್ರತಿನಿಧಿಸುತ್ತಿದೆ. ಆದರೆ ಈ ಪಕ್ಷದಲ್ಲಿ ಇತರ ಸಣ್ಣಪುಟ್ಟ ಇಸ್ಲಾಮೀ ಪಕ್ಷಗಳು ವಿಲೀನಗೊಂಡು ಬೃಹತ್ ರಾಜಕೀಯ ಶಕ್ತಿಯಾಗಿ ಹೊರಹೊಮ್ಮಿದೆ. ಚುನಾವಣೆಯಲ್ಲಿ ಗೆದ್ದುಬಂದು ಇದೀಗ ಪ್ರಧಾನಿಯಾಗಿ ಮತ್ತೊಮ್ಮೆ ಅಧಿಕಾರ ಸ್ವೀಕರಿಸಿರುವ ಉರ್ದುಗಾನ್ ಅವರು ನಜ್ಮುದ್ದೀನ್ ಅರ್ಬಕಾನ್‌ರವರ ಶಿಷ್ಯ.

ತಯ್ಯಿಬ್ ಉರ್ದುಗಾನ್

ಉರ್ದುಗಾನ್ ನೇತೃತ್ವದ ಎ.ಕೆ.ಪಿ. ಪಕ್ಷ ಮೂರನೆ ಬಾರಿ ಜಯ ಸಾಧಿಸಿದೆ. ಟರ್ಕಿ ಸೇನೆಯ ಉಗ್ರ ಜಾತ್ಯತೀತ ನಿಲುವಿನ ಮಧ್ಯಮ ದರ್ಜೆಯ ಅಧಿಕಾರಿಗಳು ಉರ್ದುಗಾನ್ ಸರಕಾರವನ್ನು ಅಸ್ಥಿರಗೊಳಿಸಲು ಹಲವು ಬಾರಿ ಪ್ರಯತ್ನಿಸಿದರು. ಆದರೆ ಟರ್ಕಿಯ ಜನಸಮೂಹ ಎ.ಕೆ. ಪಕ್ಷಕ್ಕೆ ಅಭೂತಪೂರ್ವ ಜನಬೆಂಬಲ ವ್ಯಕ್ತಪಡಿಸುತ್ತಿದೆ.

ವಿಶೇಷವೆಂದರೆ ದೇಶದೊಳಗಿನ ಆಂತರಿಕ ಬೆದರಿಕೆಯನ್ನು ಶಮನಗೊಳಿಸಿದ ಉರ್ದುಗಾನ್‌ರ ಆಡಳಿತ ವೈಖರಿಯು ಮಾದರಿಯುತವಾದದ್ದು. ಶೇ.20ರಷ್ಟು ಜನಸಮುದಾಯ ಹೊಂದಿರುವ ಕುರ್ದಿ ಭಾಷಿಗರು ಹಲವು ವರ್ಷಗಳಿಂದ ಪ್ರತ್ಯೇಕ ರಾಷ್ಟ್ರಕ್ಕಾಗಿ ಹೋರಾಟ ನಡೆಸುತ್ತಿದ್ದರು ಮತ್ತು ವಿಧ್ವಂಸಕ ಕೃತ್ಯಗಳನ್ನೂ ಎಸಗುತ್ತಿದ್ದರು. ಉರ್ದುಗಾನ್ ಅವರು ಅವರ ಹೋರಾಟದ ಉದ್ದೇಶವನ್ನು ಅರಿತುಕೊಂಡು ಅವರಿಗೆ ಸಿಗಬೇಕಾದ ನ್ಯಾಯಬದ್ಧ ಸ್ಥಾನಮಾನ ನೀಡಿದ್ದಲ್ಲದೆ ಅವರ ಭಾಷೆಗೆ ಅಂಗೀಕೃತ ನೀಡಿದರು. ಈ ಮೂಲಕ ಕುರ್ದಿಗಳ ಚಳವಳಿಯನ್ನು ಉರ್ದುಗಾನ್ ಮಾನವೀಯ ನೆಲೆಯಲ್ಲಿ ಪರಿಹರಿಸಿದರು.

ಭೌಗೋಳಿಕವಾಗಿ ಟರ್ಕಿಯು ಯುರೋಪ್‌ನಲ್ಲಿದ್ದರೂ ಐರೋಪ್ಯ ಒಕ್ಕೂಟ ಈಗಲೂ ಟರ್ಕಿಗೆ ಸದಸ್ಯತನ ನೀಡಿಲ್ಲ. 1999ರಿಂದ ಟರ್ಕಿ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸುತ್ತಲೇ ಇದೆ. ಅಧಿಕೃತವಾಗಿ ಈ ಕುರಿತು ಮಾತುಕತೆ ಆರಂಭವಾದದ್ದು ಉರ್ದುಗಾನ್‌ರ ಅವಧಿಯಲ್ಲಿ. ಮಾನವ ಹಕ್ಕುಗಳ ರಕ್ಷಣೆ, ಆರ್ಥಿಕ ಸುಧಾರಣೆ, ಮಹಿಳಾ ಹಕ್ಕು ರಕ್ಷಣೆ, ಕುರ್ದು ಜನಾಂಗದ ಭಾಷೆ ಮತ್ತು ಸಂಸ್ಕೃತಿಯ ರಕ್ಷಣೆ ಮುಂತಾದ ಹಲವು ಸುಧಾರಣೆಗಳಿಂದ ಇಂದು ಟರ್ಕಿಯು ಪ್ರಗತಿಯಲ್ಲಿದೆ. ಈಗಾಗಲೇ ಫ್ರಾನ್ಸ್ ಮತ್ತು ಜರ್ಮನಿ ದೇಶಗಳು ಟರ್ಕಿಗೆ ಪಾಲುದಾರ ದೇಶ ಎಂಬ ಮಾನ್ಯತೆ ನೀಡಿದೆ.

ಟರ್ಕಿ ದೇಶವನ್ನು ಅಭಿವೃದ್ಧಿಯತ್ತ ಕೊಂಡೊಯ್ಯುವಲ್ಲಿ ಉರ್ದುಗಾನ್ ಅನುಸರಿಸಿದ ಆಡಳಿತ ತಂತ್ರಗಳು ಜಾಗತಿಕ ಚರ್ಚೆಗೊಳಗಾಗದಿರುವುದು ಮಾತ್ರ ದುರಂತ.

## ಎಸ್‌ಡಿಪಿಐ ಸ್ಥಾಪನಾ ದಿನಾಚರಣೆ

**ಮಂಗಳೂರು:** ಎಸ್‌ಡಿಪಿಐ ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವತಿಯಿಂದ ಪಕ್ಷದ ಸ್ಥಾಪನಾ ದಿನವನ್ನು ಜೂನ್ 21ರಂದು ಜಿಲ್ಲಾ ಕಚೇರಿಯಲ್ಲಿ ಆಚರಿಸಲಾಯಿತು.

ಜಿಲ್ಲಾಧ್ಯಕ್ಷ ಜಲೀಲ್ ಕೆ. ಪಕ್ಷದ ಧ್ವಜವನ್ನು ಹಾರಿಸಿದರು. ಜಿಲ್ಲಾ ಉಪಾಧ್ಯಕ್ಷ ಚಂದ್ರಹಾಸ ಪೂಜಾರಿ, ಪ್ರಧಾನ ಕಾರ್ಯದರ್ಶಿ ಅಕ್ಬರ್ ಅಲಿ, ಎಸ್‌ಡಿಪಿಐ ಉಳ್ಳಾಲ ಕ್ಷೇತ್ರ ಸಮಿತಿ ಅಧ್ಯಕ್ಷ ನವಾಝ್ ಉಳ್ಳಾಲ, ಎಸ್‌ಡಿಪಿಐ ಮಂಗಳೂರು ದಕ್ಷಿಣ ಸಮಿತಿಯ ಅಧ್ಯಕ್ಷ ಸಿದ್ದೀಕ್ ಕಣ್ಣೂರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ಕಾರ್ಯಕ್ರಮದ ಅಂಗವಾಗಿ ಜನರಿಗೆ ಸಿಹಿ ಹಂಚಲಾಯಿತು. ನಂತರ ಸುರತ್ಕಲ್‌ನಲ್ಲಿರುವ ಆಸ್ಪತ್ರೆಯೊಂದಕ್ಕೆ ಭೇಟಿ ನೀಡಿ ವಿಶೇಷ ಮಕ್ಕಳಿಗೆ ಹಣ್ಣುಹಂಪಲು ವಿತರಿಸಲಾಯಿತು.

## ■ಬದಲಾವಣೆಗಾಗಿ ಪಾಪ್ಯುಲರ್ ಫ್ರಂಟ್: ಇಲ್ಯಾಸ್ ತುಂಬೆ



ಬಂಟ್ವಾಳ: 'ಇಸ್ಲಾಮನ್ನು ಅರಿಯಿರಿ' ರಾಷ್ಟ್ರೀಯ ಅಬಿಯಾನದ ಅಂಗವಾಗಿ ಇತ್ತೀಚೆಗೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಬಿ.ಸಿ.ರೋಡ್ ವಲಯದ ವತಿಯಿಂದ ಯಶಸ್ವೀ ಇಸ್ಲಾಮೀ ಜೀವನ ಎಂಬ ವಿಷಯದಲ್ಲಿ ಸಾರ್ವಜನಿಕ ಕಾರ್ಯಕ್ರಮ ಇತ್ತೀಚೆಗೆ ಬಿ.ಸಿ.ರೋಡ್‌ನ ಪರ್ಲಿಯಾದಲ್ಲಿ ನಡೆಯಿತು.

ಕಾರ್ಯಕ್ರಮವನ್ನುದ್ದೇಶಿಸಿ ಮುಖ್ಯ ಭಾಷಣ ಮಾಡಿದ ಪಾಪ್ಯುಲರ್ ಫ್ರಂಟ್ ರಾಜ್ಯಾಧ್ಯಕ್ಷ ಇಲ್ಯಾಸ್ ಮುಹಮ್ಮದ್ ತುಂಬೆ, ಗತಕಾಲದ ಸ್ವಹಾಬಿಗಳ ಜೀವನ ಚರಿತ್ರೆ ನಮಗೆ ಯಶಸ್ವಿ ಜೀವನಕ್ಕೆ ಮಾರ್ಗದರ್ಶನವಾಗಿದೆ. ಮುಸ್ಲಿಮರು ಆಧುನಿಕ ಯುಗದ ಆಡಂಬರದಲ್ಲಿ ತಮ್ಮ ಜವಾಬ್ದಾರಿಯನ್ನು ಮರೆತು ಜೀವಿಸುತ್ತಿದ್ದಾರೆ. ಒಂದು ಕಾಲದಲ್ಲಿ ದೇಶವನ್ನು ಆಳಿದ ಮುಸ್ಲಿಮರು ಇಂದು ಎಲ್ಲಾ ಕ್ಷೇತ್ರದಲ್ಲಿ ಹಿಂದುಳಿದಿರುವುದು ದುರಂತವಾಗಿದೆ. ಈ ನಿಟ್ಟನಲ್ಲಿ ಬದಲಾವಣೆಯ ಕ್ರಾಂತಿಗಾಗಿ ಜನರನ್ನು ಒಟ್ಟುಗೂಡಿಸುವ ಪ್ರಯತ್ನವನ್ನು ಪಾಪ್ಯುಲರ್ ಫ್ರಂಟ್ ಮಾಡುತ್ತಿದೆ ಮತ್ತು ಅದರಲ್ಲಿ ಯಶಸ್ಸನ್ನು ಕಂಡಿದೆ ಎಂದು ಹೇಳಿದರು.

ಜಿಲ್ಲಾ ಸಮಿತಿ ಸದಸ್ಯ ಅಬೂಬಕರ್ ಸಿದ್ದೀಕ್ ಕಲ್ಲಡ್ಕ ಮಾತನಾಡಿ, ಸತ್ಯ ವಿಶ್ವಾಸಿಯು ಎಂದೂ ಅನ್ಯಾಯ, ಆಕ್ರಮವನ್ನು ಮಾಡಲಾರ ಮತ್ತು ಅನ್ಯಾಯವನ್ನು ಸಹಿಸಿ ಸುಮ್ಮನಿರಲಾರ ಎಂದರು. ವೇದಿಕೆಯಲ್ಲಿ ಪರ್ಲಿಯ ಝಿಯಾವುಲ್ ಇಸ್ಲಾಂ ಮದರಸ ಸಮಿತಿಯ ಅಧ್ಯಕ್ಷ ಶೇಖ್ ಇಸ್ಮಾಯೀಲ್, ಪಾಪ್ಯುಲರ್ ಫ್ರಂಟ್ ಬಂಟ್ವಾಳ ವಲಯ ಪ್ರಧಾನ ಕಾರ್ಯದರ್ಶಿ ಇಬ್ರಾಹೀಂ ಮಜೀದ್, ಸೋಶಿಯಲ್ ಡೆಮೊಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ ಬಂಟ್ವಾಳ ಪುರಸಭಾ ಸಮಿತಿಯ ಪ್ರಧಾನ ಕಾರ್ಯದರ್ಶಿ ಯೂಸುಫ್ ಆಲಡ್ಕ, ಉಪಸ್ಥಿತರಿದ್ದರು.

ಖಾದರ್ ಅಮ್ಮೆಮಾರ್ ಕಿರಾಅತ್ ಪಠಿಸಿದರು. ಬಿ.ಸಿ.ರೋಡ್ ವಲಯ ಕಾರ್ಯದರ್ಶಿ ನಝೀರ್ ಸ್ವಾಗತಿಸಿದರು. ಸಿದ್ದೀಕ್ ನಂದರಬೆಟ್ಟು ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

## ■ಮಡಿಕೇರಿ: ಸ್ಕೂಲ್ ಚಲೊ ಕಾರ್ಯಕ್ರಮ

ಮಡಿಕೇರಿ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕೊಡಗು ಜಿಲ್ಲಾ ಸಮಿತಿ ವತಿಯಿಂದ ಇತ್ತೀಚೆಗೆ ಮಡೀಕೇರಿಯಲ್ಲಿ 'ಸ್ಕೂಲ್ ಚಲೋ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದ ಅಂಗವಾಗಿ ಮಡಿಕೇರಿ ನಗರದ ನೂರಕ್ಕೂ ಹೆಚ್ಚು ಬಡ ವಿದ್ಯಾರ್ಥಿಗಳಿಗೆ ಶಾಲಾ ಫೀಸು,ಬ್ಯಾಗ್, ಸ್ವೆಟರ್, ಶೂ ಹಾಗೂ ಛತ್ರಿಗಳನ್ನು ವಿತರಿಸಲಾಯಿತು. ಅಲ್ಲದೆ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾದ ಮಡಿಕೇರಿಯ ನೌಶಿಯಾ (ಶೇ.90.72), ಎಂ.ಎಚ್.ನೌಫಲ್ ಅಹ್ಮದ್ (ಶೇ.88.64) ಮತ್ತು ಪಿಯುಸಿಯಲ್ಲಿ ಅತ್ಯಧಿಕ ಅಂಕ ಗಳಿಸಿದ ಮುಹಮ್ಮದ್ ರಶೀದ್. ಕೆ.ಎ, ಮುಹಮ್ಮದ್ ಹಾರಿಸ್ ಎಂ.ಎಚ್‌ರಿಗೆ ನಗದು ಬಹುಮಾನ, ಕ್ಯಾಂಪಸ್ ಪ್ರಶಸ್ತಿ ಪತ್ರ ಮತ್ತು ಫಲಕವನ್ನು ನೀಡಲಾಯಿತು.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಡಿಸ್ಟಿಂಕ್ಷನ್ ಪಡೆದ ಆಫಿಯಾ.ಎಂ.ಎಫ್, ಹೈಫಾ ಶರೀಫ್, ಕೌಲಾ ಕೆ.ಕೆ., ಶರೀನಾ ಫಾತಿಮಾ , ರಮ್ಯಾ.ಸಿ.ಎಂ, ಲುತ್‌ಫಾನ.ಎಂ.ಎಸ್, ವಾಹಿದಾ.ಬಿ.ಬಿ, ರೋಶಿನಿ.ಎಂ.ಎನ್,



ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಯೊಬ್ಬನನ್ನು ಸನ್ಮಾನಿಸುತ್ತಿರುವುದು.

ಎಂ.ಇ.ಅಶದ್‌ರಿಗೆ ಕ್ಯಾಂಪಸ್ ಪ್ರಶಸ್ತಿ ನೀಡಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಾಪ್ಯುಲರ್ ಫ್ರಂಟ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹಾರಿಸ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಮಡಿಕೇರಿ ಕ್ಷೇತ್ರ ಶಿಕ್ಷಣಾಧಿಕಾರಿ ಮರಿಸ್ವಾಮಿ, ಶಿಕ್ಷಣಾಧಿಕಾರಿ ಮುತ್ತಪ್ಪ, ಮಡಿಕೇರಿ ತಾಲೂಕು ಅಲ್ಪಸಂಖ್ಯಾತರ ಇಲಾಖೆಯ ಸಂಯೋಜಕಿ ಕವಿತಾ ಹಾಗೂ ಸೋಶಿಯಲ್ ಡೆಮಾಕ್ರಾಟಿಕ್ ಪಾರ್ಟಿ ಆಫ್ ಇಂಡಿಯಾದ ಕೊಡಗು ಜಿಲ್ಲಾಧ್ಯಕ್ಷ ಫಝುಲುಲ್ಲಾ ಪಾಲ್ಗೊಂಡಿದ್ದರು. ಅಕ್ಮಲ್ ಸ್ವಾಗತಿಸಿದರು. ಸನಾವುಲ್ಲಾ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.

# ■ ಗುರಿ ತಲುಪುವ ತನಕ ಹೋರಾಡೋಣ: ಮಜೀದ್ ಕೊಡ್ಲಿಪೇಟೆ

## ಎಸ್‌ಡಿಪಿಐ ಸ್ಥಾಪನಾ ದಿನದಂದು ರಾಜ್ಯಾಧ್ಯಕ್ಷರ ಸಂದೇಶ

ಬೆಂಗಳೂರು: ಜೂ.21 ಎಸ್‌ಡಿಪಿಐ ಸ್ಥಾಪನಾ ದಿನ. ಎಸ್‌ಡಿಪಿಐ ಸ್ಥಾಪನೆಯಾಗಿ ಇಂದಿಗೆ ಎರಡು ವರ್ಷಗಳು ಸಂದವು. ಎರಡನೆ ವರ್ಷದ ಸಂಭ್ರಮಾಚರಣೆಯ ಈ ಶುಭ ಸಂದರ್ಭದಲ್ಲಿ ದೇಶಾದ್ಯಂತ ಇರುವ ಎಸ್‌ಡಿಪಿಐಯ ಕಾರ್ಯಕರ್ತರಿಗೆ, ಬೆಂಬಲಿಗರಿಗೆ, ಮತದಾರರಿಗೆ ಮತ್ತು ಎಲ್ಲರಿಗೂ ಶುಭವನ್ನು ಕೋರುತ್ತೇನೆ. ಈ ಎರಡು ವರ್ಷದ ಅವಧಿಯಲ್ಲಿ ಈ ದೇಶದ ಇಪ್ಪತ್ತೊಂದು ರಾಜ್ಯಗಳಿಗೆ ಎಸ್‌ಡಿಪಿಐಯ ಸಂದೇಶ ತಲುಪಲು ಸಾಧ್ಯವಾದದ್ದು ಹೆಮ್ಮೆಯ ವಿಚಾರ. ಇದಕ್ಕಾಗಿ ಶ್ರಮಿಸಿದ ಎಲ್ಲಾ ಕಾರ್ಯಕರ್ತರಿಗೂ, ನಾಯಕರುಗಳಿಗೂ ಈ ಮೂಲಕ ಧನ್ಯವಾದ ಸಮರ್ಪಿಸುತ್ತೇನೆ.

ಕರ್ನಾಟಕ ರಾಜ್ಯದಲ್ಲಿ ಹದಿನಾರು ಜಿಲ್ಲೆಗಳಲ್ಲಿ ಜಿಲ್ಲಾ ಸಮಿತಿಗಳು ಕಾರ್ಯನಿರ್ವಹಿಸುತ್ತಿದ್ದು, 26 ಜಿಲ್ಲೆಗಳಲ್ಲಿ ಎಸ್‌ಡಿಪಿಐಯ ಕೆಲಸವು ನಡೆಯುತ್ತಿದೆ. ಕರ್ನಾಟಕ ರಾಜ್ಯದಲ್ಲಿ ಮೊಟ್ಟ ಮೊದಲ ಬಾರಿಗೆ ಬಿ.ಬಿ.ಎಂ.ಪಿ ಚುನಾವಣೆಯಲ್ಲಿ ಪಾದರಾಯನಪುರ ವಾರ್ಡ್‌ನಲ್ಲಿ ಪ್ರೊ. ನಾಝ್ನೀನ್ ಬೇಗಂ ಅವರನ್ನು ಎಸ್‌ಡಿಪಿಐ ಅಭ್ಯರ್ಥಿಯಾಗಿ ಗೆಲ್ಲಿಸುವುದರ ಮೂಲಕ ಆಡಳಿತದಲ್ಲಿ ಅಧಿಕಾರ ಪಡೆಯಲು ಸಾಧ್ಯವಾದದ್ದು ಕಾರ್ಯಕರ್ತರ ಮತ್ತು ಮತದಾರರ ಬೆಂಬಲದಿಂದ. ಅದೇ ರೀತಿ ಗ್ರಾಮ ಪಂಚಾಯ್ತಿ ಚುನಾವಣೆಯಲ್ಲಿ 68 ಎಸ್‌ಡಿಪಿಐ ಬೆಂಬಲಿತ ಅಭ್ಯರ್ಥಿಗಳು ಜಯ ಗಳಿಸಲು ಸಾಧ್ಯವಾಗಿರುವುದು ಈ ಸಂದರ್ಭದಲ್ಲಿ ಅತೀವ ಸಂತೋಷವನ್ನು ಉಂಟುಮಾಡುತ್ತಿದೆ.

ಸ್ವಾತಂತ್ರ್ಯಾ ನಂತರದ 64 ವರ್ಷಗಳಲ್ಲಿ ನಮ್ಮನ್ನಾಳಿದ ಪಕ್ಷಗಳು ಪ್ರಜಾತಂತ್ರ ವ್ಯವಸ್ಥೆಯನ್ನು ಬುಡಮೇಲುಗೊಳಿಸಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಬಂಡವಾಳಶಾಹಿಗಳ ಪರವಾದ ತೀರ್ಮಾನಗಳು ಮತ್ತು ಜನ ವಿರೋಧಿ ನೀತಿಗಳಿಂದ ಪ್ರಜಾತಂತ್ರ ವ್ಯವಸ್ಥೆಯನ್ನು ಅಣಕಿಸುತ್ತಿವೆ. ಈ ಸಂದರ್ಭದಲ್ಲಿ ಬಲಿಷ್ಠ ಕಾರ್ಯಕರ್ತರ ಪಡೆಯನ್ನು ಕಟ್ಟಿಕೊಂಡು ಸಾಮೂಹಿಕ ನಾಯಕತ್ವದಡಿ ಆಂತರಿಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಕಾಯ್ದುಕೊಂಡು ಜನ ಪರ ಹೋರಾಟದೊಂದಿಗೆ ಜನರ ಕಷ್ಟ-ಕಾರ್ಪಣ್ಯ ಗಳಿಗೆ ಸ್ಪಂದಿಸುತ್ತಾ ನಿಸ್ವಾರ್ಥ ಸೇವೆಗೆಯ್ಯುತ್ತಾ ಯಾವ ಬೆಲೆ ತೆತ್ತಾದರೂ ದೌರ್ಜನ್ಯಕ್ಕೊಳಗಾದ ಇಲ್ಲಿನ ಮುಸಲ್ಮಾನ, ದಲಿತ, ಶೋಷಿತ ಸಮುದಾಯಗಳ ರಕ್ಷಣೆ ಮತ್ತು ಅವರ ಹಕ್ಕುಗಳನ್ನು ರಕ್ಷಿಸುವಲ್ಲಿ ನಿರಂತರ ಹೋರಾಟ ಮಾಡುವ ಸಂಕಲ್ಪವನ್ನು ಎಸ್‌ಡಿಪಿಐ ತೊಟ್ಟಿದೆ. ಈಗಿರುವ ಭ್ರಷ್ಟ ವ್ಯವಸ್ಥೆಯನ್ನು ಕಿತ್ತೊಗೆದು ಜನರ ಬಳಿಗೆ ಅಧಿಕಾರವನ್ನು ಕೊಂಡೊಯ್ಯುವ ಸಿದ್ಧಾಂತಕ್ಕೆ ಎಸ್‌ಡಿಪಿಐ ಕಟಿಬದ್ಧವಾಗಿದೆ.



ಎರಡು ವರ್ಷದ ಈ ಕಿರು ಅವಧಿಯಲ್ಲಿ ನಮ್ಮ ಸಾಧನೆ ತೃಪ್ತಿ ತಂದಿದೆ. ಆದರೆ ಜನರ ಆಶೋತ್ತರಗಳ ಈಡೇರಿಕೆ, ದುರ್ಬಲ ವರ್ಗಗಳ ರಕ್ಷಣೆ, ದುರ್ಬಲ ವರ್ಗಗಳನ್ನು ಅಧಿಕಾರಕ್ಕೆ ತರುವುದು, ರೈತರ ಪರವಾದ ಹೋರಾಟ, ಇನ್ನಿತರ ಮಹೋನ್ನತ್ತರವಾದಂತಹ ಗುರಿಗಳು ನಮ್ಮ ಮುಂದಿದೆ. ಈ ಗುರಿಯನ್ನು ನಾವು ಸಾಧಿಸಿಯೇ ಸಿದ್ಧ. ನಮ್ಮ ಗುರಿ ಮುಟ್ಟುವವರೆಗೆ ಈ ಹೋರಾಟ ನಿಲ್ಲದು. ಈ ಎರಡನೇ ವರ್ಷದ ಸಂಭ್ರಮಾಚರಣೆಯಲ್ಲಿ ಪಕ್ಷದ ಕಾರ್ಯಕರ್ತರಿಗೆ ಶುಭ ಸಂದೇಶ ನೀಡುವುದರೊಂದಿಗೆ ಮುಂದಿನ ಸವಾಲುಗಳನ್ನು ಎದುರಿಸಲು ಮತ್ತು ಮುಂದಿನ ಚುನಾವಣೆಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆಯ ಮೂಲಕ ಅಧಿಕಾರ ಹಿಡಿಯಲು ನಿಮ್ಮ ತ್ಯಾಗ, ನಾಯಕತ್ವ, ನಿಸ್ವಾರ್ಥ ಸೇವೆ ಇದರ ಅಗತ್ಯತೆಯನ್ನು ಈ ಸಂದರ್ಭದಲ್ಲಿ ನೆನಪಿಸಬಯಸುತ್ತೇನೆ.

ಕಾರ್ಯಕರ್ತರು, ಹಿತೈಷಿಗಳು ಮತ್ತು ಬೆಂಬಲಿಗರಿಗೆ ನಮ್ಮನ್ನು ಯಾವ ಸಂದರ್ಭದಲ್ಲೂ ಸಂಪರ್ಕಿಸಬಹುದಾಗಿದೆ.

### ವಿಶ್ವ ಕನ್ನಡಿಗ ಓದುಗರಿಗೆ ಮಜೀದ್ ಕೊಡ್ಲಿಪೇಟೆ ಧನ್ಯವಾದ

ಬೆಂಗಳೂರು: ವಿಶ್ವ ಕನ್ನಡಿಗರ ಒಕ್ಕೂಟ ಆನ್‌ಲೈನ್ ನ್ಯೂಸ್‌ನ ವರ್ಷದ ವ್ಯಕ್ತಿಯಾಗಿ ತನ್ನನ್ನು ಆಯ್ಕೆ ಮಾಡಿದ್ದಕ್ಕೆ ವಿಶ್ವ ಕನ್ನಡಿಗ ಆನ್‌ಲೈನ್‌ನ ಎಲ್ಲಾ ಓದುಗರಿಗೂ ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಕೊಡ್ಲಿಪೇಟೆ ಧನ್ಯವಾದ ಸಮರ್ಪಿಸಿದ್ದಾರೆ.

ತಮ್ಮೆಲ್ಲರ ನಿರೀಕ್ಷೆಯಂತೆ ಇನ್ನು ಮುಂದೆಯೂ ದುರ್ಬಲ ವರ್ಗಗಳ, ಶೋಷಿತ ಅಲ್ಪಸಂಖ್ಯಾತರ ಪರ ಹೋರಾಟಗಳನ್ನು ನಡೆಸುತ್ತಾ ಶೋಷಿತ ಜನರಿಗೆ ಅಧಿಕಾರವನ್ನು ತಲುಪಿಸುವ ಈ ಮಹಾತ್ಕಾರ್ಯದಲ್ಲಿ ಸದಾ ತೊಡಗಿರುತ್ತೇನೆ ಎಂದು ಹೇಳುತ್ತಾ ವಿಶ್ವ ಕನ್ನಡಿಗರ ಒಕ್ಕೂಟದ ಎಲ್ಲಾ ಓದುಗರಿಗೂ, ಅದರ ವ್ಯವಸ್ಥಾಪಕ ಮಂಡಳಿಗೂ, ವರದಿಗಾರರಿಗೂ, ಎಲ್ಲಾ ಹಿತೈಷಿಗಳಿಗೂ ಮತ್ತೊಮ್ಮೆ ವಂದಿಸುತ್ತೇನೆ.

## ■ ಬಡ ಕುಟುಂಬಕ್ಕೆ ಎಸ್‌ಡಿಪಿಐಯಿಂದ ಮನೆ ನೆರವು



ಮಂಗಳೂರು: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ, ಮೂಲ್ಕಿ-ಮೂಡಬಿದ್ರೆ ವಿಧಾನಸಭಾ ಕ್ಷೇತ್ರ ಸಮಿತಿ ವತಿಯಿಂದ ಆದ್ಯಪ್ಪಾಡಿಯ ಬಡ ಕುಟುಂಬವೊಂದಕ್ಕೆ ಮನೆ ನಿರ್ಮಿಸಿಕೊಡಲಾಗಿದೆ.

ಜೂನ್ 19ರಂದು ಎಸ್‌ಡಿಪಿಐ ದಕ್ಷಿಣ ಕನ್ನಡ ಜಿಲ್ಲಾಧ್ಯಕ್ಷ ಜಲೀಲ್ ಕೆ. ಮನೆಯ ಕೀಲಿ ಕೈಯನ್ನು ಹಸ್ತಾಂತರಿಸಿದರು. ಮನೆಯನ್ನು ಕಟ್ಟುವುದಕ್ಕೆ ನೆರವಾದ ಎಲ್ಲರಿಗೂ ಅವರು ಧನ್ಯವಾದ ಹೇಳಿದರು. ಆದ್ಯಪ್ಪಾಡಿಯ ಇಮಾಮರು ದುಆ ನೆರವೇರಿಸಿದರು. ಮುಲ್ಕಿ-ಮೂಡಬಿದ್ರೆ ಕ್ಷೇತ್ರದ ಅಧ್ಯಕ್ಷ ಇಸ್ಮಾಯೀಲ್ ಇಂಜಿನಿಯರ್ ಸಾಂದರ್ಭಿಕವಾಗಿ ಮಾತನಾಡಿದರು.

ಜೋಕಟ್ಟೆ ಗ್ರಾಮಪಂಚಾಯತ್‌ನ ಉಪಾಧ್ಯಕ್ಷ ಬಿ.ಶೇಕುಞ್ಞಿ, ಮಂಗಳೂರು ಉತ್ತರದ ಪ್ರಧಾನ ಕಾರ್ಯದರ್ಶಿ ನಿಯಾಝ್ ವಾಮಂಜೂರು, ಪಾಪ್ಯುಲರ್ ಫ್ರಂಟ್ ಜಿಲ್ಲಾಧ್ಯಕ್ಷ ಶರೀಫ್ ಬಜ್ಪೆ, ಇಮೇಜ್ ಬ್ಯುಲ್ಡರ್ಸ್‌ನ ಮಾಲೀಕ ಫಾರೂಕ್ ಬಜ್ಪೆ, ನಿಸಾರ್ ಮರವೂರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಬಂಟ್ವಾಳ: ಉಚಿತ ಪುಸ್ತಕ ವಿತರಣೆ

ಬಂಟ್ವಾಳ: ಸೋಷಿಯಲ್ ಡೆಮೋಕ್ರೆಟಿಕ್ ಪಾರ್ಟಿ ಆಪ್ ಇಂಡಿಯಾ, ಅಡ್ಯಾರ್ ಅರ್ಕುಳ ಗ್ರಾಮ ಸಮಿತಿ ವತಿಯಿಂದ ಬಡ ವಿದ್ಯಾರ್ಥಿಗಳಿಗೆ ಉಚಿತ ಪುಸ್ತಕ ವಿತರಣಾ ಕಾರ್ಯಕ್ರಮ ಇತ್ತೀಚೆಗೆ ಅರ್ಕುಳದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಎಸ್‌ಡಿಪಿಐ ದ.ಕ.ಜಿಲ್ಲಾಧ್ಯಕ್ಷ ಜಲೀಲ್ ಕೆ., ಪ್ರಸಕ್ತ ಸನ್ನಿವೇಶದಲ್ಲಿ ಕಲಿಯುವುದು ಕಲಿಸುವುದು ವ್ಯಾಪಾರೀಕರಣವಾಗಿದೆ. ಎಸ್‌ಡಿಪಿಐಯು ಎಲ್ಲಾ ಪಕ್ಷಗಳಂತೆ ಚುನಾವಣೆಯ ಸಂದರ್ಭದಲ್ಲಿ ಮಾತ್ರ ಜನರ ಮುಂದೆ ಹೋಗುವ ಪಕ್ಷವಲ್ಲ. ಪಕ್ಷವು ಹಸಿವು ಮುಕ್ತ ಮತ್ತು ಭಯ ಮುಕ್ತ ದೇಶವನ್ನು ಕಟ್ಟುವುದಕ್ಕಾಗಿ ನಿರಂತರ ಶ್ರಮಿಸುತ್ತಿದೆ ಎಂದರು.

ಪಕ್ಷದ 'ಹಸಿವು ಮುಕ್ತ ಸ್ವಾತಂತ್ರ್ಯ, ಭಯಮುಕ್ತ ಸ್ವಾತಂತ್ರ' ಎಂಬ ಘೋಷ ವಾಕ್ಯವನ್ನು ಉಲ್ಲೇಖಿಸಿ ಮಾತನಾಡಿದ ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಪ್ರದೀಪ್ ಕುಮಾರ್ ಕಲ್ಕೂರ, ಒಂದು ಪರಿಪಕ್ವವಾದ ಸಮಾಜಮುಖಿ ನಾಗರಿಕನಿಗೆ ಸಂಬಂಧಿಸಿದಂತೆ ಅವನ ಎಲ್ಲಾ ಬದುಕು ರಾಷ್ಟ್ರಮುಖಿಯಾಗಿರಬೇಕು, ಸಮಾಜಮುಖಿಯಾಗಿರಬೇಕು, ವ್ಯಸನ ಮುಕ್ತವಾಗಿರಬೇಕು, ಶ್ರಮ ಜೀವನದ ಪರಿಕಲ್ಪನೆ ಆತನಲ್ಲಿರಬೇಕು. ಇವೆಲ್ಲಾ 'ಹಸಿವು ಮುಕ್ತ ಸ್ವಾತಂತ್ರ್ಯ, ಭಯ ಮುಕ್ತ ಸ್ವಾತಂತ್ರ್ಯ' ಎಂಬ ಘೋಷ ವಾಕ್ಯದಲ್ಲಿ ಅಡಗಿದೆ. ಹಸಿವು ಮುಕ್ತವೆಂದರೆ ಕೇವಲ ಹೊಟ್ಟೆಯ ಹಸಿವು ಮಾತ್ರವಲ್ಲ. ಅದು ವಿದ್ಯಾಭ್ಯಾಸದ ಹಸಿವೂ ಆಗಿರುತ್ತದೆ ಎಂದರು.

ಬಹುಭಾಷಾ ಸಾಹಿತಿ ಮುಹಮ್ಮದ್ ಬಡ್ಡೂರ್, ಎಸ್‌ಡಿಪಿಐ ಜಿಲ್ಲಾ ಸಮಿತಿ ಸದಸ್ಯ ರಿಯಾಝ್ ಫರಂಗಿಪೇಟೆ, ಎಸ್‌ಡಿಪಿಐ



ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ಎಂ.ಶರೀಫ್ ಕಾರ್ಯಕ್ರಮದಲ್ಲಿ ಮಾತನಾಡಿದರು. ಮೇರಮಜಲು ರೆ. ಫಾ. ಧರ್ಮಗುರು ಸಿರಿಲ್ ಪಿಂಟೋ, ಯುವ ಉದ್ಯಮಿ ಅಬ್ದುಲ್ ರಹಿಮಾನ್, ಎಸ್‌ಡಿಪಿಐ ಅಡ್ಯಾರ್ ಗ್ರಾಮ ಸಮಿತಿ ಅಧ್ಯಕ್ಷ ಮುಹಮ್ಮದ್ ವಲಚ್ಚಿಲ್, ಅರ್ಕುಳ ಘಟಕಾಧ್ಯಕ್ಷ ಅಬ್ದುಲ್ ಸಮದ್, ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸುಮಾರು 75 ವಿದ್ಯಾರ್ಥಿಗಳಿಗೆ ಪುಸ್ತಕ ವಿತರಿಸಲಾಯಿತು. ಯಾಸೀನ್ ಅರ್ಕುಳ ಸ್ವಾಗತಿಸಿ, ಖಾದರ್ ಅಮ್ಮೆಮಾರ್ ಕಾರ್ಯಕ್ರಮ ನಿರೂಪಿಸಿದರು.

### ಕ್ವಿಝ್ ಟೈಮ್-10ರ ಉತ್ತರಗಳು

| | |
|---|---|
| 1.1ನೇ ಪಾಣಿಪತ್ | 6.ಇಟಲಿ |
| 2.ವಾರನ್ ಹೇಸ್ಟಿಂಗ್ಸ್ | 7.ಕ್ಯಾಲೋರಿ |
| 3.ಅರ್ಥರ್ ಕ್ಲೋಸೆರ್ | 8.ಅಕ್ವಾಲಂಗ್ |
| 4.ಮಿಲ್ಟನ್ | 9.ಫುಟ್ಬಾಲ್ |
| 5.ಕನ್ಯಾಕುಮಾರಿ | 10.ದೆಹಲಿ |

# ಅಸ್ಸಾಮ್: ನಿರ್ವಸತಿಗರಿಗೆ ರಿಹಾಬ್ ನಿವೇಶನ ಹಸ್ತಾಂತರ

ಹೊಸದಿಲ್ಲಿ: ಬುಡೊ ಜನಾಂಗದ ದಾಳಿಗೆ ತುತ್ತಾಗಿ ನಿರ್ವಸಿತರಾದ ಜನರ ಪುನರ್ವಸಿತಿಗಾಗಿ ರೂಪಿಸಲಾದ ರಿಹಾಬ್ ಗ್ರಾಮ ಯೋಜನೆಯ ನಿವೇಶನ ಹಸ್ತಾಂತರ ಕಾರ್ಯಕ್ರಮವು 29 ಮೇ 2011ರಂದು ಅಸ್ಸಾಮ್‌ನ ಬೊಂಗಾಯ್‌ಗಾಂವ್‌ನ ಹಪ್ಸರ ಪಂಚಾಯತ್‌ನಲ್ಲಿ ಇತ್ತೀಚೆಗೆ ನಡೆಯಿತು.

ಸಮೀಪದ ನಿರಾಶ್ರಿತ ಶಿಬಿರದಲ್ಲಿ ವಾಸಿಸುತ್ತಿದ್ದ 45 ಕುಟುಂಬಗಳಿಗೆ ಕೀಲಿ ಕೈ ಹಸ್ತಾಂತರಿಸುವ ಈ ಸಂದರ್ಭವು ದಿಲ್ಲಿ ಮೂಲದ ಸರಕಾರೇತರ ಸಂಘಟನೆಯಾಗಿರುವ ರಿಹಾಬ್ ಇಂಡಿಯಾ ಫೌಂಡೇಶನ್ ಮತ್ತು ಅದಕ್ಕೆ ನೆರವಾದ ಸ್ಥಳೀಯ ಜನರಿಗೆ ಸಂತೃಪ್ತಿದಾಯಕ ಸಂದರ್ಭವಾಗಿತ್ತು.

ತಮ್ಮ ಮನೆಗಳಿಂದ ಬಲಾತ್ಕಾರವಾಗಿ ಓಡಿಸಲ್ಪಟ್ಟ ಈ ಜನರು, ಬೀದಿ ಬದಿಯಲ್ಲಿ ಮತ್ತು ನದಿ ದಡಗಳಲ್ಲಿ ಸೂರಿಲ್ಲದೆ ಜೀವಿಸುತ್ತಿದ್ದರು. 1000 ಕುಟುಂಬಗಳಿಗೆ ಪ್ರತ್ಯೇಕ ಮನೆಗಳನ್ನು ಒದಗಿಸುವ ಯೋಜನೆ ಇದಾಗಿದ್ದು, 51 ಮನೆಗಳ ಹಸ್ತಾಂತರವು ಇದೀಗಾಗಲೇ ನಡೆಯಿತು. ಇಡೀ ಯೋಜನೆಗೆ ಅಗತ್ಯವಾಗಿದ್ದ ಭೂಮಿಯನ್ನು ಈಗಾಗಲೇ ಪಡೆಯಲಾಗಿದೆ.

ರಿಹಾಬ್ ಈಗ ತನ್ನ ಯೋಜನೆಯ ಎರಡನೆ ಹಂತದಲ್ಲಿದ್ದು, ಗ್ರಾಮದಲ್ಲಿ ಹಲವು ಮನೆಗಳನ್ನು, ಪ್ರಾಥಮಿಕ ಶಾಲೆಗಳನ್ನು ಮತ್ತು ಮಸೀದಿಗಳನ್ನು ನಿರ್ಮಿಸಲು ಮುಂದಾಗಿದೆ.

ಫೌಂಡೇಶನ್‌ನ ಚಯರ್‌ಮ್ಯಾನ್ ಇ.ಅಬೂಬಕರ್ ಫಲಾನುಭವಿಗಳಿಗೆ ನಿವೇಶನಗಳನ್ನು ಹಸ್ತಾಂತರಿಸುವ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಫೌಂಡೇಶನ್‌ನ ಪ್ರಧಾನ ಕಾರ್ಯದರ್ಶಿ ಅಡ್ವೊಕೇಟ್ ಕೆ.ಎಂ.ಅಶ್ರಫ್ ಸಂಘಟನೆಯ ಕಾರ್ಯಚಟುವಟಿಕೆಯ ಬಗ್ಗೆ ವಿವರಿಸಿದರು.

ಪಾಪ್ಯುಲರ್ ಫ್ರಂಟ್ ಚಯರ್‌ಮ್ಯಾನ್ ಇ.ಎಂ. ಅಬ್ದುರ್ರಹ್ಮಾನ್, ಬೋಂಗೈಗಾಂವ್‌ನ ಹೆಚ್ಚುವರಿ ಜಿಲ್ಲಾಧಿಕಾರಿ ಅಬ್ದುಲ್ ರಹೀಂ ಶೈಖ್, ರಿಹಾಬ್ ಟ್ರಸ್ಟಿ ಹಾಗೂ ಮಿಲ್ಲಿ ಗೆಝೆಟ್‌ನ ಸಂಪಾದಕ ಡಾ. ಝಫರುಲ್ ಇಸ್ಲಾಮ್ ಖಾನ್, ರಿಹಾಬ್‌ನ ವೈಸ್ ಚಯರ್‌ಮ್ಯಾನ್ ಪ್ರೊ.ಮುಹಮ್ಮದ್ ಸುಲೈಮಾನ್, ಮಾಜಿ ಶಾಸಕ ಅಬ್ದುಲ್ ಹೈ ನೌಗುರಿ, ಎಐಯುಡಿಎಫ್ ಯೂತ್ ವಿಂಗ್‌ನ ಅಧ್ಯಕ್ಷ ಅಡ್ವೊಕೇಟ್ ಅಮೀನುಲ್ ಇಸ್ಲಾಮ್, ಅಬ್ದುಲ್ ಕರೀಮ್ ಬನಿಯಾ, ನ್ಯಾಯಾಂಗ ಮ್ಯಾಜಿಸ್ಟ್ರೇಟ್ ಖಾಲಿದಾ ಸುಲ್ತಾನಾ, ಅಡ್ವೊಕೇಟ್ ಅಬ್ದುಸ್ಸಮದ್, ಡಾ. ಅಬುಲ್ ಬಶರ್, ತುಫೈಲ್ ಅಹ್ಮದ್, ಪ್ರೊ.ಹಝ್ರತ್ ಅಲಿ, ಹಪ್ಸರಾ ಪಂಚಾಯತ್ ಅಧ್ಯಕ್ಷ ಮುಮ್ತಾಝ್ ಬೇಗಮ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ರಿಹಾಬ್ ಫೌಂಡೇಶನ್‌ನ ಕಾರ್ಯದರ್ಶಿ ಅಡ್ವೊಕೇಟ್ ಹಫೀಝ್ ರಶೀದ್ ಚೌಧರಿ ಸ್ವಾಗತಿಸಿ, ರಿಹಾಬ್ ಗ್ರಾಮ ನಿರ್ಮಾಣ ಸಮಿತಿಯ ಸಂಯೋಜಕ ನೌಶಾದ್ ಇನಾಮುದ್ದಿನ್ ವಂದಿಸಿದರು.




1



2



3

ರಿಹಾಬ್ ಗ್ರಾಮ ಯೋಜನೆಯ ನಿವೇಶನ ಹಸ್ತಾಂತರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಗಣ್ಯರು-(ಚಿತ್ರ-1). ನಿರ್ವಸಿತರಿಗೆ ನಿರ್ಮಿಸಲಾಗಿರುವ ನಿವೇಶನ (ಚಿತ್ರ-2). ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಂತ್ರಸ್ತರು.(ಚಿತ್ರ-3).

## ■ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆ: ಮಿಕ್ದಾದ್‌ಗೆ ಪ್ರಶಸ್ತಿ





ಅಹ್ಮದ್ ಮಿಕ್ದಾದ್‌ರ 'ಸೀ ಆ್ಯಂಡ್ ಶಿಪ್' ಎಂಬ ಕಲಾಕೃತಿ

ಬಂಟ್ವಾಳ: ಬೆಂಗಳೂರಿನ ಸೃಷ್ಟಿ ಆರ್ಟ್ ಗ್ಯಾಲರಿ ವತಿಯಿಂದ ಆಯೋಜಿಸಲಾಗಿದ್ದ ರಾಜ್ಯ ಮಟ್ಟದ ಚಿತ್ರಕಲಾ ಸ್ಪರ್ಧೆಯಲ್ಲಿ ಕಲ್ಲಡ್ಕದ ಗೋಳ್ತಮಜಲಿನ ಅಹ್ಮದ್ ಮಿಕ್ದಾದ್‌ರ 'ಸೀ ಆ್ಯಂಡ್ ಶಿಪ್' ಎಂಬ ಕಲಾಕೃತಿಗೆ ಪ್ರಶಸ್ತಿ ದೊರೆತಿದೆ.

ಇಸ್ಮಾಯೀಲ್ ಜಿ.ಎಂ. ಮತ್ತು ಮೈಮೂನಾ ದಂಪತಿಯ ಪುತ್ರನಾಗಿರುವ ಮಿಕ್ದಾದ್, ಮಂಗಳೂರಿನ ಕುದ್ರೋಳಿಯ ಮಹಾಲಸ ಚಿತ್ರ ಕಲಾಶಾಲೆಯಲ್ಲಿ ಪದವಿ ಶಿಕ್ಷಣ ಮುಗಿಸಿದ್ದು, ಪ್ರಸ್ತುತ ಬೆಂಗಳೂರು ವಿವಿಯಲ್ಲಿ ಚಿತ್ರ ಕಲೆಯಲ್ಲಿ ಸ್ನಾತಕೋತ್ತರ ಪದವಿ ಮಾಡುತ್ತಿದ್ದಾರೆ.

2009-10ನೆ ಸಾಲಿನಲ್ಲಿ ಮಾನವ ಸಂಕೇತ ಅಕಾಡಮಿ ಆಯೋಜಿಸಿದ್ದ ರಾಷ್ಟ್ರ ಮಟ್ಟದ ಚಿತ್ರಕಲಾಸ್ಪರ್ಧೆಯಲ್ಲಿ ಮಿಕ್ದಾದ್ ಪ್ರಶಸ್ತಿ ವಿಜೇತರಾಗಿದ್ದರು.

ಚಿತ್ರಕಲಾ ಕ್ಷೇತ್ರದಲ್ಲಿ ಮಿಕ್ದಾದ್‌ರ ಸಾಧನೆಯನ್ನು ಗುರುತಿಸಿ ಹಲವು ಸಂಘಸಂಸ್ಥೆಗಳು ಇವರರನ್ನು ಸನ್ಮಾನಿಸಿದ್ದವು. ಅವರ ಪ್ರತಿಭೆಗೆ ಸಂಬಂಧಿಸಿ ಪ್ರಸ್ತುತ ಪಾಕ್ಷಿಕ ಸೇರಿದಂತೆ ಮಾಧ್ಯಮಗಳಲ್ಲಿ ವಿಶೇಷ ವರದಿಗಳು ಪ್ರಕಟವಾಗಿದ್ದವು.

## ■ ಕಲ್ಲಡ್ಕ: ಎಸ್‌ಡಿಪಿಐನಿಂದ ಹಾಲು ವಿತರಣೆ



ಬಂಟ್ವಾಳ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ ಮೂರನೇ ವರ್ಷಕ್ಕೆ ಪಾದಾರ್ಪಣೆಗೈದ ಸಂದರ್ಭವನ್ನು ಎಸ್‌ಡಿಪಿಐ ಗೋಳ್ತಮಜಲು ಗ್ರಾಮ ಸಮಿತಿಯು ಗೋಳ್ತಮಜಲು, ಗ್ರಾಮಗಳಲ್ಲಿ ಮನೆ ಮನೆಗೆ ಹಾಲು ವಿತರಣೆ ಮಾಡುವ ಮೂಲಕ ವಿಶಿಷ್ಟ ಶೈಲಿಯಲ್ಲಿ ಆಚರಿಸಿತು. ಕಾರ್ಯಕ್ರಮದಲ್ಲಿ ಬಂಟ್ವಾಳ ಕ್ಷೇತ್ರ ಸಮಿತಿ ಸದಸ್ಯ ಕಬೀರ್ ಕಲ್ಲಡ್ಕ ಸ್ವಾಗತಿಸಿದರೆ, ಜಿಲ್ಲಾ ಸಮಿತಿ ಸದಸ್ಯ ಯೂಸುಫ್ ಆಲಡ್ಕ ಉದ್ಘಾಟನೆಗೈದರು. ಪಾಪ್ಯುಲರ್ ಫ್ರಂಟ್ ವಲಾಯಧ್ಯಕ್ಷ ಝಕರಿಯ್ಯಾ ಗೋಳ್ತಮಜಲು, ಗ್ರಾಮ ಸಮಿತಿ ಅಧ್ಯಕ್ಷ ಜವಾಝ್, ಬಂಟ್ವಾಳ ಕ್ಷೇತ್ರ ಸಮಿತಿ ಕಾರ್ಯದರ್ಶಿ ಅಶ್ರಫ್ ಮಂಚಿ ಉಪಸ್ಥಿತರಿದ್ದರು. ಯೂಸುಫ್ ಕಲ್ಲಡ್ಕ ವಂದಿಸಿದರು.

### ಎಸ್ಸೆಸ್ಸೆಲ್ಸಿ ಪ್ರತಿಭಾನ್ವಿತ



ಬಜ್ಪೆಯ ಪಾಪ್ಯುಲರ್ ಇಂಗ್ಲಿಷ್ ಮೀಡಿಯಂ ಶಾಲೆಯ ವಿದ್ಯಾರ್ಥಿ ಮುಹಮ್ಮದ್ ನಿಝಾರ್ ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.86.56 ಫಲಿತಾಂಶ ದಾಖಲಿಸಿದ್ದಾರೆ.

ಒಟ್ಟು 541 ಅಂಕ ಪಡೆದಿರುವ ಇವರು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇವರು ಮಯ್ಯದ್ದಿ ಹುಸೈನ್ ಮತ್ತು ಸಾರಮ್ಮ ದಂಪತಿಯ ಪುತ್ರ.

## ■ ಮುಲ್ಕಿ: ಕ್ಯಾಂಪಸ್ ಫ್ರಂಟ್‌ನಿಂದ ಮಾಹಿತಿ ಶಿಬಿರ

ಮುಲ್ಕಿ: ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ ಮುಲ್ಕಿ ವಲಯದ ವತಿಯಿಂದ 19-06-2011ರಂದು ಇಲ್ಲಿನ ದ.ಕ.ಜಿಲ್ಲಾ ಪಂಚಾಯತ್ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿ ವೇತನದ ಬಗ್ಗೆ ಮಾಹಿತಿ ಶಿಬಿರವನ್ನು ಆಯೋಜಿಸಲಾಗಿತ್ತು.

ಸಭೆಯನ್ನುದ್ದೇಶಿಸಿ ಮಾತನಾಡಿದ ವಿಜಯ ಕಾಲೇಜು ಪ್ರಾಂಶುಪಾಲ ಕೆ.ಆರ್.ಶಂಕರ್, ಇಂತಹ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಕ್ಯಾಂಪಸ್ ಫ್ರಂಟ್ ಒಂದು ಮಾದರಿ ವಿದ್ಯಾರ್ಥಿ ಚಳವಳಿ ಎಂಬುದನ್ನು ತೋರಿಸಿಕೊಟ್ಟಿದೆ. ಈ ಸಂದರ್ಭದಲ್ಲಿ ಅವರು ವಿಜಯ ಕಾಲೇಜಿನಲ್ಲಿ ಬಡ ಹಾಗೂ ಮೆರಿಟ್ ವಿದ್ಯಾರ್ಥಿಗಳಿಗೆ ಕೊಡುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು.



ಮುಲ್ಕಿ ಠಾಣೆಯ ಉಪ ನಿರೀಕ್ಷಕ ಮುನಿಸ್ವಾಮಿ ನೀಲಕಂಠನ್ ಮಾತನಾಡುತ್ತಾ, ಇದೊಂದು ಉತ್ತಮ ಕಾರ್ಯಕ್ರಮವಾಗಿದ್ದು, ತನ್ನ ವೃತ್ತಿ ಜೀವನದಲ್ಲಿ ಮೊದಲ ಬಾರಿಗೆ ಇಂತಹ ಕಾರ್ಯಕ್ರಮ ವೊಂದರಲ್ಲಿ ಪಾಲ್ಗೊಳ್ಳುತ್ತಿದ್ದೇನೆ ಎಂದು ಹೇಳಿದರು.

ಮಂಗಳೂರಿನ ಇನ್‌ಫಾರ್ಮೇಶನ್ ಆ್ಯಂಡ್ ಎಂಪವರ್‌ಮೆಂಟ್ ಸೆಂಟರ್‌ನ ಮುಖ್ಯ ಮಾಹಿತಿಗಾರ ಅಬ್ದುಲ್ ಖಾದರ್ ವಿದ್ಯಾರ್ಥಿ ವೇತನದ ಬಗ್ಗೆ ಸರಕಾರಿ ಹಾಗೂ ಸರಕಾರೇತರ ಸಂಸ್ಥೆಗಳು ನೀಡುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಿದರು.

ವೇದಿಕೆಯಲ್ಲಿ ಕ್ಯಾಂಪಸ್ ಫ್ರಂಟ್ ರಾಜ್ಯ ಪ್ರಧಾನ ಕಾರ್ಯದರ್ಶಿ ಇಮ್ರಾನ್ ಖಾನ್, ದ.ಕ.ಜಿಲ್ಲಾ ಕಾರ್ಯದರ್ಶಿ ಮುಹಮ್ಮದ್ ಹಬೀಬ್, ಸದಾಶಿವ ನಗರದ ದ.ಕ.ಜಿಪಂ.ಮಾ.ಹಿ.ಪ್ರಾ ಶಾಲೆಯ ಮುಖ್ಯೋಪಾಧ್ಯಾಯ ದಯಾನಂದ ಕೆ., ಶಾಲಾಭಿವೃದ್ಧಿ ಅಧ್ಯಕ್ಷ ಸದಾನಂದ ಸುವರ್ಣ, ಸ.ಪ.ಪೂ.ಕಾಲೇಜು ಮುಲ್ಕಿಯ ಹಿರಿಯ ಶಿಕ್ಷಕಿ ಸುಜಾತಾ ಕುಮಾರಿ, ನಗರ ಪಂಚಾಯತ್ ಅಧ್ಯಕ್ಷ ಬಿ.ಎಂ.ಆಸಿಫ್ ಉಪಸ್ಥಿತರಿದ್ದರು.

## ■ ಎಸ್‌ಡಿಪಿಐ ಸ್ಥಾಪನಾ ದಿನಾಚರಣೆ



ಶಿವಮೊಗ್ಗ: ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ ಎರಡನೆ ಸ್ಥಾಪನಾ ದಿನವನ್ನು ಜೂನ್ 21ರಂದು ಶಿವಮೊಗ್ಗದಲ್ಲಿ ಆಚರಿಸಲಾಯಿತು.

ಇದರ ಅಂಗವಾಗಿ ಪಕ್ಷದ ಕಾರ್ಯಕರ್ತರು ಆಸ್ಪತ್ರೆಗಳಿಗೆ ಭೇಟಿ ನೀಡಿ ರೋಗಿಗಳಿಗೆ ಫಲಾಹಾರ ಗಳನ್ನು ವಿತರಿಸಿದರು. ಪಕ್ಷದ ಜಿಲ್ಲಾಧ್ಯಕ್ಷ ಎಂ.ಬಾಲ ಸುಬ್ರಹ್ಮಣ್ಯಂ, ಉಪಾಧ್ಯಕ್ಷ ಇಜಾಝ್ ಪಾಶ ಮತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಮಜೀದ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ■ ಅಡ್ಯನಡ್ಕ: ನುಸ್ರತುಲ್ ಇಸ್ಲಾಂ ಯಂಗ್‌ಮೆನ್ಸ್‌ನಿಂದ ಪುಸ್ತಕ ವಿತರಣೆ

ನುಸ್ರತುಲ್ ಇಸ್ಲಾಂ ಯಂಗ್‌ಮೆನ್ಸ್ ಅಸೋಸಿಯೇಶನ್, ಅಡ್ಯನಡ್ಕ ಇದರ ವತಿಯಿಂದ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ವಿತರಣಾ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು. ಸುಮಾರು 105 ಆಯ್ದ ಬಡ ವಿದ್ಯಾರ್ಥಿಗಳಿಗೆ ಉಚಿತ ಶಾಲಾ ಪುಸ್ತಕ ಮತ್ತು ಸ್ಕಾಲರ್‌ಶಿಪ್‌ಗಳನ್ನು ನೀಡಲಾಯಿತು.

ಅಡ್ಯನಡ್ಕ ಮದ್ರಸಾ ಹಾಲ್‌ನಲ್ಲಿ ನಡೆದ ಈ ಕಾರ್‍ಯಕ್ರಮದ ಅಧ್ಯಕ್ಷತೆಯನ್ನು ಅಡ್ಯನಡ್ಕ ಜುಮ್ಮಾ ಮಸೀದಿಯ ಅಧ್ಯಕ್ಷರಾದ ಎ.ಪಿ. ಮಮ್ಮುಂಞಿ ವಹಿಸಿದ್ದರು. ಅಬ್ದುಲ್ಲಾ ಮುಸ್ಲಿಯಾರ್ ಸೋಮಂತಡ್ಕ ಇವರು ದುಆ ನೆರವೇರಿಸಿ, ಶಾಫಿ ದಾರಿಮಿ ಪಾಂಡವರಕಲ್ಲು ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಂಸ್ಥೆಯ ಕಾರ್ಯದರ್ಶಿ ಆದಂ ಝಿಯಾದ್ ಅಡ್ಯನಡ್ಕ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಮುಹಮ್ಮದ್ ಕುದ್ಕೋಳಿ, ಮರಕ್ಕಿಣಿ ಜಮಾಅತ್‌ನ ಕಾರ್ಯದರ್ಶಿ ಅಬೂಬಕರ್ ಕುದ್ದುಪದವು, ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

## ಪಾಪ್ಯುಲರ್ ಫ್ರಂಟ್‌ನಿಂದ ಸ್ಕಾಲರ್‌ಶಿಪ್

ಹೊಸದಿಲ್ಲಿ: ಪಿಯುಸಿ ವಿದ್ಯಾಭ್ಯಾಸ ಮುಗಿಸಿ ಉನ್ನತ ವಿದ್ಯಾಭ್ಯಾಸವನ್ನು ಪಡೆಯುವುದಕ್ಕೆ ಇಚ್ಛಿಸುವ ಬಡ ಹಾಗೂ ಮೆರಿಟ್ ವಿದ್ಯಾರ್ಥಿಗಳಿಗೆ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯು ಸ್ಕಾಲರ್‌ಶಿಪ್ ಪ್ರಕಟಿಸಿದೆ. ಸಂಘಟನೆಯು 2011-12ನೆ ಶೈಕ್ಷಣಿಕ ಸಾಲಿನಲ್ಲಿ ಸೇರ್ಪಡೆಗೊಳ್ಳಲು ಇಚ್ಛಿಸಿರುವ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಿದೆ.

ಈ ಸ್ಕಾಲರ್‌ಶಿಪ್ ವಿದ್ಯಾರ್ಥಿಗಳಿಗೆ ಬಡ್ಡಿ ರಹಿತ ಸಾಲವಾಗಿದೆ. ಅದರಂತೆ ವಿದ್ಯಾರ್ಥಿಗಳು ಉದ್ಯೋಗಕ್ಕೆ ಸೇರಿದ ನಂತರ ಅಥವಾ ಕೋರ್ಸು ಪೂರ್ತಿಗೊಳಿಸಿದ 2 ವರ್ಷಗಳ ನಂತರ ಸುಲಭ ಕಂತುಗಳಲ್ಲಿ ಸ್ಕಾಲರ್‌ಶಿಪ್‌ನ್ನು ಮರುಪಾವತಿಸತಕ್ಕದ್ದು. ಮುಂಬರುವ ಬಡ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನಿಧಿಯು ಆವರ್ತನಗೊಳ್ಳುತ್ತಿರಬೇಕೆಂಬ ಉದ್ದೇಶದಲ್ಲಿ ಮರುಪಾವತಿ ವ್ಯವಸ್ಥೆಯನ್ನು ರೂಪಿಸಲಾಗಿದೆ. ಉತ್ತಮ ಅಂಕಗಳಲ್ಲಿ 10+2 (ಪಿಯುಸಿ) ಪರೀಕ್ಷೆಯಲ್ಲಿ ಪಾಸಾದ ಮತ್ತು ಡಿಗ್ರಿ, ಡಿಪ್ಲೊಮಾ ಕೋರ್ಸುಗಳು ಮತ್ತು ಯಾವುದೇ ಉನ್ನತ ವಿದ್ಯಾಭ್ಯಾಸವನ್ನು ಪಡೆಯಲು ಇಚ್ಛಿಸುವ ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳು ಸ್ಕಾಲರ್‌ಶಿಪ್‌ಗೆ ಅರ್ಹರಾಗಿದ್ದಾರೆ. ಆದರೆ ಕೋರ್ಸಿನ ಅವಧಿಯು 2 ವರ್ಷಕ್ಕಿಂತ ಕಡಿಮೆಯಿರಬಾರದು. ಈ ವರ್ಷ ಸ್ಕಾಲರ್‌ಶಿಪ್ ದಿಲ್ಲಿ, ಹರಿಯಾಣ, ರಾಜಸ್ಥಾನ, ಪಶ್ಚಿಮ ಬಂಗಾಳ, ಮಣಿಪುರ, ಆಂಧ್ರ ಪ್ರದೇಶ, ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ವಿದ್ಯಾರ್ಥಿಗಳಿಗೆ ಮಾತ್ರ ಸೀಮಿತವಾಗಿದೆ ಎಂದು ಸಂಘಟನೆಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಶರೀಫ್ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಅಗತ್ಯದಾಖಲೆಗಳೊಂದಿಗೆ ಅರ್ಜಿಯನ್ನು 'ಪಾಪ್ಯುಲರ್ ಫ್ರಂಟ್ ಸ್ಕಾಲರ್‌ಶಿಪ್ ಯೋಜನೆ-2011'ರ ಸಂಬಂಧಿಸಿದ ರಾಜ್ಯ ಸಂಯೋಜಕರಿಗೆ ಈ ಕೆಳಗಿನ ವಿಳಾಸಕ್ಕೆ ಸಲ್ಲಿಸಬೇಕಾಗಿದೆ.

ವಿಳಾಸ: **Delhi:** G-66, 2nd Floor, Shaheen Bagh, Kalindikunj, Noida Rd, New Delhi – 110025

**Haryana:** G-66, 2nd Floor, Shaheen Bagh, Kalindikunj, Noida Rd, New Delhi – 110025

**Rajasthan:** 256, Near PNB Muslim school, Moti Doongri Road, Jaipur, Rajasthan

**West Bengal:** Kalikapur Station Road, Benia Bow, Sonarpur, South 24 PGS, West Bengal

**Manipur:** Lilong Lamkhai Masjid Road, Thoubal District, Manipur

**Andhra Pradesh:** No 56-88-C-4, Khander Street Fort, Kurnool, Andhra Pradesh

**Karnataka:** No. 5, SK Garden, Benson Town, Bangalore, Karnataka

**Tamilnadu:** 5th Floor, Modern Tower, West Cott Road, Royapettah, Chennai

**Kerala:** Unity House, Rajaji Road, Calicut, Kerala

ಅರ್ಜಿಗೆ ಕೊನೆಯ ದಿನಾಂಕ ಜುಲೈ 20, 2011. ಅರ್ಜಿ ಫಾರ್ಮ್ ಹಾಗೂ ವಿವರಗಳನ್ನು ಮೇಲಿನ ಕಚೇರಿಗಳಿಂದ ಅಥವಾ Download Application Form ವೆಬ್‌ಸೈಟ್‌ನಿಂದ ಸಂಗ್ರಹಿಸಬಹುದಾಗಿದೆ.

## ■ ಬಂಟ್ವಾಳ: 'ಇಸ್ಲಾಮನ್ನು ಅರಿಯಿರಿ' ಕಾರ್ಯಕ್ರಮ

ಬಂಟ್ವಾಳ: ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಬಂಟ್ವಾಳ ವಲಯದ ವತಿಯಿಂದ 'ಇಸ್ಲಾಮನ್ನು ಅರಿಯಿರಿ' ರಾಷ್ಟ್ರೀಯ ಅಭಿಯಾನದ ಅಂಗವಾಗಿ 'ಯಶಸ್ವಿ ಇಸ್ಲಾಮಿ ಜೀವನ' ಎಂಬ ವಿಷಯದಲ್ಲಿ ಸಾರ್ವಜನಿಕ ಕಾರ್ಯಕ್ರಮವು ಇತ್ತೀಚೆಗೆ ಇಲ್ಲಿನ ಸಜೀಪದ ಕೊಳಕೆಯಲ್ಲಿ ನಡೆಯಿತು.

ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಪಾಪ್ಯುಲರ್ ಫ್ರಂಟ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಕೆ.ಎಂ.ಶರೀಫ್, ಇಸ್ಲಾಮ್ ಜಗತ್ತಿನಲ್ಲಿ ಬದಲಾವಣೆಯ ಕ್ರಾಂತಿಯನ್ನುಂಟು ಮಾಡಿದ ಧರ್ಮವಾಗಿದೆ. ಇಸ್ಲಾಮನ್ನು ಜೀವನದಲ್ಲಿ ಅಳವಡಿಸಿಕೊಂಡರೆ ಯಶಸ್ವಿ ಜೀವನವನ್ನು ಸಾಗಿಸಬಹುದು ಎಂದರು. ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್‌ನ ದ.ಕ. ಜಿಲ್ಲಾ ಸಮಿತಿ ಸದಸ್ಯ ಇಬ್ರಾಹೀಂ ಖಲೀಲ್ ಅರ್ಷ್‌ಹರಿ ಕಾರ್ಯಕ್ರಮ ಉದ್ಘಾಟಿಸಿದರು. ಕಾರ್ಯ ಕ್ರಮದ ಅಧ್ಯಕ್ಷತೆಯನ್ನು ಅಬ್ದುಲ್ ರಹೀಂ ಆಲಾಡಿ ವಹಿಸಿದ್ದರು.

ಪಾಪ್ಯುಲರ್ ಫ್ರಂಟ್ ಬಂಟ್ವಾಳ ತಾಲೂಕು ಅಧ್ಯಕ್ಷ ಶಾಹುಲ್ ಹಮೀದ್ ಎಸ್.ಎಚ್, ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಮಹಮ್ಮದ್ ನಾಸೀರ್ ಸಜೀಪ, ಸ್ಥಳೀಯ ಗ್ರಾಮ ಪಂಚಾಯತ್ ಸದಸ್ಯ ಕೆ. ಬಶೀರ್, ಸಿದ್ದೀಕ್ ಪನಾಮಾ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ನಝೀರ್ ಸ್ವಾಗತಿಸಿ, ಇಜಾಝ್ ಎ.ಕೆ ವಂದಿಸಿದರು ಮತ್ತು ನಝೀರ್ ಬೋಳಂಗಡಿ ಕಾರ್ಯಕ್ರಮ ನಿರೂಪಿಸಿದರು.

## ■ಹುಣಸೂರಿನಲ್ಲಿ ವಿದ್ಯಾರ್ಥಿಗಳ ಹತ್ಯೆ: ಪಾಪ್ಯುಲರ್ ಫ್ರಂಟ್ ಖಂಡನೆ

ಬೆಂಗಳೂರು: ಹುಣಸೂರಿನಲ್ಲಿ ನಡೆದ ವಿದ್ಯಾರ್ಥಿಗಳ ಬರ್ಬರ ಹತ್ಯೆಯನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ತೀವ್ರವಾಗಿ ಖಂಡಿಸಿದೆ. ಪ್ರಕರಣವನ್ನು ಕೆಎಫ್‌ಡಿಗೆ ಜೋಡಿಸುವ ಸರಕಾರದ ಪ್ರಯತ್ನವು ಹಾಸ್ಯಾಸ್ಪದ ಎಂದು ಸಂಘಟನೆಯ ರಾಜ್ಯಾಧ್ಯಕ್ಷ ಇಲ್ಯಾಸ್ ಮುಹಮ್ಮದ್ ತುಂಬೆ ಹೇಳಿದ್ದಾರೆ.

ಮೈಸೂರಿನ.... ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹುಣಸೂರು ವಿದ್ಯಾರ್ಥಿಗಳ ಬರ್ಬರ ಹತ್ಯೆ ಪ್ರಕರಣವನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಅತ್ಯಂತ ಕಟು ಶಬ್ದಗಳಲ್ಲಿ ಖಂಡಿಸುತ್ತದೆ. ಈ ಪ್ರಕರಣದ ಆರೋಪಿಗಳನ್ನು ತಕ್ಷಣವೇ ಬಂಧಿಸಬೇಕೆಂದು ಆಗ್ರಹಿಸಿ ಹುಣಸೂರಿನಲ್ಲಿ ನಡೆದ ಪ್ರತಿಭಟನೆಗಳಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಕ್ರಿಯವಾಗಿ ಭಾಗವಹಿಸಿತ್ತು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಮಾಜಘಾತುಕ ಮತ್ತು ಕ್ರಿಮಿನಲ್ ಚಟುವಟಿಕೆಗಳನ್ನು ವಿರೋಧಿಸುತ್ತದೆ ಎಂದರು.

ಈ ಹತ್ಯಾ ಪ್ರಕರಣದ ಅಪರಾಧಿಗಳಿಗೆ ಕಠಿಣ ಶಿಕ್ಷೆಯನ್ನು ವಿಧಿಸುವುದರ ಮೂಲಕ ಸಂತ್ರಸ್ತ ಕುಟುಂಬಗಳಿಗೆ ನ್ಯಾಯವು ಒದಗಬಹುದೆಂದು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಭಾವಿಸುತ್ತದೆ'' ಎಂದು ಅವರು ತಿಳಿಸಿದರು.

ವಿದ್ಯಾರ್ಥಿಗಳ ಹತ್ಯಾ ಪ್ರಕರಣವನ್ನು ಕರ್ನಾಟಕ ರಾಜ್ಯ ಗೃಹ ಮಂತ್ರಿ ಮತ್ತು ಪೊಲೀಸ್ ಇಲಾಖೆಯು ಕರ್ನಾಟಕ ಫಾರಂ ಫಾರ್ ಡಿಗ್ನಿಟಿ ಸಂಘಟನೆಗೆ ಸಂಬಂಧ ಕಲ್ಪಿಸಲು ಯತ್ನಿಸುತ್ತಿರುವುದನ್ನು ಸಂಘಟನೆಯು ಬಲವಾಗಿ ಖಂಡಿಸುತ್ತದೆ. 2007 ಫೆಬ್ರವರಿ 17ರಂದು ಬೆಂಗಳೂರಿನ ಪ್ಯಾಲೆಸ್ ಗ್ರೌಂಡ್‌ನಲ್ಲಿ ನಡೆದ ಎಂಪವರ್ ಇಂಡಿಯಾ ಕಾನ್‌ಫರೆನ್ಸ್‌ನಲ್ಲಿ ಕರ್ನಾಟಕ ಫಾರಂ ಫಾರ್ ಡಿಗ್ನಿಟಿ ಸಂಘಟನೆಯು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯೊಂದಿಗೆ ವಿಲೀನಗೊಂಡಿದೆ. ಅಂದಿನಿಂದ ಕೆ.ಎಫ್.ಡಿ ಹೆಸರಿನಲ್ಲಿ ಯಾವುದೇ ರೀತಿಯ ಸಂಘಟನಾ ಚಟುವಟಿಕೆಗಳು ನಡೆಯುತ್ತಿಲ್ಲ. ಸಂಘಟನೆಗೆ ಹಣ ಸಂಗ್ರಹಿಸುವ ಉದ್ದೇಶದಿಂದ ಇಂತಹ ಕೃತ್ಯಗಳನ್ನು ಎಸಗಲಾಗಿದೆ ಎಂದು ಗೃಹಮಂತ್ರಿಯು ಮಾಡುವ ಆರೋಪವು ಅತ್ಯಂತ ನಿರಾಧಾರ ಹಾಗೂ ಹಾಸ್ಯಾಸ್ಪದವಾಗಿದೆ. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಜನಪರ ಸಂಘಟನೆಯಾಗಿದೆ. ಗೃಹಮಂತ್ರಿಯವರು ನೀಡುವ ಇಂತಹ ಹೇಳಿಕೆಯು, ರಾಜ್ಯ ಸರಕಾರವು ಭ್ರಷ್ಟಾಚಾರ ಮತ್ತಿತರ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿರುವುದರಿಂದ ಇದು ಜನರ ಮನಸ್ಸನ್ನು ಬೇರೆಡೆಗೆ ಸೆಳೆಯುವ ತಂತ್ರವಾಗಿದೆ ಎಂದು ಅವರು ಹೇಳಿದ್ದಾರೆ.

ಇಂತಹ ಹೀನ ಕೃತ್ಯಗಳಲ್ಲಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ ಸದಸ್ಯರು ಭಾಗಿಯಾಗಿದ್ದಾರೆ ಎನ್ನುವುದನ್ನು ಸಂಘಟನೆಯು ನಿರಾಕರಿಸುತ್ತದೆ. ನಮ್ಮ ಸಂಘಟನೆಯ ಸದಸ್ಯರಿಗೆ ನಿಯಮಿತವಾಗಿ ನೈತಿಕ ಮೌಲ್ಯಗಳು ಹಾಗೂ ಮಾನವೀಯ ಸೇವೆಗಳ ಬಗ್ಗೆ ತರಬೇತಿಯನ್ನು ನೀಡಲಾಗುತ್ತಿದೆ. ಆದಾಗ್ಯೂ ಯಾವುದೇ ಒಬ್ಬ ಸದಸ್ಯ ಇಂತಹ ಕ್ರಿಮಿನಲ್ ಮತ್ತು ಸಮಾಜ ಘಾತುಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದು ಕಂಡುಬಂದಲ್ಲಿ ಅಂತಹ ಸದಸ್ಯನ ವಿರುದ್ಧ ಅತ್ಯಂತ ಕಠಿಣ ಶಿಸ್ತು ಕ್ರಮವನ್ನು ಕೈಗೊಳ್ಳುವುದಕ್ಕೆ ಸಂಘಟನೆಯು ಹಿಂಜರಿಯುವುದಿಲ್ಲ. ಘಟನೆಯ ತನಿಖೆಯು ಆರಂಭಿಕ ಹಂತದಲ್ಲಿದ್ದು, ತನಿಖೆಗೆ ಪೊಲೀಸರೊಂದಿಗೆ ಸಹಕರಿಸಲು ಸಂಘಟನೆಯು ಸಂಪೂರ್ಣ ಸಿದ್ಧವಾಗಿದೆ ಎಂದವರು ತಿಳಿಸಿದರು.

ಸಮಾಜದ ದುರ್ಬಲ ಮತ್ತು ಶೋಷಿತ ವರ್ಗಗಳ ಸಬಲೀಕರಣಕ್ಕಾಗಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಟಿಬದ್ಧವಾಗಿದೆ ಹಾಗೂ ಈ ಉದಾತ್ತ ಧ್ಯೇಯವನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಸಂಘಟನೆಯು ಯಾವತ್ತೂ ಮುಂದುವರಿಸುತ್ತದೆ ಎಂದು ಅವರು ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಿಯಾಝ್ ಪಾಶ, ರಾಜ್ಯ ಕಾರ್ಯದರ್ಶಿ ನಾಸಿರ್ ಪಾಶ, ಮೈಸೂರು ಜಿಲ್ಲಾಧ್ಯಕ್ಷ ಮುಹಮ್ಮದ್ ಅತಾವುಲ್ಲಾ ಉಪಸ್ಥಿತರಿದ್ದರು.

## ■ಪಾವೂರಿನಲ್ಲಿ ನೀರಿನ ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ

ಮಂಗಳೂರು: ಎಸ್‌ಡಿಪಿಐ, ಪಾವೂರು ಘಟಕದ ವತಿಯಿಂದ ನೀರಿನ ಬೆಲೆಯೇರಿಕೆ ವಿರೋಧಿಸಿ ಇತ್ತೀಚೆಗೆ ಪಾವೂರು ಗ್ರಾಮ ಪಂಚಾಯತ್ ಮುಂದೆ ಪ್ರತಿಭಟನೆ ನಡೆಯಿತು.

ಪಾವೂರು ಗ್ರಾಮ ಪಂಚಾಯತ್ ಸಮಿತಿ ಸದಸ್ಯ ಅಬ್ಬಾಸ್ ಅಕ್ಷರ ನಗರ ಪ್ರತಿಭಟನೆಯ ನೇತೃತ್ವ ವಹಿಸಿದ್ದರು.



ಸ್ಥಳೀಯ ಎಸ್‌ಡಿಪಿಐ ನಾಯಕ ಹಾರಿಸ್ ಮಲಾರ್, ಜಿಲ್ಲಾ ಸಮಿತಿ ಸದಸ್ಯ ಮುಹಮ್ಮದ್ ಯು.ಬಿ, ಮಂಗಳೂರು ವಿಧಾನಸಭಾ ಕ್ಷೇತ್ರ ಸಮಿತಿಯ ಪ್ರಧಾನ ಕಾರ್ಯದರ್ಶಿ ನೌಶಾದ್ ಕಿನ್ಯ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು. ರಹೀಮ್ ಮಲಾರ್ ವಂದಿಸಿದರು.